ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 9 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 291 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ ಸೋಮವಾರ 9 ಫೆಬ್ರವರಿ 2026

ಕಾರ್ಮಿಕ ಸಂಹಿತೆಗಳ ಕಠಿಣ ನಿಯಮ ವಿರೋಧಿಸಿ

ಕೇಂದ್ರ ಕಾರ್ಮಿಕ ಸಂಘಟನೆಯ ಕರೆ ಮೇರೆಗೆ ಮೈಸೂರಲ್ಲೂ ಫೆ.12ರಂದು ಕಾರ್ಮಿಕರ ಮುಷ್ಕರ

- ಕಾರ್ಮಿಕರು ಸಾಮೂಹಿಕ ರಜೆ ಹಾಕಿ ಪ್ರತಿಭಟನೆಯಲ್ಲಿ ಭಾಗಿ
- ಪ್ರತಿಭಟನಾ ರ್‍ಯಾಲಿ, ಸಮಾವೇಶ

ಮೈಸೂರು,ಫೆ.8(ಜಿಎ)–ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಜಾರಿಗೊಳಿಸಿರುವ 4 ಕಾರ್ಮಿಕ ಸಂಹಿತೆಗಳ ಕಠಿಣ ನಿಯಮಗಳನ್ನು ವಿರೋಧಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಫೆ.12ರ ಮುಷ್ಕರಕ್ಕೆ ಮೈಸೂರಿನಲ್ಲಿಯೂ ಕಾರ್ಮಿಕರು ಸಮೂಹಿಕ ರಜೆ ಹಾಕಿ ಪಾಲ್ಗೊಳ್ಳಲಿದ್ದಾರೆ. ಅಂದು ನಗರದಲ್ಲಿಯೂ ಪ್ರತಿಭಟನಾ ರ್‍ಯಾಲಿ ಹಾಗೂ ಸಮಾವೇಶ ನಡೆಯಲಿವೆ ಎಂದು ಎಐಟಿಯುಸಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯ ಭಾಸ್ಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 10 ಗಂಟೆಗೆ ನಗರದ ಗಾಂಧಿ ಚೌಕದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ನಡೆಯಲಿದ್ದು, ಇದಕ್ಕೂ ಮುನ್ನ ನಗರದ ವಿವಿಧೆಡೆಯಿಂದ ಕಾರ್ಮಿಕರು, ರೈತರು, ಅಂಗನವಾಡಿ ಫೆಡರೇಷನ್, ಬಿಸಿಯೂಟ ನೌಕರರ ಫೆಡರೇಷನ್ ಮೊದಲಾದವುಗಳು ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನಾ ರ್‍ಯಾಲಿ ಸಮಾವೇಶಕ್ಕೂ ಮೊದಲು ಗಾಂಧಿ ಚೌಕ ತಲುಪಲಿದೆ ಎಂದರು.

ಕೇಂದ್ರದ 4 ಕಾರ್ಮಿಕ ಸಂಹಿತೆಗಳಿಗೆ ಮೊದಲಿನಿಂದಲೂ ಕಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸುತ್ತಿದ್ದರೂ, ಪರಿಗಣಿಸದೆ ಕೇಂದ್ರ ಅದನ್ನು ಜಾರಿಗೊಳಿಸಿದೆ. ಇದು ಕಾರ್ಪೊರೇಟ್ ಕಂಪನಿಗಳ ಪರವಾಗಿದ್ದು, ರಾಜ್ಯ ಸರ್ಕಾರಗಳು ಸಹಾ ಜಾರಿಗೊಳಿಸಬೇಕೆಂದು ಒತ್ತಡ ಹೇರಲಾಗುತ್ತಿದೆ. ಇದೇ ವೇಳೆ ಮನರೇಗಾದಲ್ಲಿದ್ದ ಕೆಲಸ ಮಾಡುವ ಹಕ್ಕನ್ನು ದುರ್ಬಲಗೊಳಿಸಿ, ಕಾಮಗಾರಿ ಕೈಗೊಳ್ಳಬೇಕಾದ ಗ್ರಾಪಂ ಅಧಿಕಾರ ದುರ್ಬಲಗೊಳಿಸಿ, ಕೇಂದ್ರವೇ ಕಾಮಗಾರಿ ನಿರ್ಧರಿಸುವಂತೆ ಮಾಡುವ ವಿಬಿ ಜಿ ರಾಮ್‌ಜಿ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ಇದನ್ನು ಸಹಾ ಮುಷ್ಕರದ ವೇಳೆ ವಿರೋಧಿಸಲಾಗುವುದು ಎಂದು ತಿಳಿಸಿದರು.

ಸ್ಕೀಂ ನೌಕರರ ಬೇಡಿಕೆ ಈಡೇರಿಸಬೇಕು, ಮನರೇಗಾ ಪುನರ್ ಸ್ಥಾಪಿಸಬೇಕು, ಎಲ್ಲ 4 ಕಾರ್ಮಿಕ ಸಂಹಿತೆ ರದ್ದುಗೊಳಿಸಬೇಕು, ರಾಜ್ಯದಲ್ಲಿ ಕನಿಷ್ಠ ವೇತನ 41 ಸಾವಿರ ರೂ.ಗೆ ಪರಿಷ್ಕರಿಸಬೇಕು, ಎಲ್ಲ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ಮೇಲಿನ ಮಿತಿ ರದ್ದುಗೊಳಿಸಬೇಕು, ಸಾರ್ವಜನಿಕ ವಲಯದ ಘಟಕಗಳ ಬಂಡವಾಳ ಹಿಂತೆಗೆತ, ಖಾಸಗೀಕರಣ ನಿಲ್ಲಿಸಬೇಕು, ಸ್ಕೀಂ ಕಾರ್ಮಿಕರನ್ನು ಸರ್ಕಾರಿ ನೌಕರರನ್ನಾಗಿ ಕ್ರಮ ಬದ್ಧಗೊಳಿಸಬೇಕು, ಗಿಗ್ ಕಾರ್ಮಿಕರಿಗೆ ಆರ್ಥಿಕ, ಸಾಮಾಜಿಕ ಭದ್ರತೆ ಒದಗಿಸಬೇಕು ಮೊದಲಾದ ಬೇಡಿಕೆ ಈಡೇರಿಕೆಗೆ ಒತ್ತಾಯಿಸಲಾಗುವುದು. ನಗರದಲ್ಲಿನ ಅಂದಿನ ಸಮಾವೇಶಕ್ಕೆ 2000ಕ್ಕೂ ಹೆಚ್ಚು ಕಾರ್ಮಿಕರು ಪಾಲ್ಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕಾರ್ಮಿಕ ಮುಖಂಡರಾದ ಎಚ್.ಬಿ. ರಾಮಕೃಷ್ಣ, ಕೆ.ಜಿ.ಸೋಮರಾಜೇ ಅರಸ್, ವೈ.ಮಹದೇವಮ್ಮ, ಜೆ.ಪದ್ಮ ಉಪಸ್ಥಿತರಿದ್ದರು.

ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನ್ ಸೊಸೈಟಿಯಿಂದ ಸಾಮಾಜಿಕ ಪರಿವರ್ತನಾ ಪ್ರೇರಕರ ವೇದಿಕೆ ಉದ್ಘಾಟನೆ



ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನ್ ಸೊಸೈಟಿ ಮೈಸೂರು ವತಿಯಿಂದ ಸಾಮಾಜಿಕ ಪರಿವರ್ತನಾ ಪ್ರೇರಕರ ವೇದಿಕೆ ಉದ್ಘಾಟನೆ, ವಾರ್ಷಿಕ ಸಮಾವೇಶ ನಡೆಯಿತು.

ಮೈಸೂರು, ಫೆ.8(ಎಂಕೆ)– ಮೈಸೂರಿನ ಬೋಗಾದಿಯಲ್ಲಿರುವ ಮರಿಯಾ ನೀಕೇತನ ಶಾಲೆಯಲ್ಲಿ ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನ್ ಸೊಸೈಟಿ ಮೈಸೂರು ಪ್ರಾಂತ್ಯದ ವತಿಯಿಂದ ಸಾಮಾಜಿಕ ಪರಿವರ್ತನಾ ಪ್ರೇರಕರ ವೇದಿಕೆ ಉದ್ಘಾಟನೆ ಹಾಗೂ ವಾರ್ಷಿಕ ಸಮಾವೇಶ ನಡೆಯಿತು.

ಸಮಾವೇಶ ಉದ್ಘಾಟಿಸಿದ ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಸಿಸ್ಟರ್ ಫಿಲೋಮಿನಾ ನೋರೋನ್ಹ ಮಾತನಾಡಿ, ವಿದ್ಯಾರ್ಥಿಗಳು ಕಷ್ಟದ ಸಂದರ್ಭಗಳನ್ನು ಎದುರಿಸುವ ಆತ್ಮವಿಶ್ವಾಸದ ಗುಣ ಬೆಳೆಸಿಕೊಳ್ಳಬೇಕು. ಸಮಾಜದ ಬದಲಾವಣೆಗೆ ಪ್ರೇರಕ ಶಕ್ತಿಗಳಾಗಿ ಬೆಳೆಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಉಪ ಕಾರ್ಯದರ್ಶಿ ಸಿಸ್ಟರ್ ಜೆಸಿಂತಾ ಪಿರೇರಾ ಮಾತನಾಡಿ, ಮಕ್ಕಳಲ್ಲಿ ನಾಯಕತ್ವದ ಗುಣ ಬೆಳೆಯಬೇಕು. ಈ ನಿಟ್ಟಿನಲ್ಲಿ ಅಗತ್ಯ ಶಿಕ್ಷಣ ನೀಡಬೇಕು. ಅವರನ್ನು ಜವಾಬ್ದಾರಿಯುಳ್ಳ ನಾಗರಿಕರನ್ನಾಗಿ ರೂಪಿಸಬೇಕು ಎಂದರು. ಸಮಾಜ ಸೇವಕರಾದ ಇಮ್ಯಾನಿವಲ್, ಪ್ರಧಾನ ಸಂಯೋಜಕಿ ಸಿಸ್ಟರ್ ಡಿಂಪಲ್ ಡಿಸೋಜ, ಮೈಸೂರು ಪ್ರಾಂತ್ಯದ ಕೋಆರ್ಡಿನೇಟರ್‌ಗಳಾದ ಸಿಸ್ಟರ್ ಮಿಲಾಗ್ರಿನ್, ಸಿಸ್ಟರ್ ಬಿಂದು ಎಲಿಜಬೆತ್ ಇದ್ದರು.

ಪಿಂಕ್ ಶೌಚಾಲಯದ ಸಮಸ್ಯೆ ಬಗೆಹರಿಸಲು ಆಗ್ರಹ




ಮೈಸೂರು, ಫೆ.8–ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಮಹಿಳೆಯರ (ಪಿಂಕ್) ಶೌಚಾಲಯದ ಸಮಸ್ಯೆಯನ್ನು ಬಗೆಹರಿಸಿ ಸಾರ್ವಜನಿಕರ ಅನುಕೂಲಕ್ಕೆ ನೀಡಿ ಎಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

ಸ್ವಚ್ಛ ಮೈಸೂರಿನ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುವ ಮೈಸೂರಿನ ಮಹಾನಗರಪಾಲಿಕೆ 2023ರ ಮಾರ್ಚ್ 18ರಂದು ಉದ್ಘಾಟಿಸಿದ ಮಹಿಳೆಯರ (ಪಿಂಕ್) ಶೌಚಾಲಯವು ಯಾವ ಪ್ರಯೋಜನಕ್ಕೂ ಬಾರದೇ ಬೀಗ ಹಾಕಿದ ಸ್ಥಿತಿಯಲ್ಲಿ ನಿಂತಿದೆ. ಲಕ್ಷಾಂತರ ರೂಪಾಯಿ ಹಣವನ್ನು ಖರ್ಚು ಮಾಡಿ ಬೀಗ ಹಾಕಲು ಸಾರ್ವಜನಿಕರ ಹಣ ಪೋಲು ಮಾಡಬೇಕಿತ್ತೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಪ್ರಶ್ನಿಸಿದ್ದಾರೆ.

ಶೌಚಾಲಯದಲ್ಲಿ ನೀರು ಇಲ್ಲಾ ಎಂದು ಬೀಗ ಹಾಕಲು ಕಟ್ಟಬೇಕಿತ್ತೆ ಅಥವಾ ಮೈಸೂರಿನಂಥ ನಗರಪಾಲಿಕೆಗೆ ನೀರು ಒದಗಿಸಲು ಸಾಧ್ಯವಿಲ್ಲವೇ? ಯಾಕೆ ಈ ನಿರ್ಲಕ್ಷಿಸುವ ಮನೋಭಾವ, ತಿಳಿಯುತ್ತಿಲ್ಲ. ಸುಮಾರು ಮಹಿಳೆಯರು ಬೀಗ ಹಾಕಿದ್ದು ನೋಡಿ ವಾಪಸ್ ಹೋಗುತ್ತಿದ್ದಾರೆ. ಮತ್ತೊಂದು ಬೇಸರದ ಸಂಗತಿ ಯೆಂದರೆ ಇದರ ಮುಂಭಾಗವಿರುವ ಅಂಬೇಡ್ಕರ್ ಭವನದ ಕಾಂಪೌಂಡಿಗೆ ಜನರು ಮೂತ್ರ ವಿಸರ್ಜನೆ ಮಾಡಿ ಹೋಗುತ್ತಿದ್ದಾರೆ. ಈ ಎರಡೂ ಸಮಸ್ಯೆಗಳನ್ನು ಮಹಾನಗರ ಪಾಲಿಕೆ ಆಯುಕ್ತರು, ಸಂಬಂಧಪಟ್ಟ ಶಾಸಕರು ಗಮನಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.


ನಿಧನ

ರಾಮಮ್ಮ




ಮೈಸೂರು, ಫೆ.8–ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಶೀಳನೆರೆ ಗ್ರಾಮದ ಛೇರ್ಮನ್ ಸಿದ್ದೇಗೌಡ ಅವರ ಪತ್ನಿ ರಾಮಮ್ಮ(76) ಶನಿವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಸೊಸೆಯಂದಿರು, ಅಳಿಯಂದಿರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸಂಜೆ ಶೀಳನೆರೆಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇಬಲ್ ಸತೀಶ್



ಮೈಸೂರು,ಫೆ.8– ನಜರ್‌ಬಾದ್ ನಿವಾಸಿ ಕೇಬಲ್ ಸತೀಶ್ (ಎಂ.ವಿ.ಸತೀಶ್) ಹೃದಯಾಘಾತದಿಂದ ಭಾನುವಾರ ನಿಧನರಾದರು. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ–ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಗೋವಿಂದರಾಜು



ಮೈಸೂರು, ಫೆ.8– ಮೈಸೂರಿನ ಮಹದೇವಪುರ ನಿವಾಸಿ, ಕೆಎಸ್‌ಆರ್‌ಟಿಸಿ ನಿವೃತ್ತ ಅಧಿಕಾರಿ ಎಂ.ಗೋವಿಂದರಾಜು(69) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಮಹದೇವಪುರ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಹಾರಾಜ ಕಾಲೇಜು ಹಿರಿಯ ವಿದ್ಯಾರ್ಥಿಗಳ 'ನೆಬೆ 40 ಸಮ್ಮಿಲನ' ಕಾರ್ಯಕ್ರಮ

ಕಾಲೇಜಿನ ಅಂದಿನ ದಿನಗಳನ್ನು ಸ್ಮರಿಸಿದ ವಿದ್ಯಾರ್ಥಿಗಳು



ಮೈಸೂರಿನ ಮಹಾರಾಜ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ 'ನೆಳಲು ಬೆಳಕು' ತಂಡವು ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ನಡೆದ 'ನೆಬೆ 40 ಸಮ್ಮಿಲನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮಿಸಿತು.

ಮೈಸೂರು, ಫೆ.8(ಜಿಎ)–ಮೈಸೂರಿನ ಮಹಾರಾಜ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ 'ನೆಳಲು ಬೆಳಕು' ತಂಡದಿಂದ ದೇಶ–ವಿದೇಶಗಳಲ್ಲಿ ನೆಲೆಸಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹಳೆಯ ವಿದ್ಯಾರ್ಥಿಗಳು ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ನಡೆದ 'ನೆಬೆ 40 ಸಮ್ಮಿಲನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಹಿರಿಯ ವಿದ್ಯಾರ್ಥಿಗಳು ಪಾಲ್ಗೊಂಡು ಅಂದಿನ ದಿನಗಳಲ್ಲಿ ತಾವು ಕಂಡ ಮಹಾರಾಜ ಕಾಲೇಜು, ಸ್ವಪ್ರೇರಿತರಾಗಿ ನೆಬೆ ತಂಡ ರಚಿಸಿಕೊಂಡು ನಾಟಕ, ಸಾಹಿತ್ಯ, ಕಲೆ, ಜಾನಪದ ಮೊದಲಾದ ಕ್ಷೇತ್ರಗಳಲ್ಲಿ ವಿವಿಧ ಚಟುವಟಕೆಗಳಲ್ಲಿ ತೊಡಗಿಕೊಂಡಿದ್ದುದು, ತಮ್ಮ ವ್ಯಕ್ತಿತ್ವ ವಿಕಸನಕ್ಕೆ ಈ ತಂಡ ಹೇಗೆ ನೆರವಾಯಿತು, ಶತಮಾನೋತ್ಸವ ಭವನದ ಎದುರಿನ ಪಾರ್ಕ್‌ನಲ್ಲಿ ಕುಳಿತು ಚರ್ಚಿಸುತ್ತಿದ್ದ ಸುಮಧುರ ನೆನಪುಗಳನ್ನು ಮೆಲುಕು ಹಾಕಿದರು.

ಈ ಕಾರ್ಯಕ್ರಮವನ್ನು ಕೇವಲ ತಮ್ಮ ಸಡಗರ ಸಂಭ್ರಮಕ್ಕೆ ಮಾತ್ರ ಮೀಸಲಿಡದೇ ಮಹಾರಾಜ ಕಾಲೇಜಿನಲ್ಲಿ ಸಾಂಸ್ಕೃತಿಕ, ಸಾಹಿತ್ಯಕ, ರಂಗಭೂಮಿ ಮೊದಲಾದ ಚಟುವಟಿಕೆಗಳಿಗೆ ಮಾರ್ಗದರ್ಶನ ತರಬೇತಿ ನೀಡುವ ಮೂಲಕ ಕಾಲೇಜು ಈ ಕ್ಷೇತ್ರಗಳಲ್ಲಿ ಇನ್ನಷ್ಟು ಉತ್ತುಂಗಕ್ಕೆ ಏರುವಂತೆ ನೆರವಾಗುವ ಉದ್ದೇಶದಿಂದ ಕಾಲೇಜಿನ ಆಡಳಿತಾಧಿಕಾರಿ ಡಾ.ಹೆಚ್.ಟಿ. ರಾಮಚಂದ್ರು, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಡಿ. ವಿಜಯಲಕ್ಷ್ಮಿ ಹಾಗೂ ಈ ಕ್ಷೇತ್ರಗಳಲ್ಲಿ ಆಸಕ್ತಿ ಇರುವ ಹಲವಾರು ವಿದ್ಯಾರ್ಥಿಗಳನ್ನೂ ಆಹ್ವಾನಿಸಿ, ಸಲಹೆ ಪಡೆಯಲಾಯಿತು.

ಈ ವೇಳೆ ತಂಡದ ಹಿರಿಯ ಸದಸ್ಯ ಡಾ.ಎನ್.ವಿ.ವಾಸುದೇವ ಶರ್ಮ ಮಾತನಾಡಿ, ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಜೊತೆ ಗೂಡಿ ಸಾಂಸ್ಕೃತಿಕ ಕಲೆಗಳ ಕುರಿತು ವಿವಿಧ ಕಾರ್ಯಕ್ರಮ ಆಯೋಜನೆ, ಮುಂದಿನ ದಿನಗಳಲ್ಲಿ ಕಾಲೇಜಿನಲ್ಲಿ ನಿರ್ದಿಷ್ಟ ವಿಷಯ, ವಿಚಾರಗಳ ಕುರಿತು ಕಾರ್ಯಾಗಾರ, ಸ್ಪರ್ಧೆಗಳ ಆಯೋಜನೆಗೆ ವಿದ್ಯಾರ್ಥಿಗಳು ಆಸಕ್ತಿ ತೋರಿಸಿರುವುದು ಸಂತಸ ತುಂದಿದೆ. ಇದಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಮತ್ತೋರ್ವ ಹಿರಿಯ ಸದಸ್ಯ ಹಿರಿಯ ರಂಗಕರ್ಮಿ ಶಶಿಧರ ಭಾರೀಘಾಟ್ ಮಾತನಾಡಿ, ವಿದ್ಯಾರ್ಥಿಗಳು ಉತ್ಸಾಹ ತೋರಿದರೆ ಮಾರ್ಗದರ್ಶನಕ್ಕೆ ನಾವು ಸಿದ್ಧ, ನೆಬೆ ತಂಡದ ಅನೇಕರು ಈಗಾಗಲೇ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದು, ಹಲವರು ಮೈಸೂರಿನಲ್ಲಿ, ಇನ್ನಿತರೆಡೆ ಇದ್ದಾರೆ. ಇವರು ವಿದ್ಯಾರ್ಥಿಗಳಿಗೆ ಸೂಕ್ತವಾದ ದಿನ ಆಗಮಿಸಿ ತರಬೇತಿಯಂತಹ ನೆರವು ನೀಡಲಿದ್ದಾರೆಂದರು.

ಈ ವೇಳೆ ಹಿರಿಯ ರಂಗಕರ್ಮಿ ಹೆಚ್.ಎಸ್.ಉಮೇಶ್ ಮಾತನಾಡಿ, ನಮ್ಮನ್ನು ಹೊಸ ಹುರುಪಿಗೆ ಒಡ್ಡಿಕೊಳ್ಳಲು ರಂಗಭೂಮಿ ಚಟುವಟಿಕೆ ಅತ್ಯಗತ್ಯ ಈ ರೀತಿಯ ಚಟುವಟಿಕೆಯಲ್ಲಿ ಒಂದೊಮ್ಮೆ ತೊಡಗಿಕೊಂಡಲ್ಲಿ ಮುಂದಿನ ದಿನಗಳಲ್ಲಿ ಅಂದಿನ ತಲೆಮಾರಿನೊಡನೆ ಅನುಭವ ಹಂಚಿಕೊಂಡು ನೆರವಾಗಬಹುದಾಗಿದೆ. ನಂತರವೂ ಸಿಹಿ ಅನುಭವ ಮೆಲುಕು ಹಾಕುವುದು ಜೀವನೋತ್ಸಾಹ ಹೆಚ್ಚಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರೊ.ಎ.ಎಂ. ಶಿವಸ್ವಾಮಿ, ಎಂ.ಟಿ.ಮಹಾದೇವ್, ಆನಂದರಾಜೇ ಅರಸ್, ಡಿ.ಜಿ. ಸುಮತಿ, ಬಿಂದು ಪಟೇಲ್, ಅಶ್ವತ ನಾರಾಯಣ, ಡಾ.ಸುಜಾತಾ ಭಾಸ್ಕರ್, ಹಸ್ನಾ ಜೈನ್, ಬಿ.ಮಹೇಶ್ ಹರವೆ ಸೇರಿದಂತೆ ಸುಮಾರು 50 ಮಂದಿ ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬೃಹತ್ ಮೈಸೂರು ನಗರಪಾಲಿಕೆ ಅಧಿಸೂಚನೆ ಹಿಂಪಡೆಯಲು ಮೈಸೂರು ಪ್ರಜ್ಞಾವಂತರ ಆಗ್ರಹ



'ಬೃಹತ್ ಮೈಸೂರು ಮಹಾನಗರಪಾಲಿಕೆ' ಅಧಿಸೂಚನೆ ಹಿಂಪಡೆಯುವಂತೆ ಮೈಸೂರಿನ ಪ್ರಜ್ಞಾವಂತ ನಾಗರಿಕರು, ನಾಗರಿಕ ಸಮಾಜದ ಸಂಘಟನೆಗಳ ಒಕ್ಕೂಟದ ವತಿಯಿಂದ ಆಕ್ಷೇಪಣೆ ಸಲ್ಲಿಸಲಾಯಿತು.

ಮೈಸೂರು,ಫೆ.8(ಎಂಕೆ)– ಅವೈಜ್ಞಾನಿಕ ಹಾಗೂ ಜನ ಸಹಭಾಗಿತ್ವವಿಲ್ಲದ 'ಬೃಹತ್ ಮೈಸೂರು ಮಹಾ ನಗರ ಪಾಲಿಕೆ' ಅಧಿಸೂಚನೆಯನ್ನು ರಾಜ್ಯ ಸರ್ಕಾರ ಹಿಂಪಡೆಯುವಂತೆ ಮೈಸೂರಿನ ಪ್ರಜ್ಞಾವಂತ ನಾಗರಿಕರು ಮತ್ತು ನಾಗರಿಕ ಸಮಾಜದ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರಾಭಿವೃದ್ಧಿ ಇಲಾಖೆಯ ಪೌರಾಡಳಿತ ನಿರ್ದೇಶನಾಲಯದ ಸಹಾಯಕ ನಿರ್ದೇಶಕಿ ಕೆ.ಡಿ.ಶೈಲಾ ಅವರಿಗೆ ಆಕ್ಷೇಪಣೆ ಸಲ್ಲಿಸಲಾಯಿತು.


ಗ್ರಾಮ ಸಭೆ ಮತ್ತು ವಾರ್ಡ್ ಸಮಿತಿಗಳ ಕಡೆಗಣನೆ, ಮಾಸ್ಟರ್ ಪ್ಲಾನ್ ಅಲಭ್ಯ, ಮೈಸೂರು ನಗರ ಎದುರಿಸುತ್ತಿರುವ ನೀರಿನ ಅಭಾವ, ಒಳಚರಂಡಿ ಅವ್ಯವಸ್ಥೆ, ಸಂಚಾರ ದಟ್ಟಣೆ ಮತ್ತು ಘನತ್ಯಾಜ್ಯ ವಿಲೇವಾರಿಯಂತಹ ಸಮಸ್ಯೆಗಳನ್ನು ಬಗೆಹರಿಸದೆ ನಗರ ವಿಸ್ತರಣೆ ಮುಂದಾಗಿರುವುದು ಸರಿಯಲ್ಲ. ಅವೈಜ್ಞಾನಿಕವಾಗಿ ಬೃಹತ್ ಮೈಸೂರು ಮಹಾ ನಗರಪಾಲಿಕೆ ಮಾಡುವುದರಿಂದ ನೀರಿನ ಅಭದ್ರತೆ ಸೃಷ್ಟಿಸುವುದಲ್ಲದೆ ಚಾಮುಂಡಿ ಬೆಟ್ಟ ಮತ್ತು ಪರಿಸರ ಸೂಕ್ಷ್ಮ ವಲಯಗಳಿಗೆ ಅಪಾಯ ತರಲಿದೆ. ಹಾಗಾಗಿ ಕೂಡಲೇ ಬೃಹತ್ ಮಹಾನಗರ ಪಾಲಿಕೆ ಪ್ರಸ್ತಾವನೆ ಕೈ ಬಿಡಬೇಕು ಎಂದು ಕೋರಲಾಯಿತು.

ಮೈಸೂರು ಗ್ರಾಹಕರ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಡಾ.ಭಾಮಿ ವಿ ಶೆಣೈ ಮಾತನಾಡಿ, ಬೃಹತ್ ಮೈಸೂರು ಮಹಾನಗರಪಾಲಿಕೆ ಯೋಜನೆಯಲ್ಲಿ ಪರಿಸರದ ಮೇಲೆ ಬೀರುವ ಪರಿಣಾಮಗಳ ಮೌಲ್ಯಮಾಪನ ನಡೆದಿಲ್ಲ. ಅಗತ್ಯ ಮುನ್ನೆಚ್ಚರಿಕೆಗಳಿಲ್ಲದೆ ಅಧಿಸೂಚನೆ ಹೊರಡಿಸಿರುವುದರಿಂದ ಕೆರೆಗಳು, ಹಸಿರು ಪ್ರದೇಶಗಳು, ವನ್ಯಜೀವಿ ಕಾರಿಡಾರ್‌ಗಳ ಮೇಲೆ ಪರಿಣಾಮ ಬೀರಲಿದೆ ಎಂದರು.

ಬಿಜೆಪಿ ಮುಖಂಡ ಹಾಗೂ ನರರೋಗ ತಜ್ಞ ಡಾ.ಸುಶ್ರುತಗೌಡ ಮಾತನಾಡಿ, ಮೈಸೂರು ಅಭಿವೃದ್ಧಿಗೆ ನಮ್ಮ ವಿರೋಧವಿಲ್ಲ. ಆದರೆ ಬೃಹತ್ ಮೈಸೂರು ಮಹಾನಗರ ಪಾಲಿಕೆ ಪ್ರಸ್ತಾವನೆಯನ್ನು ತರಾತುರಿಯಲ್ಲಿ ಮಾಡಲಾಗಿದೆ. ಯಾವುದೇ ಪೂರ್ವ ತಯಾರಿ ನಡೆದಿಲ್ಲ. ವೈಜ್ಞಾನಿಕವಾಗಿ ಯೋಜನೆ ಸಿದ್ಧಪಡಿಸಿಲ್ಲ. ಪ್ರಸ್ತಾವನೆಯಲ್ಲಿ ಪಾರದರ್ಶಕತೆ ಮತ್ತು ಸಮರ್ಪಕ ಸಿದ್ಧತೆಯ ಕೊರತೆಯಿದ್ದು, ನಗರ ವಿಸ್ತರಣೆ ಆಗಲೇ ಬೇಕಾದರೆ ಸಾರ್ವಜನಿಕ ಸಹಭಾಗಿತ್ವದೊಂದಿಗೆ ವ್ಯವಸ್ಥಿತ ಯೋಜನೆ ಮೂಲಕ ಹಂತ ಹಂತವಾಗಿ ಆಗಬೇಕು ಎಂದು ಹೇಳಿದರು.

ನಮ್ಮ ಮೈಸೂರು ಫೌಂಡೇಶನ್‌ನ ದಶರಥ್, ನಿಮಿಷಾಂಬ ಸ್ವಸಹಾಯ ಸಂಘದ ಎಸ್.ಸುಜಾತಾ ಹಾಗೂ ಕ್ರಿಸ್ಟಲ್ ಗ್ರೀನ್ ಬಡ್ಸ್, ಕ್ರೆಡಿಟ್–ಐ ಸಂಸ್ಥೆ, ರಾಷ್ಟ್ರೀಯ ಮಾನವ ಹಕ್ಕುಗಳ ಮತ್ತು ಸಾಮಾಜಿಕ ನ್ಯಾಯ ಸಮಿತಿ, ಕನ್ನಡ ರಕ್ಷಣಾ ವೇದಿಕೆ, ಮಿಷನ್ ಮೋದಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್, ಯೂತ್ ಫಾರ್ ನೇಷನ್ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಎಸ್‌ಬಿಎಂ ಮಂಜು ಮೈಸೂರು ಜೆಡಿಎಸ್ ನಗರಾಧ್ಯಕ್ಷ



ಬೆಂಗಳೂರಿನ ಜೆಪಿ ಭವನದ ಜೆಡಿಎಸ್ ಕಚೇರಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಯುವ ಜನತಾದಳದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅವರಿಗೆ ಮೈಸೂರು ನಗರ ಜೆಡಿಎಸ್ ಅಧ್ಯಕ್ಷರಾಗಿ ನೇಮಕ ಮಾಡಿ ನೇಮಕಾತಿ ಪತ್ರ ನೀಡಿದರು. ಮಾಜಿ ಸಚಿವ ಬಂಡಪ್ಪ ಕಾಶಂಪುರ್ ಇದ್ದರು.

ಫೆ.16, ಸಾರ್ವಜನಿಕರ ಅಹವಾಲು ಸಭೆ

ಮೈಸೂರು,ಫೆ.8–ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಧರ್ಮಪುರ ತೋಟಗಾರಿಕೆ ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ, ತಾಳೆ ಬೀಜೋತ್ಪಾದನಾ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದೆ. ಸದರಿ ಕ್ಷೇತ್ರದಲ್ಲಿ ತಾಳೆ ಬೀಜೋತ್ಪಾದನೆ ಕಾರ್ಯಕ್ರಮ ಕೈಗೊಳ್ಳಲು ಕಾಡು ಜಾತಿಯ 1100 ಸಂಖ್ಯೆಯ ಆಕೇಶಿಯಾ ಮರಗಳು ಅಡ್ಡ ಬರುತ್ತಿದ್ದು, ಹುಣಸೂರು ವಿಭಾಗ, ಸಹಾಯಕ ಸಂರಕ್ಷಣಾ ಅಧಿಕಾರಿಗಳು ತೋಟಗಾರಿಕೆ ಕ್ಷೇತ್ರದಲ್ಲಿ ಇರುವ ಆಕೇಶಿಯಾ ಮರಗಳನ್ನು ತೆರವುಗೊಳಿಸಿ ಕೊಡುವಂತೆ ಕೋರಲಾಗಿದೆ. ಈ ಸಂಬಂಧ ಹುಣಸೂರು ವಿಭಾಗದ ಸಹಾಯಕ ಸಂರಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫೆ.16ರಂದು ಪೂರ್ವಾಹ್ನ 11 ಗಂಟೆಗೆ ಹುಣಸೂರು ವಲಯ ಅರಣ್ಯಾಧಿಕಾರಿಗಳ ಕಚೇರಿ ಆವರಣದಲ್ಲಿ ಸಾರ್ವಜನಿಕ ಅಹವಾಲು ಸಭೆಯನ್ನು ಕರೆಯಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.2.2026 ಸೋಮವಾರ, ಮಳೆ ನಕ್ಷತ್ರ: ಧನಿಷ್ಠ 6.02.2026ರಿಂದ 18.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸ್ಥಳ: ವಿದ್ಯಾಲಯದ ಆವರಣ, ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು ಬೆಳಗ್ಗೆ 8 ರಿಂದ.
- **ಶ್ರೀ ಘನ ನೀಲಿ ಸಿದ್ದಪ್ಪಾಜಿ ದೇವಸ್ಥಾನ:** 5ನೇ ವರ್ಷದ ಜಾತ್ರಾ ಮಹೋತ್ಸವ, ಬೆಳಗ್ಗೆ 7 ಗಂಟೆಯಿಂದ ಅಭಿಷೇಕ, ಸಂಜೆ 5 ಗಂಟೆಗೆ ಪ್ರಮುಖ ಬೀದಿಗಳಲ್ಲಿ ಬೆಳ್ಳಿ ಕಂಡಾಯ ಹಾಗೂ ಬಸವಣ್ಣನ ಮೆರವಣಿಗೆ, ರಾತ್ರಿ 8 ಗಂಟೆಗೆ ಪ್ರಸಾದ ವಿನಿಯೋಗ, 9 ಗಂಟೆಗೆ ಶ್ರೀಶಿವಕುಮಾರ ಶಾಸ್ತ್ರಿ ಅವರಿಂದ ಶ್ರೀ ಸಿದ್ದಪ್ಪಾಜಿ ಹರಿಕಥೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಅಭಿಷೇಕ್ ಸರ್ಕಲ್, ಮಂಚೇಗೌಡನಕೊಪ್ಪಲು (ಹೆಬ್ಬಾಳು),
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಂಡಿನೋವು, ಮೂಲವ್ಯಾಧಿ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಬಿಇಎಂಎಲ್ ಒಕ್ಕಲಿಗರ ಸಂಘ:** ನೂತನ ಸಮುದಾಯ ಭವನ ನಿರ್ಮಾಣದ ಶಂಕುಸ್ಥಾಪನೆ, ಮುಖ್ಯ ಅತಿಥಿಗಳು: ಶ್ರೀ ಆದಿ ಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಹರೀಶ್‌ಗೌಡ, ಜಿ.ಟಿ.ದೇವೇಗೌಡ, ಸ್ಥಳ: ಎಸ್‌ಬಿಐ ಎದುರು, ಹೆಬ್ಬಾಳು 1 ನೇ ಹಂತ, ಬೆಳಗ್ಗೆ 8.30ಕ್ಕೆ.
- **ಮಹಾರಾಜ ಕಾಲೇಜು, ಮೈಸೂರು:** ಹಳಗನ್ನಡ ಓದು ಮತ್ತು ವ್ಯಾಖ್ಯಾನ ರೂಪ ಪ್ರಾಯೋಜಿತ ಕಾರ್ಯಾಗಾರ, ಉದ್ಘಾಟನೆ: ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ. ವಿ.ಷಣ್ಮುಗಂ, ಅಧ್ಯಕ್ಷತೆ: ಮಹಾರಾಜ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಡಿ.ವಿಜಯಲಕ್ಷ್ಮಿ, ಸ್ಥಳ: ಕೊಠಡಿ ಸಂಖ್ಯೆ 37, ಮಹಾರಾಜ ಕಾಲೇಜು, ಬೆಳಗ್ಗೆ 10 ಗಂಟೆಯಿಂದ.
- **ವಿಶ್ವಮಾನವ ಮೈಸೂರು ವಿಶ್ವ ವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವ ಮಾನವ ಟ್ರಸ್ಟ್:** ದಿ.ರಾಜಶೇಖರ್ ಕೋಟಿರವರ ಸ್ಮರಣಾರ್ಥ 8ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ, ಅಭಿನಂದನಾ ಸಮಾರಂಭ, ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಶಾಸಕ ಎ.ಆರ್.ಕೃಷ್ಣಮೂರ್ತಿ, ಕ್ಯಾಲೆಂಡರ್ ಲೋಕಾರ್ಪಣೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಮುದ್ದುರಾಮ ಬಳಗ, ಮೈಸೂರು ಜಿಲ್ಲೆ, ಬಿಜಿಎಸ್, ಬಿಇಡಿ ಕಾಲೇಜು, ಕುವೆಂಪುನಗರ:** ಉಪನ್ಯಾಸ ಮಾಲಿಕೆ–2, ವಿಷಯ: ಮುದ್ದುರಾಮ– ಒಂದು ಪರಿಮಳದ ಪಯಣ, ದಿವ್ಯ ಸಾನಿಧ್ಯ : ಶ್ರೀ ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ವಾಚನ: ವಿದುಷಿ ಶುಭಾ ರಾಘವೇಂದ್ರ, ಕು.ತನುಶ್ರೀ.ಆರ್, ವ್ಯಾಖ್ಯಾನ: ಖ್ಯಾತ ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ, ಉಪಸ್ಥಿತಿ: ಬಿಜಿಎಸ್, ಬಿಇಡಿ ಕಾಲೇಜು ಆಡಳಿತಾಧಿಕಾರಿ ಯಶೋಧ ಹೆಚ್, ಪ್ರಾಂಶುಪಾಲ, ಡಾ.ನಾಗರಾಜು, ಸ್ಥಳ: ಬಿಜಿಎಸ್ ಬಿಇಡಿ ಕಾಲೇಜಿ ಸಭಾಂಗಣ, ಬೆಳಗ್ಗೆ 11 ಗಂಟೆಗೆ.
- **ಮೈಸೂರು ವಿಶ್ವ ವಿದ್ಯಾನಿಲಯ ಪ್ರಸಾರಾಂಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸಿದ್ಧಾರ್ಥನಗರ)–ಕನ್ನಡ ವಿಭಾಗ:** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ: ಪ್ರಸಾರಾಂಗ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸಿದ್ಧಾರ್ಥನಗರ) ಪ್ರಾಂಶುಪಾಲೆ ಪ್ರೊ.ಮಾಯಾದೇವಿ.ಎನ್, ಉಪನ್ಯಾಸ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ವಿಷಯ: ವಚನ ಸಾಹಿತ್ಯ ಮತ್ತು ಸ್ತ್ರೀವಾದ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11 ಕ್ಕೆ.
- **ಮಹಾರತ್ನ ಟ್ರಸ್ಟ್, ಮೈಸೂರು (ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ಸಬಲೀಕರಣ) :** ಶ್ರೀ ಮೈಸೂರು ಮಹಾಲಿಂಗ ಎಂ. ಲಕ್ಷ್ಮೀಪುರ ಅವರ ನೇತೃತ್ವದಲ್ಲಿ ಜನಪದಗೀತೆ, ಭಾವಗೀತೆ, ಭಕ್ತಿಗೀತೆ, ರಂಗಗೀತೆಗಳ ಉಚಿತ ಕಾರ್ಯಾಗಾರ, ಉದ್ಘಾಟನೆ: ಹಿರಿಯ ಜಾನಪದ ವಿದ್ವಾಂಸ ಪ್ರೊ.ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ: ಸಹಕಾರ ರತ್ನ, ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಸಿ.ವಿ.ಪಾರ್ಥಸಾರಥಿ, ಸ್ಥಳ: ಬಸವ ಸಮಿತಿ, ಕೊಡವ ಸಮಾಜ ಪಕ್ಕ, ವಿಜಯನಗರ, ಮಧ್ಯಾಹ್ನ 3 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಬಸವರಾಜಪ್ಪ, 6.15 ಗೀತಾರಾಧನ,6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ : ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಪಿ.ಸುರಭಿ, ವ್ಯಾಖ್ಯಾನ–ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ಹೆಸರಾಂತ ಹಿರಿಯ ಇಂಗ್ಲೀಷ್ ಕಾದಂಬರಿಕಾರರಾದ ಹಾಸನ ರಾಜರಾಯರೊಂದಿಗೆ ಪ್ರೊ.ಸಿ.ಡಿ.ನರಸಿಂಹಯ್ಯ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಪಿ.ರಮಾ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ– ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ** 12.05 ವನಿತಾ ವಿಹಾರ (Coordinated): ಲೇಖಕಿ, ನಿವೃತ್ತ ಶಿಕ್ಷಕಿ, ಹಾಗೂ ಗಾಯಕಿ, ಶ್ಯಾಮಲಾ ಕುಲಕರ್ಣಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಮಂಜುಳಾ ಪುರಾಣಿಕ. 12.35 ದೇವರನಾಮ ಸ್ನೇಹಾ.ಎಚ್.ಎಸ್ ಮತ್ತು ಸಹನಾ ಎಚ್.ಎಸ್, 12.45 ನಮ್ಮ ಆರೋಗ್ಯ ವಿಶ್ವ ರಕ್ತಹೀನತೆ ಜಾಗೃತಿ ದಿನದ ಅಂಗವಾಗಿ ರಕ್ತಹೀನತೆ ಕಾರಣಗಳು ಮತ್ತು ಪರಿಹಾರ ಕುರಿತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಹೆಮೆಟಾಲಜಿಸ್ಟ್ ಡಾ.ಗಿರಿಪುಂಜ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಡಾ.ಕುಲದೀಪ್.ಎನ್, 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (MSME) ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು ಪ್ರಥಮ್ ಭಟ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಕೆ.ಶ್ರೀಕಂಠನ್–ಹಾಡುಗಾರಿಕೆ, 4.00 ಮಹಿಳಾರಂಗ ಡಾಕ್ಟರ್ ಸಮಯ, ಮಹಿಳಾ ಆರೋಗ್ಯ ಕಾರ್ಯಕ್ರಮ ಬಾಯಿಯ ಆರೋಗ್ಯ ಕುರಿತು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯ Oral pathology & Microbiology ವಿಭಾಗದ ಡಾ.ಉಷಾ ಹೆಗಡೆ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಕೀರ್ತನಾ.ವಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ ಪ್ರಸ್ತುತಿ: ಶಾಂತ.ಡಿ.ಕಿಣಿ, 5.00 ಯುವವಾಣಿ: ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಲೆಕ್ಕಶಾಸ್ತ್ರ Accontancy ಭಾಗವಹಿಸುತ್ತಾರೆ ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಮಮತ. ಪ್ರಸ್ತುತಿ–ದಿಗ್ವಿಜಯ್.ಬಿ, 5.45 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ. 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಸುಧಾರಿತ ನೀರಾವರಿ ರಾಗಿ ಬೇಸಾಯ ಕ್ರಮಗಳು ಈ ಕುರಿತು ಮಂಡ್ಯದ, ವಿ.ಸಿ.ಫಾರಂ, ವಲಯಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಸಿ.ಎಂ.ಸುನಿಲ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಸವಿನೆನಪು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ ನಿಲಯದ ಕಲಾವಿದರಿಂದ ತಾಳವಾದ್ಯ, ನಿರ್ದೇಶನ–ತುಮಕೂರು.ಬಿ.ರವಿಶಂಕರ್, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 9 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 291 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದಿನಿಂದ ಫೆ.11ರವರೆಗೆ ಬಂಡೀಪುರದಲ್ಲಿ

ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆ

• 23 ದೇಶಗಳ 39 ಪ್ರತಿನಿಧಿಗಳು ಭಾಗಿ • ಮೇಲುಕಾಮನಹಳ್ಳಿ ಬಳಿ ಇರುವ ಸಫಾರಿ ಕ್ಯಾಂಪಸ್‌ನಲ್ಲಿ ನೆರವೇರಲಿರುವ ಶೃಂಗ ಸಭೆ • ಹುಲಿ ಸಂತತಿ ಸಂರಕ್ಷಣೆ ಸೇರಿದಂತೆ ವಿವಿಧ ಮಹತ್ತರ ವಿಷಯಗಳ ಚರ್ಚೆ. ಫೆ.11ರಿಂದ 13ರವರೆಗೆ ನಾಗರಹೊಳೆಯಲ್ಲಿ ಮುಂದುವರೆಯಲಿರುವ ಸಭೆ



ಮೈಸೂರು, ಫೆ.8(ಎಂಟಿವೈ)– ಹುಲಿ ಸಂತತಿಯ ಸಂರಕ್ಷಣೆ ಸೇರಿದಂತೆ ವಿವಿಧ ಮಹತ್ತರ ವಿಷಯಗಳ ಬಗ್ಗೆ ಚರ್ಚಿಸಲು 2ನೇ ಆವೃತ್ತಿಯ ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆ ನಾಳೆ(ಫೆ.9)ಯಿಂದ ಫೆ.11ರವರೆಗೆ ಬಂಡೀಪುರದಲ್ಲಿ, ಫೆ.11ರಿಂದ 13ರವರೆಗೆ ನಾಗರಹೊಳೆಯಲ್ಲಿ ನಡೆಯಲಿದ್ದು, 23 ದೇಶಗಳ 39 ಪ್ರತಿನಿಧಿಗಳು ಹಾಗೂ ಪರಿಣಿತರು ಪಾಲ್ಗೊಳ್ಳಲಿದ್ದಾರೆ ಎಂದು ಹುಲಿ ಯೋಜನೆಯ ನಿರ್ದೇಶಕ ಡಾ. ಪಿ.ರಮೇಶ್ ಕುಮಾರ್ ತಿಳಿಸಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದಲ್ಲಿ 2ನೇ ಆವೃತ್ತಿಯ ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆ ಜರುಗಲಿದ್ದು, ಅದಕ್ಕಾಗಿ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಶೃಂಗ ಸಭೆಯ ಮೊದಲ ಹಂತದಲ್ಲಿ ಫೆ.9ರಿಂದ 11ರವರೆಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೇಲುಕಾಮನಹಳ್ಳಿಯಲ್ಲಿರುವ ಸಫಾರಿ ಕ್ಯಾಂಪಸ್‌ನಲ್ಲಿ ಜರುಗಲಿದ್ದು, ಅದಕ್ಕಾಗಿ ಸಭಾಂಗಣ ಹಾಗೂ ಅಗತ್ಯ ವೇದಿಕೆಯನ್ನು ಸಿದ್ಧಪಡಿಸಲಾಗಿದೆ. ಈ ಸಭೆಯಲ್ಲಿ ವಿವಿಧ ದೇಶಗಳಿಂದ ಪ್ರತಿನಿಧಿಗಳು ಹಾಗೂ ಹುಲಿಗಳ ಬಗ್ಗೆ ಪರಿಣಿತಿ ಹೊಂದಿರುವ ತಜ್ಞರು ಭಾಗವಹಿಸುತ್ತಿದ್ದು, ಹುಲಿ ಸಂತತಿಯ ಸಂರಕ್ಷಣೆ, ಹುಲಿ ಸಂತತಿ ಎದುರಿಸುತ್ತಿರುವ ಸವಾಲು, ಅವುಗಳ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮ ಸೇರಿದಂತೆ ಇನ್ನಿತರ ಮಹತ್ತರ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ ಎಂದರು. ಹುಲಿ ಸಂತತಿಯಲ್ಲಿ ವಿಶ್ವದಲ್ಲೇ ಅಗ್ರ ■6ನೇ ಪುಟಕ್ಕೆ



ಬಂಡೀಪುರದಲ್ಲಿ ಸೋಮವಾರದಿಂದ ಆರಂಭವಾಗುವ ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆಯ ಹಿನ್ನೆಲೆಯಲ್ಲಿ ಬಂಡೀಪುರದ ಸಿಎಫ್ ಎಸ್. ಪ್ರಭಾಕರನ್ ಅವರು ಸಿಬ್ಬಂದಿಗಳೊಂದಿಗೆ ಪೂರ್ವ ಸಿದ್ಧತೆ ಕುರಿತು ಸಮಾಲೋಚಿಸಿದರು.

> ಬಂಡೀಪುರದಲ್ಲಿ ಸೋಮವಾರ ಸಂಜೆ 3 ಗಂಟೆಗೆ ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆ ಉದ್ಘಾಟನೆಗೊಳ್ಳಲಿದ್ದು, ಸಭೆಗೆ ಅಗತ್ಯ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ. ಸಭೆಗೆ ಆಗಮಿಸುವ ಅಧಿಕಾರಿಗಳ ವಾಸ್ತವ್ಯ, ಊಟ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.
> -ಎಸ್.ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮಂಡ್ಯದಲ್ಲಿ 500 ಕೋಟಿ ವೆಚ್ಚದಲ್ಲಿ ಎಆರ್‌ಎಐ ಸಂಶೋಧನಾ ಕೇಂದ್ರ

ನೂರು ಎಕರೆ ಭೂಮಿಗೆ ರಾಜ್ಯ ಸರ್ಕಾರಕ್ಕೆ ಪತ್ರ; ಶೀಘ್ರ ಜಾಗ ಗುರುತಿಸುವ ವಿಶ್ವಾಸ: ಕೇಂದ್ರ ಸಚಿವ ಕುಮಾರಸ್ವಾಮಿ

• ಕರ್ನಾಟಕವನ್ನು ಕೇಂದ್ರ ಸರ್ಕಾರ ಕಡೆಗಾಣಿಸಿಲ್ಲ • ಯಾರೂ ಜೆಡಿಎಸ್ ಮುಗಿಸಲು ಸಾಧ್ಯವಿಲ್ಲ • ಸಾಲ ತೀರಿಸಲು ಸರ್ಕಾರ ಒದ್ದಾಟ



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಭಾನುವಾರ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.8(ಬಿಎಲ್‌ಯು)– ಮಂಡ್ಯದಲ್ಲಿ 500 ಕೋಟಿ ವೆಚ್ಚದಲ್ಲಿ ಆಟೋಮೊಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ(ಎಆರ್‌ಎಐ)ದ ಸಂಶೋಧನಾ ಕೇಂದ್ರ ತೆರೆಯಲು ಉದ್ದೇಶಿಸಲಾಗಿದ್ದು, ಇದಕ್ಕೆ ರಾಜ್ಯ ಸರ್ಕಾರ ಶೀಘ್ರ ಜಮೀನು ಗುರುತಿಸುವ ವಿಶ್ವಾಸವಿದೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಂತಾರಾಷ್ಟ್ರೀಯ ಗುಣಮಟ್ಟದ ಸಂಶೋಧನಾ ಕೇಂದ್ರದ ಸ್ಥಾಪನೆಗೆ 100 ಎಕರೆ ಭೂಮಿ ಕೋರಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಕಂದಾಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗಳು ಜ.21ರಂದು ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಸೂಕ್ತ ಜಮೀನು ಗುರುತಿಸಲು ಸೂಚಿಸಿದ್ದಾರೆ ಎಂದರು.

ಕೇಂದ್ರ ಕಡೆಗಾಣಿಸಿಲ್ಲ: ಕೇಂದ್ರ ಸರ್ಕಾರ ಕರ್ನಾಟಕವನ್ನು ಎಂದೂ ಕಡೆಗಣಿಸಿಲ್ಲ, ಭದ್ರಾವತಿ ಉಕ್ಕು ಕಾರ್ಖಾನೆಗೆ ಸುಮಾರು 5 ಸಾವಿರ ಕೋಟಿ ಅನುದಾನ ■6ನೇ ಪುಟಕ್ಕೆ

ಮೈಸೂರಿನ ಎಲ್ಲಾ 11 ಸ್ಥಾನ ಗೆಲ್ಲಬೇಕಷ್ಟೇ...

> ಚಾಮರಾಜ ಕ್ಷೇತ್ರದ ವಿಚಾರದಲ್ಲಿ ಯಾವುದೇ ರೀತಿಯ ಗೊಂದಲವಿಲ್ಲ. ಇಲ್ಲಿ ಜೆಡಿಎಸ್ ಅಥವಾ ಬಿಜೆಪಿ ಎನ್ನುವುದಕ್ಕಿಂತ ನಾವು ಗೆಲ್ಲಬೇಕಷ್ಟೇ. ಮೈಸೂರಿನ ಎಲ್ಲಾ 11 ಸ್ಥಾನ ಗೆಲ್ಲಬೇಕು. ಬಿಜೆಪಿ ಅಭ್ಯರ್ಥಿ ಸಮರ್ಥರಿದ್ದಾರೆ ಎಂದಾದರೆ ಅವರೇ ಸ್ಪರ್ಧಿಸುತ್ತಾರೆ. ಇನ್ನೂ ಎರಡು ವರ್ಷ ಸಮಯವಿದೆ, ಎಲ್ಲವೂ ಸರಿಯಾಗುತ್ತದೆ.
> - ಹೆಚ್.ಡಿ.ಕುಮಾರಸ್ವಾಮಿ

ಜಿಟಿಡಿ ವಿಚಾರವನ್ನು ಕಾಲವೇ ನಿರ್ಧರಿಸುತ್ತದೆ...

ಮೈಸೂರು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ವಿಚಾರವನ್ನು ಕಾಲವೇ ನಿರ್ಧರಿಸುತ್ತದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.



ಜಿ.ಟಿ.ದೇವೇಗೌಡ

ಮುಡಾ ಅಕ್ರಮ ನಿವೇಶನ ಮಂಜೂರಾತಿ ಹಗರಣದಲ್ಲಿ ನಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳಿದೆವು. ಆದರೆ ಸಿದ್ದರಾಮಯ್ಯ ಅವರಿಗೆ ಒಳ್ಳೆತನದ ಸರ್ಟಿಫಿಕೇಟ್ ನೀಡುವ ಜಿ.ಟಿ.ದೇವೇಗೌಡರು ನಮ್ಮ ರಾಜೀನಾಮೆ ಕೇಳುತ್ತಾರೆ. ರಾಜೀನಾಮೆ ನೀಡಲು ನಾನು ಮಾಡಿರುವ ತಪ್ಪಾದರೂ ಏನು? ಜಿ.ಟಿ.ದೇವೇಗೌಡರಿಗೆ ನಮ್ಮ ಪಕ್ಷದ ಬಗ್ಗೆ ಸ್ವಲ್ಪವಾದರೂ ನಿಷ್ಠೆ, ಪ್ರಾಮಾಣಿಕತೆ ■6ನೇ ಪುಟಕ್ಕೆ

ಹೋಂಡಾ ಆಕ್ಟೀವಾಗೆ ಕ್ರೇನ್ ಡಿಕ್ಕಿ: ಸ್ಥಳದಲ್ಲಿಯೇ ಗೃಹಿಣಿ ಸಾವು

ಪತಿ ಆಸ್ಪತ್ರೆಗೆ ದಾಖಲು, ಕ್ರೇನ್‌ನೊಂದಿಗೆ ಚಾಲಕ ಪರಾರಿ

ನಂಜನಗೂಡು: ಸ್ಕೂಟರ್‌ಗೆ ಕ್ರೇನ್ ಡಿಕ್ಕಿ ಹೊಡೆದ ಪರಿಣಾಮ ಪತ್ನಿ ಸ್ಥಳದಲ್ಲಿಯೇ ಸಾವನ್ನಪ್ಪಿ ಪತಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರು–ಊಟಿ ಹೆದ್ದಾರಿಯ ತಾಲೂಕಿನ ಚಿಕ್ಕಯ್ಯನ ಛತ್ರದ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಮುಂಭಾಗ ಸಂಭವಿಸಿದೆ.



ಮೃತ ಸವಿತಾ

ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದ ಸವಿತಾ (52) ಮೃತ ದುರ್ದೈವಿ. ಸವಿತಾ ಅವರ ಪತಿ ನಿವೃತ್ತ ಶಿಕ್ಷಕ ರಾಮಚಂದ್ರ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಿವೃತ್ತ ಶಿಕ್ಷಕರಾಗಿರುವ ರಾಮಚಂದ್ರ ಅವರು ತಮ್ಮ ಪತ್ನಿ ಸವಿತಾ ಅವರೊಂದಿಗೆ ಆಕ್ಟಿವ್ ಹೋಂಡಾದಲ್ಲಿ ಕಾರ್ಯನಿಮಿತ್ತ ಮೈಸೂರಿಗೆ ತೆರಳಿ ಸ್ವಗ್ರಾಮ ಚಿಕ್ಕಾಟಿಗೆ ವಾಪಸ್ಸಾಗುವ ವೇಳೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಚಿಕ್ಕಯ್ಯನ ಛತ್ರದ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಬಳಿ ಕ್ರೇನ್ ವಾಹನ ಚಾಲಕನ ಅಜಾಗರೂಕತೆ ಮತ್ತು ಅತಿ ವೇಗದ ಚಾಲನೆಯಿಂದಾಗಿ ಸ್ಕೂಟರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ.

ಇದರಿಂದ ಸವಿತಾ ರಸ್ತೆಯ ಬಲಭಾಗಕ್ಕೆ ಬಿದ್ದಿದ್ದು ಕ್ರೇನ್ ವಾಹನದ ಚಕ್ರ ಹೊಟ್ಟೆಯ ಭಾಗಕ್ಕೆ ಹರಿದ ಪರಿಣಾಮ ಸವಿತಾ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಪತಿ ರಾಮಚಂದ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ■9ನೇ ಪುಟಕ್ಕೆ

ನಮ್ಮ ಮೆಟ್ರೋ ದರ ಏರಿಕೆಗೆ ತಾತ್ಕಾಲಿಕ ತಡೆ

ಬೆಂಗಳೂರು: 'ನಮ್ಮ ಮೆಟ್ರೋ' ಪ್ರಯಾಣಿಕರಿಗೆ ಬಿಗ್ ರಿಲೀಫ್ ಸಿಕ್ಕಿದ್ದು, ದರ ಏರಿಕೆಗೆ ತಾತ್ಕಾಲಿಕ ತಡೆಬಿದ್ದಿದೆ. ಈ ಸಂಬಂಧ ಕೇಂದ್ರ ಸರ್ಕಾರದಿಂದ ಸೂಚನೆ ಬಂದ ಹಿನ್ನೆಲೆಯಲ್ಲಿ ಸೋಮವಾರ (ಫೆ.9)ದಿಂದ ಮೆಟ್ರೋ ಹೊಸ ದರ ಏರಿಕೆ ಇಲ್ಲ ಎಂದು ಬಿಎಂಆರ್‌ಸಿಎಲ್ ಸ್ಪಷ್ಟಪಡಿಸಿದೆ.



ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ(ಬಿಎಂಆರ್‌ಸಿಎಲ್) ತಿಳಿಸುವುದೇನೆಂದರೆ, ಫೆ.5ರಂದು ಪ್ರಕಟಿಸಿದ್ದ ಮಾಧ್ಯಮ ಪ್ರಕಟಣೆಯಲ್ಲಿ ಫೆ.9ರಿಂದ ವಾರ್ಷಿಕ ಸ್ವಯಂ ಚಾಲಿತ ದರ ಜಾರಿಗೆ ಬರಲಿದೆ ಎಂದು ತಿಳಿಸಲಾಗಿತ್ತು. ಆದರೆ ಈ ನಿರ್ಧಾರವನ್ನು ಮುಂದಿನ ಆದೇಶದ ತನಕ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಪರಿಷ್ಕೃತ ದರ ಕುರಿತು ಅಂತಿಮ ನಿರ್ಧಾರವನ್ನು ನಿರ್ದೇಶಕರ ಮಂಡಳಿಯ ಪರಿಶೀಲನೆ ನಂತರ ಪ್ರಕಟಿಸಲಾಗುವುದು. ಬಿಎಂಆರ್‌ಸಿಎಲ್ ಬೆಂಗಳೂರು ನಾಗರಿಕರಿಗೆ ಸುರಕ್ಷಿತ, ನಂಬಿಗಸ್ತ ಮತ್ತು ಕೈಗೆಟುಕುವ ಮೆಟ್ರೋ ಸೇವೆಗಳನ್ನು ಒದಗಿಸಲು ಸದಾ ಬದ್ಧವಾಗಿದೆ ಎಂದು ನಿಗಮದ ಪ್ರಕಟಣೆ ತಿಳಿಸಿದೆ.

ನಾಳೆಯಿಂದ ದರ ಏರಿಕೆಯಾಗಲ್ಲ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದರು. ಆದರೆ, ಬಿಎಂಆರ್‌ಸಿಎಲ್ ಎಂಡಿ ರವಿಶಂಕರ್, ಈ ಬಗ್ಗೆ ನಮಗೆ ಲಿಖಿತ ಸೂಚನೆ ಬಂದಿಲ್ಲ. ಹೀಗಾಗಿ ಪರಿಷ್ಕೃತ ದರ ಜಾರಿಯಾಗಲಿದೆ ಎಂದು ತಿಳಿಸಿದ್ದರು. ಇದರ ನಡುವೆ ಬಿಎಂಆರ್‌ಸಿಎಲ್‌ಗೆ ಕೇಂದ್ರ ಸರ್ಕಾರದಿಂದ ಇ–ಮೇಲ್ ಬಂದ ಹಿನ್ನೆಲೆಯಲ್ಲಿ ಬಿಎಂಆರ್‌ಸಿಎಲ್ ದರ ಏರಿಕೆ ನಿರ್ಧಾರದಿಂದ ಹಿಂದೆ ಸರಿದಿದೆ.

ಸಿಎಂ ಪುತ್ರ ಯತೀಂದ್ರ ಹಸ್ತಕ್ಷೇಪ

ಗೃಹ ಸಚಿವರ ಜೊತೆ ವೇದಿಕೆ ಹಂಚಿಕೊಳ್ಳಲು ನಿರಾಕರಿಸಿದ ಶಾಸಕ ತನ್ವೀರ್ ಸೇಠ್

ಮೈಸೂರು, ಫೆ.8(ಬಿಎಲ್‌ಯು)– ಮುಖ್ಯಮಂತ್ರಿಗಳ ಪುತ್ರ ಯತೀಂದ್ರ ಸಿದ್ದರಾಮಯ್ಯ ನನ್ನ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳ ಇಲಾಖೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಇದರೊಂದಿಗೆ ಪೊಲೀಸ್ ಇಲಾಖೆಯ ಅಧಿಕಾರಿಗಳು ನನ್ನ ಸಲಹೆ ಪರಿಗಣಿಸುತ್ತಿಲ್ಲ ಎಂದು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಜೊತೆ ವೇದಿಕೆ ಹಂಚಿಕೊಳ್ಳಲು ಮುಂದಾಗದೆ ಅಸಮಾಧಾನ ವ್ಯಕ್ತ ಪಡಿಸಿದ ಪ್ರಸಂಗ ನಡೆದಿದೆ.

ಸಿದ್ಧಾರ್ಥ ನಗರ ಸಂಚಾರಿ ಪೊಲೀಸ್ ಠಾಣೆಯ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಆಸೀನರಾಗಲು ತನ್ವೀರ್ ಸೇಠ್ ನಿರಾಕರಿಸಿದರು. ಪೊಲೀಸ್ ಇಲಾಖೆ ಅಧಿಕಾರಿಗಳು ನನ್ನ ಮಾತು ಕೇಳುತ್ತಿಲ್ಲ. ಹೀಗಿರುವಾಗ ನಾನೇನಾದರೂ ಈಗ ವೇದಿಕೆಗೆ ಬಂದರೆ ಕೆಲವು ವಿಚಾರ ಪ್ರಸ್ತಾಪಿಸುತ್ತೇನೆ. ಇದರಿಂದ ನಿಮಗೆ ಮುಜುಗರ ವಾಗುತ್ತದೆ ಎಂದರು. ಈ ವೇಳೆ ಡಾ.ಪರಮೇಶ್ವರ್ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರು ತನ್ವೀರ್ ಸೇಠ್ ಅವರನ್ನು ವೇದಿಕೆಗೆ ಕರೆತರುವಲ್ಲಿ ಯಶಸ್ವಿಯಾದರು. ಇದಕ್ಕೂ ಮೊದಲು ಮಾತನಾಡಿದ ತನ್ವೀರ್ ಸೇಠ್, ಸಿಎಂ ■6ನೇ ಪುಟಕ್ಕೆ



ತನ್ವೀರ್ ಸೇಠ್



ಡಾ.ಪರಮೇಶ್ವರ್

'ಓಡೋಣ ಮೈಸೂರಿಗಾಗಿ–ಒಂದಾಗೋಣ ಸ್ವಚ್ಛತೆಗಾಗಿ'

ಸಂದೇಶ ಸಾರಿದ ಸ್ವಚ್ಛತಾ ಜಾಗೃತಿ ಓಟ

ಮೈಸೂರು, ಫೆ.8(ಎಂಕೆ)– ತಣ್ಣನೆಯ ವಾತಾವರಣ, ಸೂರ್ಯನ ಕಿರಣಗಳು ಭೂಮಿಯತ್ತ ಜಾರುವ ಶುಭ ಮುಂಜಾನೆಯಲ್ಲಿ ಶ್ವೇತವರ್ಣದ ಧಿರಿಸು ತೊಟ್ಟು ಮುನ್ನುಗ್ಗಿದ ಸಾವಿರಾರು ಸುಸಂಸ್ಕೃತ ಮೈಸೂರಿಗರು, 'ಓಡೋಣ ಮೈಸೂರಿಗಾಗಿ–ಒಂದಾಗೋಣ ಸ್ವಚ್ಛತೆಗಾಗಿ' ಎಂಬ ಸ್ವಚ್ಛತೆಯ ಜಾಗೃತಿ ಸಂದೇಶ ಸಾರಿದರು.

ಮೈಸೂರಿನ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಜಿಲ್ಲಾಡಳಿತ ಹಾಗೂ ಮೈಸೂರು ಮಹಾನಗರಪಾಲಿಕೆ ವತಿಯಿಂದ ಸ್ವಚ್ಛ ಸರ್ವೇಕ್ಷಣೆ–2025–26ರ ಅಂಗವಾಗಿ 'ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ' ಧ್ಯೇಯದೊಂದಿಗೆ ಮೈಸೂರನ್ನು ಸ್ವಚ್ಛ, ಹಸಿರು ಮತ್ತು ತ್ಯಾಜ್ಯ ಮುಕ್ತ ನಗರವನ್ನಾಗಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ 'ಸ್ವಚ್ಛತಾ ಓಟ(ಸ್ವಚ್ಛತಾ ಮ್ಯಾರಾಥಾನ್)' ಯಶಸ್ವಿಯಾಯಿತು.

ಕೊರೆಯುವ ಚಳಿಯ ನಡುವೆ ಭಾನುವಾರ ಮುಂಜಾನೆ 6 ಗಂಟೆಗೆ ಜಮಾವಣೆಗೊಂಡ ಸಾವಿರಾರು ಮಂದಿ ವಿವಿಧ ವಿಭಾಗಗಳಲ್ಲಿ 3, 5 ಮತ್ತು 10 ಕಿಲೋ ಮೀಟರ್ ದೂರದ ಸ್ವಚ್ಛತಾ ಓಟದಲ್ಲಿ ಭಾಗವಹಿಸಿ, ಮೈಸೂರನ್ನು ಮತ್ತೊಮ್ಮೆ ದೇಶದ ಸ್ವಚ್ಛ ನಗರವನ್ನಾಗಿಸುವ ಸಂಕಲ್ಪಕ್ಕೆ ಬಲ ತುಂಬಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಹಸಿರು ನಿಶಾನೆ ತೋರುತ್ತಿದ್ದಂತೆ ಮೊದಲಿಗೆ ಆರಂಭವಾದ 3 ಕಿಲೋ ಮೀಟರ್ ಸ್ವಚ್ಛತಾ ಓಟ, ಕೆ.ಆರ್.ಸರ್ಕಲ್ ಮಾರ್ಗವಾಗಿ ಸಾಗಿ ಸಯ್ಯಾಜಿರಾವ್ ರಸ್ತೆ ಮೂಲಕ ನಗರ ಪಾಲಿಕೆ ಕೇಂದ್ರ ಕಚೇರಿ, ಸಂಸ್ಕೃತ ಪಾಠಶಾಲೆ, ಬಸವೇಶ್ವರ ಸರ್ಕಲ್ ಮೂಲಕ ಅರಮನೆ ಜಯಮಾರ್ತಾಂಡ ಗೇಟ್ ಎದುರು ಸಾಗಿ ದೊಡ್ಡಕೆರೆ ಮೈದಾನ ರಸ್ತೆ ಮಾರ್ಗವಾಗಿ ಹಾರ್ಡಿಂಜ್ ವೃತ್ತ (ಜಯಚಾಮರಾಜ ಒಡೆಯರ್ ಸರ್ಕಲ್) ದಿಂದ ಆಲ್ಬರ್ಟ್ ವಿಕ್ಟರ್ ರಸ್ತೆ ಮೂಲಕ ದೊಡ್ಡಗಡಿಯಾರ ಸುತ್ತುವರಿದು ವಾಪಸ್ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಮುಕ್ತಾಯಗೊಂಡಿತು.

5 ಕಿಲೋಮೀಟರ್ ಸ್ವಚ್ಛತಾ ಓಟವು ಕೆ.ಆರ್. ಸರ್ಕಲ್ ಮಾರ್ಗವಾಗಿ ಸಾಗಿ ಡಿ.ದೇವರಾಜ ಅರಸು ರಸ್ತೆ ಮೂಲಕ ಜೆಎಲ್‌ಬಿ ರಸ್ತೆ ಮಾರ್ಗವಾಗಿ ರಾಮಸ್ವಾಮಿ ವೃತ್ತದಿಂದ ಚಾಮರಾಜ ಡಬ್ಬಲ್ ರಸ್ತೆ ಮೂಲಕ ಸಾಗಿ ಬಸವೇಶ್ವರ ಸರ್ಕಲ್‌ನಿಂದ ದೊಡ್ಡಕೆರೆ ಮೈದಾನ ರಸ್ತೆ ಮಾರ್ಗವಾಗಿ ಸಾಗಿ ಹಾರ್ಡಿಂಜ್ ವೃತ್ತ(ಜಯಚಾಮರಾಜ ಒಡೆಯರ್ ಸರ್ಕಲ್)ದಿಂದ ಆಲ್ಬರ್ಟ್ ವಿಕ್ಟರ್ ರಸ್ತೆ ಮೂಲಕ ದೊಡ್ಡಗಡಿಯಾರ ಸುತ್ತುವರಿದು ವಾಪಸ್ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಮುಕ್ತಾಯಗೊಂಡಿತು. ಹಾಗೆಯೇ ಇದೇ ಮಾರ್ಗದಲ್ಲಿ ಎರಡು ಬಾರಿ ಓಡುವ ಮೂಲಕ 10 ಕಿಲೋ ಮೀಟರ್ ಸ್ವಚ್ಛತಾ ಓಟವನ್ನು ಯಶಸ್ವಿಗೊಳಿಸಲಾಯಿತು.

ನಗದು ಬಹುಮಾನ ವಿತರಣೆ: ನಂತರ ಸ್ವಚ್ಛತಾ ಮ್ಯಾರಾಥಾನ್‌ನಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ಹಾಗೂ ಪದಕ ವಿತರಿಸುವ ಜೊತೆಗೆ ವಿಜೇತರಾದವರಿಗೆ ಪ್ರಥಮ ಸ್ಥಾನಕ್ಕೆ 10 ಸಾವಿರ ರೂ., ದ್ವಿತೀಯ ಸ್ಥಾನಕ್ಕೆ 5 ಸಾವಿರ ರೂ. ಹಾಗೂ ತೃತೀಯ ಸ್ಥಾನಕ್ಕೆ 3 ಸಾವಿರ ರೂ. ನಗದು ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು.

ಪುರುಷರ ವಿಭಾಗದ(18–40 ವರ್ಷ ವಯೋಮಾನ) 3 ಕಿಲೋ ಮೀಟರ್ ಓಟದಲ್ಲಿ ಪ್ರವೀಣ್ ಪ್ರಥಮ, ಮೊಹಮ್ಮದ್ ಉಮಾನ್ ದ್ವಿತೀಯ ಹಾಗೂ ನಂದನ್ ತೃತೀಯ ಸ್ಥಾನ ಪಡೆದರೆ, 5 ಕಿಲೋ ಮೀಟರ್ ಓಟದಲ್ಲಿ ಪ್ರಥಮ್ ಪ್ರಥಮ, ಪುರುಷೋತ್ತಮ್ ದ್ವಿತೀಯ ಹಾಗೂ ನಿತಿನ್ ತೃತೀಯ ಸ್ಥಾನ ಪಡೆದರು. 41 ವರ್ಷ ಮೇಲ್ಪಟ್ಟವರಲ್ಲಿ ಗಣೇಶ್ ಪ್ರಥಮ, ರಘುನಂದನ್ ದ್ವಿತೀಯ ಹಾಗೂ ಯೋಗೇಶ್ ಸಾಗರ್ ತೃತೀಯ ಸ್ಥಾನ ಪಡೆದುಕೊಂಡರು. 10 ಕಿಲೋ ಮೀಟರ್ (18–40 ವರ್ಷ ವಯೋಮಾನ) ■9ನೇ ಪುಟಕ್ಕೆ

ಸ್ವಚ್ಛತೆ ಎಂದರೆ ಆನಂದ...


> ಸಾಂಸ್ಕೃತಿಕ ನಗರಿ ಮೈಸೂರು ಪ್ಯಾರಡೈಸ್ (ಪರಿಪೂರ್ಣ ಸ್ಥಳ) ಇದ್ದಂತೆ. ನಾವು ಮೈಸೂರಿಗರು ಎಂದು ಹೇಳಿಕೊಳ್ಳುವುದೇ ಹೆಮ್ಮೆ. ನಮ್ಮೆಲ್ಲರ ಆರೋಗ್ಯ ವೃದ್ಧಿಗೆ ಸ್ವಚ್ಛತೆ ಬಹಳ ಮುಖ್ಯ. ಹಾಗಾಗಿ ಸಾಮಾಜಿಕ ಜವಾಬ್ದಾರಿಯನ್ನು ಅರಿತು, ನಮ್ಮ ನಮ್ಮ ಮನೆಯಿಂದಲೇ ಸ್ವಚ್ಛತಾ ಜಾಗೃತಿಯಾಗಬೇಕು. ಈ ಮೂಲಕ ಮೈಸೂರನ್ನು ದೇಶದಲ್ಲೇ ಸ್ವಚ್ಛತಾ ನಗರವನ್ನಾಗಿಸುವ ಸಂಕಲ್ಪ ಮಾಡಬೇಕು. ಪರಿಸರವನ್ನು ನಾವು ಕಾಪಾಡಿದರೆ, ಪರಿಸರ ನಮ್ಮನ್ನು ಕಾಪಾಡುತ್ತದೆ. ಹಾಗಾಗಿ ನಾವೆಲ್ಲರೂ ಸ್ವಚ್ಛತೆಗಾಗಿ ದುಡಿಯೋಣ.
> - ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ



ಮೈಸೂರಿನ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಭಾನುವಾರ ಮುಂಜಾನೆ ಜಿಲ್ಲಾಡಳಿತ ಹಾಗೂ ಮೈಸೂರು ಮಹಾನಗರಪಾಲಿಕೆ ವತಿಯಿಂದ ಸ್ವಚ್ಛ ಸರ್ವೇಕ್ಷಣೆ–2025–26ರ ಅಂಗವಾಗಿ ಆಯೋಜಿಸಿದ್ದ 'ಸ್ವಚ್ಛತಾ ಓಟ' (ಸ್ವಚ್ಛತಾ ಮ್ಯಾರಾಥಾನ್) ದಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು.

ಸ್ವಚ್ಛತೆಯಲ್ಲಿ ಮೈಸೂರು ಪ್ರಥಮ ಸ್ಥಾನ ಪಡೆಯಬೇಕು...

> 2017ರಲ್ಲಿ ಮೈಸೂರು ಸ್ವಚ್ಛತಾ ನಗರವೆಂದು ದೇಶಕ್ಕೆ ಪರಿಚಯವಾಯಿತು. ಮತ್ತೊಮ್ಮೆ ಮೈಸೂರು ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನ ಪಡೆಯಬೇಕು. ಸ್ವಚ್ಛತೆ ಕಾಪಾಡುತ್ತೇವೆ ಎಂದು ಸಂಕಲ್ಪ ಮಾಡಿರುವ ಪ್ರತಿಯೊಬ್ಬರು ತಮ್ಮ ಮನೆಯ ಸುತ್ತಮುತ್ತಲು ಸ್ವಚ್ಛತೆ ಕಾಪಾಡುವ ಜೊತೆಗೆ ಆರೋಗ್ಯಕರ ವಾತಾವರಣ ನಿರ್ಮಿಸಿ, ಸದೃಢ ಭಾರತ ನಿರ್ಮಾಣಕ್ಕೆ ಕೈ ಜೋಡಿಸಿ.
> - ಅರುಣ್ ಯೋಗಿರಾಜ್, ಖ್ಯಾತ ಶಿಲ್ಪಿ



ನಕ್ಕರೆ ಅದೇ ಸ್ವರ್ಗ

ಗುಂಡ : ಮದುವೆಯಾಗಿರುವ ಗಂಡಸರಿಗೆ ಸಂತಸದ ವಿಷಯ

ತಿಮ್ಮ : ಏನಪ್ಪಾ ಅಂತ ಸಂತಸ?

ಗುಂಡ : ಈ ತಿಂಗಳು ಗಂಡಂದಿರಿಗೆ ಹೆಂಡತಿ ಕಡಿಮೆ ಬೈಯ್ಯುವಳು. ಏಕೆಂದರೆ ಈ ತಿಂಗಳು 28 ದಿನ ಮಾತ್ರ ಇರೋದು!

ಮೈಸೂರು ಮಿತ್ರ

ಸೋಮವಾರ, ಫೆಬ್ರವರಿ 9, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಪ್ರೀತಿ, ಸ್ನೇಹ, ಗೌರವ ಯಾವುದೇ ಆಗಲಿ,
ನಾವು ಕೊಟ್ಟಿದ್ದು ನಮಗೆ ಮರಳಿ ದೊರೆಯುತ್ತದೆ.

ವೇದ ಸುಳ್ಳಾದರೂ { ಕಾಸು ಕೊಟ್ಟಾಂಯ್ತು,
ಗಾದೆ ಸುಳ್ಳಾಗದು { ಬಂಗಿ ಸುಟ್ಟಾಯ್ತು.

ನಿಮ್ಮ ಪತ್ರಗಳು

ಬಂಗಾರವ ನಂಬಿ ಬದುಕ ಅಡವಿಡಬೇಡಿ

ಮಾನ್ಯರೆ,

ಇಂದಿನ ಕಾಲದಲ್ಲಿ ಜಾಹೀರಾತುಗಳ ಅಬ್ಬರ ಎಷ್ಟಿದೆಯೆಂದರೆ, ಎಲ್ಲಿ ನೋಡಿದರೂ 'ಒಡವೆ ಕೊಳ್ಳಿ' ಎನ್ನುವವರೇ ಹೆಚ್ಚು. ಆದರೆ ಬದುಕಿನ ಅನಿವಾರ್ಯತೆ ಎದುರಾದಾಗ, ಅದೇ ಒಡವೆಯನ್ನು 'ಅಡ ಇಡಿ' ಅಥವಾ 'ಮಾರಿಬಿಡಿ' ಎನ್ನುವ ಕಿವಿಮಾತುಗಳೂ ಅಷ್ಟೇ ಮುಖ್ಯವಾಗುತ್ತವೆ. ಇದರ ಹಿಂದಿರುವ ಅಸಲಿ ಉದ್ದೇಶವೇನೆಂದರೆ? ಚಿನ್ನ ಎನ್ನುವುದು ಬರಿ ಪ್ರದರ್ಶನದ ವಸ್ತುವಲ್ಲ, ಅದು ಕಷ್ಟ ಕಾಲದ 'ಆಪದ್ಬಾಂಧವ'.

ಸಂಸಾರವೆಂಬ ನೌಕೆಯನ್ನು ಮುನ್ನಡೆಸುವಾಗ ಸಾಲದ ಸುಳಿಗೆ ಸಿಲುಕುವುದು ಸಹಜ. ಆದರೆ ಪ್ರತಿ ತಿಂಗಳು ದುಡಿದ ಹಣವನ್ನೆಲ್ಲಾ ಕೇವಲ ಬಡ್ಡಿ ಕಟ್ಟಲು ವ್ಯಯಿಸಿ ಸುಸ್ತಾಗುವುದಕ್ಕಿಂತ, ಕಪಾಟಿನಲ್ಲಿ ಸುಮ್ಮನೆ ಬಿದ್ದಿರುವ ಬಂಗಾರವನ್ನು ಬಳಸಿಕೊಳ್ಳುವುದು ಜಾಣತನ. ನೆನಪಿಡಿ, ಪೆಟ್ಟಿಗೆಯಲ್ಲಿರುವ ಚಿನ್ನ ಬಡ್ಡಿ ತರುವುದಿಲ್ಲ; ಆದರೆ ಹೊರಗಿನ ಸಾಲ ಮಾತ್ರ ಚಕ್ರಬಡ್ಡಿಯಾಗಿ ಬೆಳೆಯುತ್ತಾ ಹೋಗುತ್ತದೆ. ಯಾರೋ ಅಕ್ಕಪಕ್ಕದವರ ಮೆಚ್ಚುಗೆಗಾಗಿ ಅಥವಾ ಸಮಾಜಕ್ಕೆ ತೋರಿಸಿಕೊಳ್ಳುವುದಕ್ಕಾಗಿ ಸಾಲದ ಹೊರೆ ಹೊತ್ತು ಮೈತುಂಬಾ ಚಿನ್ನ ಧರಿಸುವ ಬದಲು, ಅದನ್ನು ಮಾರಿ ಸಾಲಮುಕ್ತರಾಗುವುದರಲ್ಲಿ ನಿಜವಾದ ನೆಮ್ಮದಿಯಿದೆ.

ಇಂದಿನ ದಿನಗಳಲ್ಲಿ ಅಸಲಿಗಿಂತಲೂ ಸುಂದರವಾಗಿ ಕಾಣುವ ನಕಲಿ ಆಭರಣಗಳು ಲಭ್ಯವಿವೆ. ಅವುಗಳನ್ನು ಧರಿಸಿದರೆ ಪ್ರಾಣದ ಭಯವಿಲ್ಲ, ಕಳೆದುಕೊಂಡರೂ ಅತಿಯಾದ ನಷ್ಟದ ಸಂಕಟವಿಲ್ಲ. ನನ್ನ ಒಡವೆ ಎಂಬ ಸಣ್ಣ ಅಹಂಕಾರವನ್ನು ಬದಿಗಿಟ್ಟು, ನಮ್ಮ ಸಂಸಾರದ ನೆಮ್ಮದಿ ಮುಖ್ಯ ಎಂದು ಯಾವ ಗೃಹಿಣಿ ನಿರ್ಧರಿಸುತ್ತಾಳೋ, ಅವಳು ಆ ಮನೆಗೆ ಸಾಕ್ಷಾತ್ ಮಹಾಲಕ್ಷ್ಮಿಯೇ ಸರಿ. ಕಪಾಟಿನಲ್ಲಿ ಭದ್ರವಾಗಿರುವ ಚಿನ್ನಕ್ಕಿಂತ, ಮನೆಯವರ ಮುಖದಲ್ಲಿ ಅರಳುವ ನಗು ಮತ್ತು ಮನಸ್ಸಿನ ಶಾಂತಿಯೇ ಜೀವನದ ಅತಿ ದೊಡ್ಡ ಆಸ್ತಿ. ಬಂಗಾರವನ್ನೇ ನಂಬಿ ಬದುಕನ್ನು ಅಡವಿಡಬೇಡಿ, ಬದುಕನ್ನು ಉಳಿಸಿಕೊಳ್ಳಲು ಬಂಗಾರವನ್ನು ಬಳಸಿಕೊಳ್ಳಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸಮಾಜದಲ್ಲಿ ಜನರ ವರ್ತನೆ ಹೀಗೇಕೆ

ಮಾನ್ಯರೆ,

ಸಮಾಜದಲ್ಲಿ ಪುಂಡರ ವರ್ತನೆ ಅತಿರೇಕವಾಗಿದೆ. ಕೊಲೆ ಎಂಬುದು ಕ್ಷಣ ಮಾತ್ರದಲ್ಲಿ ಮುಗಿಸಿ ಯಾವ ಕಾನೂನಿನ ಭಯವಿಲ್ಲದೆ ಇರುತ್ತಾರೆ. ಕಾನೂನಿನ ವಿರುದ್ಧವಾಗಿ ನಡೆಯುವ ಪುಂಡರಿಗೆ ಯಾರ ಉಪದೇಶವು ಬೇಕಿಲ್ಲ. ಹೇಳಲು ಹೋದರೆ ಕ್ಷಣಮಾತ್ರದಲ್ಲಿ ಜೀವವನ್ನೇ ತೆಗೆಯುತ್ತಾರೆ. ಎಲ್ಲೆಡೆ ದ್ವೇಷ, ಹಣಕ್ಕಾಗಿ ಬಂಧು–ಬಳಗದವರನ್ನು ದೂರ ಮಾಡಿಕೊಂಡು ಕೊಲೆ ಮಾಡಲು ಮುಂದಾಗುತ್ತಾರೆ. ಮನುಷ್ಯತ್ವವೇ ಇಲ್ಲದಂತೆ ವರ್ತಿಸುತ್ತಾರೆ. ಅನೇಕ ದುಶ್ಚಟಗಳಿಗೆ ದಾಸರಾಗಿ ಹಣಕ್ಕಾಗಿ ಯಾವ ಕೃತ್ಯಕ್ಕೂ ಹಿಂಜರಿಯುವುದಿಲ್ಲ. ಇದರಲ್ಲಿ ಬಾಲಾಪರಾಧಿಗಳು ಭಾಗವಹಿಸುತ್ತಿದ್ದಾರೆ. ಇದು ನೋವಿನ ಸಂಗತಿಯಾಗಿದೆ.

ಬೆಂಗಳೂರು ಕ್ರೈಂ ಸಿಟಿ ಆಗಿದೆ. ಇದನ್ನು ನೋಡಿದ ಹಲವಾರು ಕಡೆ ಇಂತಹ ಕೃತ್ಯಗಳನ್ನು ಸಣ್ಣ ಸಣ್ಣ ಊರುಗಳಲ್ಲಿ ಮಾಡುತ್ತಿದ್ದಾರೆ. ಸಾರ್ವಜನಿಕರಿಗೆ ರಸ್ತೆಯಲ್ಲಿ ಓಡಾಡೋದಕ್ಕೂ ಭಯ ಹುಟ್ಟಿದೆ. ಇದಕ್ಕೆಲ್ಲ ಕಾರಣ ಚಲನಚಿತ್ರಗಳಲ್ಲಿ ರೌಡಿಗಳ ಹೊಡೆದಾಟವನ್ನು ಅತಿಯಾಗಿ ತೋರಿಸುತ್ತಾರೆ. ಒಂದು ಸಿನಿಮಾದಲ್ಲಿ ರೌಡಿಗಳ ಪಾತ್ರಧಾರಿ ಆಗಿ ಮಾಡಿರುವ ಉದಾಹರಣೆಗಳು ಇದೆ. ದೂರದರ್ಶನದಲ್ಲಿ ಕ್ರೈಂ ಸುದ್ದಿಗಳ ಅಬ್ಬರ ಹೆಚ್ಚಾಗಿದೆ. ಇದನ್ನು ನೋಡಿದ ಮಕ್ಕಳಿಗೆ ಕೆಟ್ಟ ಪರಿಣಾಮ ಇರುತ್ತದೆ. ಮನಸ್ಸಿಗೆ ಗಾಸಿಯಾಗುತ್ತದೆ. ರಸ್ತೆಯಲ್ಲಿ ನಡೆಯುವ ಘಟನೆಗಳು ನೋಡಿದರೆ ಸಿನಿಮಾವನ್ನು ಮೀರಿಸುತ್ತಿದೆ. ಗಂಡ, ಮಕ್ಕಳು, ತಾಯಿ, ತಂದೆ, ಸ್ನೇಹಿತರನ್ನು ಕೊಲೆ ಮಾಡಿ ಹೆಣ್ಣು ಮಕ್ಕಳು ಇಂತಹ ಕ್ರೈಂಗಳಲ್ಲಿ ಭಾಗಿಯಾಗುತ್ತಿದ್ದಾರೆ. ರಾಜಕೀಯ ಬಲದಿಂದ ಮಹಿಳಾ ಪೊಲೀಸರಿಗೆ ಕೈ ಮಾಡಿದ್ದಾರೆ. ಇಂತಹ ಸಮಾಜ ದ್ರೋಹಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಆ ಶಿಕ್ಷೆ ನೋಡಿದ ಮತ್ತೊಬ್ಬರು ಇಂತಹ ತಪ್ಪುಗಳನ್ನು ಮಾಡಲು ಭಯಪಡುವಂತಾಗಬೇಕು. ಸಮಾಜವನ್ನು ದಾರಿಗೆ ತರಲು ಕಠಿಣ ಶಿಕ್ಷೆ ಜಾರಿಗೆ ತನ್ನಿ, ಸಾರ್ವಜನಿಕರಿಗೆ ನೆಮ್ಮದಿ ನೀಡಿ, ಪುಂಡರ ಅಟ್ಟಹಾಸ ನಿಲ್ಲಬೇಕು. –ಎಂ.ಎಸ್.ಉಷಾ ಪ್ರಕಾಶ್, ಲೇಖಕಿ, ಕವಯಿತ್ರಿ ಮೈಸೂರು.

ಎತ್ತ ಸಾಗುತ್ತಿದೆ ಸಂಸದೀಯ ಪ್ರಜಾ ವ್ಯವಸ್ಥೆ?

ಮಾನ್ಯರೆ,

ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಅದರಲ್ಲೂ ವಿಶೇಷವಾಗಿ ವಿಧಾನ ಸಭೆಯಲ್ಲಿ ಇತ್ತೀಚೆಗೆ ನಡೆದ ವಿಶೇಷ ಅಧಿವೇಶನದಲ್ಲಿ ಕೆಲವು ಸದಸ್ಯರು ನಡೆದುಕೊಂಡ ರೀತಿ ನಿಜವಾಗಿಯೂ ತಲೆ ತಗ್ಗಿಸುವಂತಿದೆ. ಅವರ ಬಳಸಿದ ಭಾಷಾ ಪ್ರಯೋಗ, ಅಂಗ ಸನ್ನೆಗಳು ಮುಂತಾದವುಗಳು ಅತ್ಯಂತ ಕೆಟ್ಟ ರೀತಿಯಲ್ಲಿದ್ದು, ಇಡೀ ಸಂಸದೀಯ ಪ್ರಜಾವ್ಯವಸ್ಥೆಗೆ ಮಾರಕವಾಗುವಂತಿತ್ತು.

ಓರ್ವ ಹಿರಿಯ ಸದಸ್ಯರು ಬಳಸಿದ ಭಾಷೆ ಅತ್ಯಂತ ಕೀಳು ಅಭಿರುಚಿಯಿಂದ ಕೂಡಿತ್ತು ಹಾಗೂ ಅಸಂಸದೀಯವಾಗಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆಗಳಿಗೆ ಅತ್ಯಂತ ಮಹತ್ವದ ಸ್ಥಾನ ನೀಡಲಾಗಿದೆ. ಇಂತಹ ಪ್ರಮುಖ ಜವಾಬ್ದಾರಿಯನ್ನು ಹೊತ್ತಿರುವ ಅವರ ನಡವಳಿಕೆಯನ್ನು ಇಡೀ ರಾಜ್ಯವೇ ಗಮನಿಸುತ್ತಿದೆ.

ಸಭಾ ಕಲಾಪಗಳನ್ನು ದೂರದರ್ಶನ ಸೇರಿದಂತೆ ವಿವಿಧ ಚಾನಲ್‌ಗಳು ನೇರ ಪ್ರಸಾರ ಮಾಡುತ್ತವೆ. ಹೀಗಾಗಿ ಈ ಘನ ಸದಸ್ಯರು ಆಡುವ ಪ್ರತಿಯೊಂದು ಮಾತುಗಳು ಕೂಡ ಗಮನಿಸಲ್ಪಡುತ್ತವೆ. ತಮ್ಮ ಘನತೆಗೆ ತಕ್ಕಂತೆ ಮಾತನಾಡಬೇಕೆ ಹೊರತು, ಬಾಯಿ ಚಪಲಕ್ಕಾಗಲಿ ಅಥವಾ ಪಕ್ಷದ ನಾಯಕರನ್ನು ಓಲೈಸುವುದಕ್ಕಾಗಿ ಆಡುವ ಇಂತಹ ಕೆಳಮಟ್ಟದ, ಸಭ್ಯತೆಯ ಎಲ್ಲೆಯನ್ನು ಮೀರುವ ಮಾತುಗಳು ತೀರಾ ಖಂಡನಾರ್ಹವಾಗಿದೆ. ಅನೇಕ ವೇಳೆ ಸಭಾಧ್ಯಕ್ಷರೇ ಮೂಕ ಪ್ರೇಕ್ಷಕರಾಗಿ ಇರಬೇಕಾದ ಸನ್ನಿವೇಶ ಎದುರಾಗಿದೆ. ಇನ್ನು ಮುಂದಾದರು, ಮಾನ್ಯ ಶಾಸಕರು ಇದರ ಬಗ್ಗೆ ಗಮನ ಹರಿಸಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು.

ಮೈಸೂರು ಪಾಲಿಕೆಯ ಬೇಜವಾಬ್ದಾರಿ!

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ನಿವಾಸದ ಬಳಿ ಇರುವ ಪ್ರಯಾಣಿಕರ ತಂಗುದಾಣವಿದು! ಮೈಸೂರು ಮಹಾನಗರಪಾಲಿಕೆಯ ಕನಸಿನ ಕೂಸು ಇದು!! ಹಸಿರುನಗರ.... ಸುಂದರ ನಗರ..... ಸ್ವಚ್ಛ ಮೈಸೂರು... ಪರಿಸರ ಸಂರಕ್ಷಿಸಿ.... ಎಂಬ ಘೋಷವಾಕ್ಯಗಳ ಹೊಂದಿರುವ ಈ ತಂಗುದಾಣ ಕ್ಕೊದಗಿದ ದುಸ್ಥಿತಿಗೆ ಮೈಸೂರು ಪಾಲಿಕೆ ಬೇಜವಾಬ್ದಾರಿಯೇ ಕಾರಣವಲ್ಲವೇ?



–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಎಲ್ಲದಕ್ಕೂ ಬೆಲೆ ಕಟ್ಟಬೇಡಿ; ಮೌಲ್ಯ ತಿಳಿದು ನೋಡಿ...!

ಇದರಿಂದ ಏನು ಲಾಭ? ಇದಕ್ಕೆ ಎಷ್ಟು ಬಿತ್ತು? ಕೊನೆಗೆ ಏನು ಸಿಗುತ್ತೆ? ಅವರಿಂದ ನನಗೆ ಆಗಬೇಕಾದ ಲಾಭವೇನು? ಅವರು ಎಷ್ಟರವರು ಅಂತ ಗೊತ್ತು? ನಿಮ್ಮದು ಸ್ವಂತ ಮನೇನಾ? ಅಥವಾ ಬಾಡಿಗೆ ಮನೇನಾ? ಸಂಬಳ ಎಷ್ಟು ಬರುತ್ತೆ? ನನ್ನ ಸೈಟ್ ಬೆಲೆ ಎಷ್ಟಾಗಿದೆ ಗೊತ್ತಾ? ಅವರ ಬ್ಯಾಂಕ್ ಬ್ಯಾಲೆನ್ಸ್ ಗೊತ್ತಾದ್ರೆ ಸುಸ್ತಾಗಿ ಬಿಡ್ತಿರಾ!..... ಇಂತಹ ಮಾತುಗಳನ್ನು ಕೇಳುವುದು ಇಂದು ಸರ್ವೆಸಮಾನ್ಯವಾಗಿಬಿಟ್ಟಿವೆ.

ನಿರ್ಜೀವ ವಸ್ತುಗಳಿಗೆ ಬೆಲೆ ಕಟ್ಟುವಂತೆ ಜೀವಗಳಿಗೆ, ಭಾವಗಳಿಗೆ, ನೋವಿಗೆ, ನಲಿವಿಗೆ, ಹುಟ್ಟಿಗೆ, ಸಾವಿಗೆ..... ಎಲ್ಲದಕ್ಕೂ ಬೆಲೆ ಕಟ್ಟಿ ಬೀಸಾಕುವ ವೈಶ್ಯ ಯುಗ ಇದಾಗಿದೆ. ಈ ವ್ಯಾಪಾರಿ ಕಾಲಘಟ್ಟದಲ್ಲಿ ಜ್ಞಾನ, ಅರಿವು, ಸಜ್ಜನಿಕೆ, ಸದಾಚಾರ..... ಇವೆಲ್ಲವೂ ವ್ಯಕ್ತಿಯೊಬ್ಬರ ಮೌಲ್ಯ ತಿಳಿಸುತ್ತವೆಯಾದರೂ ಜನರ ಲೆಕ್ಕಾಚಾರದಲ್ಲಿ ಅವು ಸವಕಲು ನಾಣ್ಯಗಳಾಗಿವೆ. ಮೌಲ್ಯಗಳ ಮೌಲ್ಯವನ್ನೇ ಅರಿಯದ ಜನರು ಎಲ್ಲದಕ್ಕೂ ಬೆಲೆ ಕಟ್ಟಿ ಸಣ್ಣವರಾಗುತ್ತಿದ್ದಾರೆ. ಒಬ್ಬ ವ್ಯಕ್ತಿಗೆ ಗೌರವ ಸಿಗಲು ಇಂದು ಅವನು ಜ್ಞಾನವಂತ, ಹೃದಯವಂತ, ಗುಣವಂತನಾಗುವುದಕ್ಕಿಂತ ಹಣವಂತನಾಗಿದ್ದರೆ ಸಾಕು!

ಇಂದು ಒಂದು ಸಣ್ಣ ಸೂಜಿಯೇ ಆಗಲಿ, ದೊಡ್ಡ ವಿಮಾನವೇ ಆಗಲಿ ಅವುಗಳನ್ನು ನೋಡಿದ ತಕ್ಷಣ ಅವುಗಳ ಬಳಕೆಯಿಂದಾಗುವ ಮೌಲ್ಯವನ್ನು ಅರಿಯುವ ಗೌರವಿಸುವ ಬದಲು ಅವುಗಳ ಬೆಲೆಯನ್ನು ತಿಳಿಯುವ ಅಳೆಯುವ ತವಕ ಅನೇಕರಿಗಿದೆ. ಜನರು ನೋಡಿದ ವಸ್ತುಗಳನ್ನೆಲ್ಲಾ ಖರೀದಿಸದೇ ಇದ್ದರೂ, ಅವರ ಬಳಕೆಗೆ ಅವುಗಳು ಅವಶ್ಯವಿಲ್ಲದಿದ್ದರೂ, ಅವುಗಳ ಬೆಲೆ ತಿಳಿಯುವ ಕುತೂಹಲ ಅಥವ ಒಂಥರ ಚಪಲ ಇದೆ.


ಹೀಗೆ ಬೆಲೆಕಟ್ಟುವ ವಿಕೃತ ಸಂಸ್ಕೃತಿ ಹೇಗೆ ಮನುಷ್ಯನ ಮನಸ್ಸನ್ನು ಆವರಿಸಿಕೊಂಡಿದೆ ಎಂದರೆ ವ್ಯಕ್ತಿಗಳನ್ನು ನೋಡಿದಾಗಲೂ ಅವರಿಗೂ ಒಂದು ಬೆಲೆ ನಿಗದಿ ಮಾಡುವ ಲೆಕ್ಕಚಾರದಲ್ಲಿ ತೊಡಗುತ್ತಾರೆ. ಆ ವ್ಯಕ್ತಿಯ ವಿದ್ಯೆ, ತಿಳುವಳಿಕೆ, ಸಮಾಜಕ್ಕೆ ಅವರ ಕೊಡುಗೆ, ಅವರ ಸರಳ ಸಜ್ಜನಿಕೆ ಎಲ್ಲವನ್ನು ಬದಿಗೊತ್ತಿ ಅವರ ಉಡುಗೆ–ತೊಡುಗೆ, ಅವರ ವಾಹನ–ವಸ್ತು, ಅವರು ಧರಿಸಿರುವ ಚಿನ್ನ–ಬೆಳ್ಳಿ ಅಷ್ಟೇ ಏಕೆ ಅವರು ಧರಿಸಿರುವ ಪಾದರಕ್ಷೆಗಳ ಆಧಾರದ ಮೇಲೆ ಅವರಿಗೆ ಕೊಡಬೇಕಾದ ಗೌರವವನ್ನು ನಿರ್ಧರಿಸುತ್ತಾರೆ ಎಂದರೆ ಮನುಷ್ಯನ ಬೌದ್ಧಿಕ ದಾರಿದ್ರ್ಯ ಯಾವ ಮಟ್ಟಕ್ಕೆ ಇದೆ ಎಂದು ತಿಳಿಯಬಹುದು.

ಸಮಾಜ ಸುಧಾರಕರೊಬ್ಬರು ಸರಳ ಉಡುಗೆಯಲ್ಲಿ ದೇವಸ್ಥಾನಕ್ಕೆ ಹೋದರೆ ಅವರನ್ನು ಗದರಿ ಅವಮಾನಿಸುವ ಅಲ್ಲಿನ ಸಿಬ್ಬಂದಿ, ದೇಶವನ್ನು ಕೊಳ್ಳೆ ಹೊಡೆದ ಭ್ರಷ್ಟ ರಾಜಕಾರಣಿಯೊಬ್ಬ ತನ್ನ ಪಟಲಂಗಳ ಜೊತೆ ಅದೇ ದೇವಸ್ಥಾನಕ್ಕೆ ದಾಳಿ ಇಟ್ಟಾಗ ಸಲಾಮು ಹೊಡೆದು ಅವರನ್ನು ಕರೆದುಕೊಂಡು ಹೋಗಿ ಗರ್ಭಗುಡಿ ಹತ್ತಿರ ನಿಲ್ಲಿಸುತ್ತಾರೆ. ಈ ಯುಗದಲ್ಲಿ ನಮ್ಮ ನಾಡಿನಲ್ಲಿ ಇದಕ್ಕಿಂತ ವಿಪರ್ಯಾಸದ ಸಂಗತಿ ಮತ್ತೊಂದಿಲ್ಲ, ಅಲ್ಲವೇ?

ಯಾವುದೇ ಪ್ರಶಸ್ತಿ ಪುರಸ್ಕಾರಗಳು ಸಾಧಕರ ಸಾಧನೆಗೆ ಸಂದ ಒಂದು ಗೌರವವಾಗಿರುತ್ತದೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕು. ಆದರೆ ಇಂದು ಪ್ರಶಸ್ತಿ ಪುರಸ್ಕಾರಗಳ ಜೊತೆ ಕೊಡುವ ನಗದು ಪುರಸ್ಕಾರಗಳಿಂದ ಅವುಗಳಿಗೆ ಬೆಲೆ ಕೊಡುತ್ತಿರುವುದು ದುರದೃಷ್ಟಕರ. ಅಷ್ಟೇ ಅಲ್ಲ ಸಂಘಸಂಸ್ಥೆಗಳು ಕೊಡ ಮಾಡುವ ಪ್ರಶಸ್ತಿ ಪುರಸ್ಕಾರಗಳಲ್ಲಿ ಮೌಲ್ಯಯುತ ಅರ್ಹ ಸಾಧಕರ ಜೊತೆಗೆ ಕ್ರಿಮಿನಲ್ ಹಿನ್ನಲೆಯುಳ್ಳವರಿಗೂ ಪ್ರಶಸ್ತಿಗಳನ್ನು ನೀಡುತ್ತಿರುವುದು ಪ್ರಶಸ್ತಿಗಳ ಮೌಲ್ಯವನ್ನೇ ಕುಸಿಯುವಂತೆ ಮಾಡಿದೆ.

ಜಾತಿ, ಧರ್ಮದ ಹೆಸರಿನಲ್ಲಿ ಲಾಬಿ ಮಾಡಿ ಪ್ರಶಸ್ತಿ ಪಡೆಯುವ ಪುಂಡರು ಸಹ ಇರುತ್ತಾರೆ. ಆ ಕಾರಣಕ್ಕೆ ಪ್ರಶಸ್ತಿ ಬಂದಾಗ ಎಲ್ಲಿ ಸ್ನೇಹಿತರು, ಬಂಧು–ಬಳಗ ನಮ್ಮನ್ನೂ ಅವರಂತೆ ಕಾಣುತ್ತಾರೆಯೇ ಎಂದು ಭಾವಿಸುತ್ತಾರೆ. ಆ ಕಾರಣಕ್ಕೆ ಸಜ್ಜನ ಸಾಧಕರು ಪ್ರಶಸ್ತಿ ಸ್ವೀಕರಿಸಲು ಹಿಂಜರಿಯುವಂತಾಗಿದೆ.

ಚಿನ್ನದ ಪದಕ, ಬೆಳ್ಳಿ ಪದಕಗಳು ಪುರಸ್ಕೃತರಿಗೆ ಒಂದು ಗೌರವದ ಸಂಕೇತವಾಗಿರುತ್ತವೆ. ಆದರೆ ಜನರು ಆ ಪದಕಗಳಲ್ಲಿ ಎಷ್ಟು ಶುದ್ಧತೆ ಇದೆ ಎಂದು ಅನುಮಾನಿಸುತ್ತಾರೆ. ಅವರನ್ನು ಚಿನ್ನದ ಪದಕಕ್ಕೆ ಭಾಜನರಾದರು ಎಂಬುದನ್ನು ಪರಿಗಣಿಸಿ ಗೌರವಿಸದೆ, ಆ ಪದಕಗಳಲ್ಲಿ ಎಷ್ಟು ಗ್ರಾಂ ಚಿನ್ನವಿದೆ, ಅದು ಎಷ್ಟು ಬೆಲೆ ಬಾಳುತ್ತದೆ? ಎಂದು ಲೆಕ್ಕ ಹಾಕುವ ದೊಡ್ಡ ಜನರು ಎಂದು ಕರೆಯಿಸಿಕೊಳ್ಳುವ ಸಣ್ಣ ಜನರಿದ್ದಾರೆ. ಶುಭ ಸಮಾರಂಭಗಳಲ್ಲಿ ಅನೇಕ ಮಹಿಳೆಯರು ಇತರ ಮಹಿಳೆಯರು ಧರಿಸಿರುವ ಸೀರೆ, ಚಿನ್ನಾಭರಣಗಳನ್ನು ಕ್ಷಣ ಮಾತ್ರದಲ್ಲಿ ಸ್ಕ್ಯಾನ್ ಮಾಡಿ, ಅವುಗಳ ಬೆಲೆ ಮೇಲೆ ಅವರಿಗೆ ಬೆಲೆ ಕೊಟ್ಟು ಮಾತನಾಡಿಸುವುದು ವಿಪರ್ಯಾಸದ ಸಂಗತಿ.



"ನಮಗೆ ಬೆಲೆ ಸಿಗದ ಜಾಗದಲ್ಲಿ ನಮ್ಮ ಪಾದರಕ್ಷೆಯನ್ನು ಸಹ ಬಿಡಕೂಡದು ಎಂಬ ಮಾತು ಚಾಲ್ತಿಯಲ್ಲಿದೆ. ಎಷ್ಟೋ ಜನರು ಆಹ್ವಾನ ಪತ್ರಿಕೆ ಕೊಟ್ಟು ಆಹ್ವಾನಿಸಿದ್ದರೂ, ಅವರ ಕಾರ್ಯಕ್ರಮಗಳಿಗೆ ಹೋದಾಗ, ತಮ್ಮ ಸ್ಥಾನಕ್ಕಿಂತ ಮೇಲಿನವರನ್ನು ಗೌರವಿಸಿ, ಇತರರನ್ನು ಕಡೆಗಣಿಸುತ್ತಿರುತ್ತಾರೆ. ಕತ್ತೆಗೇನು ಗೊತ್ತು ಕಸ್ತೂರಿ ಗುಣ ಎಂದು ನಮ್ಮ ಮೌಲ್ಯ ಅರಿಯದ ಅಂತಹ ಅಧಮರಿಂದ ಆರೋಗ್ಯಕರ ಅಂತರ ಕಾಪಾಡಿಕೊಳ್ಳುವುದು ಒಳಿತು. ಅಂತಹ ಮಹಾನುಭಾವರು ವ್ಯಕ್ತಿಗಳಿಗೆ ಗೌರವ ನೀಡಲು ಬೇರೆಯದೇ ಮಾನದಂಡ ಅನುಸರಿಸುತ್ತಿರುತ್ತಾರೆ. ಅಂತಹವರಿಗೆ ಅಹಂಕಾರಕ್ಕೆ ಉದಾಸೀನವೇ ಮದ್ದು ಎಂದು ಕಾರ್ಯಕ್ರಮಕ್ಕೆ ಹೋಗಿ ಅಗೌರವ ಅನುಭವಿಸುವುದಕ್ಕಿಂತ ಗೈರುಹಾಜರಾಗಿ ನಮ್ಮ ಗೌರವ ಉಳಿಸಿಕೊಳ್ಳುವುದು ಒಳಿತು.

ಪುರುಷರು ಸಹ ಇತರೆ ಪುರುಷರು ತರುವ ವಾಹನಗಳ ಆಧಾರದ ಮೇಲೆ ಅವರನ್ನು ಗೌರವಿಸುವುದುಂಟು. ದ್ವಿಚಕ್ರ ವಾಹನಕ್ಕೆ ಒಂದು ಮರ್ಯಾದೆ, ನಾಲ್ಕು ಚಕ್ರ ವಾಹನಕ್ಕೆ ಒಂದು ಮರ್ಯಾದೆ !

ಚಿನ್ನ–ಬೆಳ್ಳಿಗೆ ಕೊಡುವ ಮೌಲ್ಯವನ್ನು ಚಿನ್ನದಂತಹ ವ್ಯಕ್ತಿತ್ವ ಹೊಂದಿರುವವರಿಗೆ ನೀಡದೇ ಇರುವುದು ದುರದೃಷ್ಟಕರ. ಅನೇಕ ಚಿನ್ನದಂತಹ ಸಂಬಂಧಗಳು ಚಿನ್ನ–ಬೆಳ್ಳಿ ವಿಚಾರಕ್ಕೆ ಮುರಿದುಬಿದ್ದಿವೆ. ಮನುಷ್ಯನಿಗೆ ಗಳಿಸಬಹುದಾದ ನಿರ್ಜೀವ ಲೋಹದ ಮೇಲೆ ಇರುವ ಮೋಹ, ಸಜೀವ ದೇಹಗಳ ಮೇಲೆ ಇಲ್ಲದೇ ಇರುವುದು ವಿಪರ್ಯಾಸ. ಕೈಯಲ್ಲಿ ನಾಲ್ಕು ಪುಸ್ತಕ ಹಿಡಿದುಕೊಂಡು ಬರುವ ವಿದ್ಯಾವಂತ, ಬುದ್ಧಿವಂತನಿಗಿಂತ, ಕೈಬೆರಳುಗಳಿಗೆ ನಾಲ್ಕು ಚಿನ್ನದ ಉಂಗುರ ಧರಿಸಿ ಬರುವ ಶ್ರೀಮಂತನಿಗೆ ಬೆಲೆ ಕೊಟ್ಟು ಎಲ್ಲರೆದುರು ಮನ್ನಣೆ ಕೊಡುತ್ತಿರುವುದು ಈ ನಾಗರೀಕ ಸಮಾಜಕ್ಕೆ ನಾಚಿಕಗೇಡಿನ ಸಂಗತಿ.

ಈ ಲೆಕ್ಕಾಚಾರದ ಪ್ರಪಂಚದಲ್ಲಿ ಪ್ರಯೋಜನವಿದ್ದರೆ ಮಾತ್ರ ನೆಲೆ, ಬೆಲೆ ಎನ್ನುವಂತಾಗಿದೆ. ನಾನು ರಚಿಸಿರುವ ಚೌಪದಿಯೊಂದರಲ್ಲಿ ಹಾಲು ಕೊಡುವವರಗೆ ಮಾತ್ರ ಆಕಳಿಗೆ ಆರಾಧನ, ದುಡಿದು ತರುವವರಗೆ ಮಾತ್ರ ಅಪ್ಪ ಮನೆಯ ಯಜಮಾನ, ಪ್ರಯೋಜನ ಇದ್ದರೆ ಮಾತ್ರ ಸಮಾಜದಲ್ಲಿ ಸ್ಥಾನ–ಮಾನ ಎಂದ ನಮ್ಮ ಅರಿವಿನ ಅಪ್ರಮೇಯ? ಎಂದು ಬರೆದಿದ್ದೇನೆ. ಹೌದಲ್ಲವೇ? ಒಂದು ಹಸುವಿಗೆ ಮನೆಯಲ್ಲಿ ಮನ್ನಣೆ ಸಿಗುವುದು ಅದರ ಪ್ರಯೋಜನದಿಂದ ಮಾತ್ರ. ಹಸು ಹಾಲು ಕೊಡುತ್ತಿದ್ದರೆ, ಕರು ಹಾಕುವ ಸಾಮರ್ಥ್ಯವಿದ್ದರೆ ಅದರ ಲಾಲನೆ, ಪಾಲನೆ ಬೇರೆ ರೀತಿ ಇರುತ್ತದೆ. ಅದು ಗೊಡ್ಡು ಹಸು ಎಂದು ತಿಳಿದಾಕ್ಷಣ ಅದು ಬೆಲೆ ಕಳೆದುಕೊಳ್ಳುತ್ತದೆ, ಕ್ರಮೇಣ ಕಟುಕನಿಗೆ ಮಾರಾಟಕ್ಕೆ ಒಳಗಾಗುವ ಮೂಲಕ ಮಾಲೀಕನ ಮನೆಯಲ್ಲಿ ನೆಲೆಯನ್ನೂ ಕಳೆದುಕೊಳ್ಳುತ್ತದೆ. ಹಾಗೆಯೇ ಮನೆಯ ಯಜಮಾನ ಎನಿಸಿಕೊಳ್ಳುವ ಅಪ್ಪ ದುಡಿದು ತರುವವರಗೆ ಮಾತ್ರ ಎಲ್ಲರೂ ಗೌರವಿಸುತ್ತಾರೆ.

ಅಪ್ಪನ ದುಡಿಮೆಯು ನಿಂತ ದಿನದಿಂದಲೇ ಮನೆಯಲ್ಲಿ ಅಪ್ಪನ ಬೆಲೆ ಕ್ರಮೇಣ ಕಡಿಮೆಯಾಗುತ್ತದೆ. ಕೆಲವರ ಮನೆಯಲ್ಲಿ ಹಿರಿಯ ಜೀವಗಳನ್ನು ಗುಜರಿ ವಸ್ತುಗಳಂತೆ ಕಾಣುತ್ತಿರುವುದು ನೋವಿನ ಸಂಗತಿಯಾಗಿದೆ. ಆದರೆ ಕೆಲವರು ಮಾತ್ರ ಈ ಮಾತಿಗೆ ಅಪವಾದ ಎನ್ನುವಂತೆ ಹಿರಿಯರಿಗೆ ಅಗತ್ಯ ಸಮಯ ಕೊಟ್ಟು, ಅವರ ಆರೋಗ್ಯ ಸ್ಥಿತಿಯನ್ನು ಕಾಪಾಡಿ, ಅವರಿಗೆ ವಯಸ್ಸಿಗೆ ತಕ್ಕ ಹಾಗೆ ಗೌರವಿಸುವುದನ್ನು ಸಹ ಕಾಣಬಹುದು. ಕೆಲವರ ಮೌಲ್ಯ ಅವರು ಮೃತರಾದ ಮೇಲೆ ತಿಳಿಯುತ್ತದೆ. ಇದ್ದಾಗ ಬೆಲೆ ಕೊಡದೆ, ಅವರು ಮರಣ ಹೊಂದಿದ ನಂತರ ಅವರ ಭಾವಚಿತ್ರವನ್ನು ದಿನಪತ್ರಿಕೆಗಳಲ್ಲಿ ದೊಡ್ಡದಾಗಿ ಹಾಕಿಸಿ, ಊರಿಗೆಲ್ಲಾ ಊಟ ಹಾಕಿದರೆ ಮೃತರಿಗೆ ಗೌರವ ನೀಡಿದಂತೆ ಆಗುತ್ತದೆಯೇ?

ಒಲವೆ ಜೀವನ ಸಾಕ್ಷಾತ್ಕಾರ ಎಂಬ ಕಾಲ ಹೋಗಿ ಒಲವೇ ಜೀವನ ಲೆಕ್ಕಾಚಾರ ಎಂಬಂತಾಗಿದೆ ಈ ಕಲಿಯುಗ. ಪ್ರೀತಿ, ಸ್ನೇಹ ಸಂಬಂಧಗಳನ್ನು ಅವರು ಕೊಡುವ ಉಡುಗೊರೆಗಳ ಮೇಲೆ ನಿರ್ಧರಿಸುತ್ತಿರುವುದು, ಕೊಡುಗೆ ಮೇಲೆ ವ್ಯಕ್ತಿಯ ಮೌಲ್ಯವನ್ನು ನಿರ್ಧರಿಸುತ್ತಿರುವುದು ಅನಾರೋಗ್ಯಕರ ಚಿಂತನೆಯಾಗಿದೆ. ವಿಶೇಷ ದಿನಗಳಲ್ಲಿ ಪತಿ–ಪತ್ನಿ ನಡುವೆಯೂ ಅವರು ಕೊಡುವ ಉಡುಗೊರೆ ಮೇಲೆ ಅವರಿಗೆ ಕೊಡುವ ಗೌರವ ನಿರ್ಧಾರವಾಗುತ್ತಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ.

ಒಬ್ಬ ಮನುಷ್ಯನ ಯೋಗ್ಯತೆ ತಿಳಿಯುವುದು ಅವನಿಗೆ ಸ್ಥಾನಮಾನ, ಅಧಿಕಾರ ಇದ್ದಾಗ ಅಲ್ಲ. ಅವನಿಗೆ ಅಧಿಕಾರ ಹೋದಾಗ, ನಿವೃತ್ತಿಯಾದಾಗ ಜನ ಕೊಡುವ ಗೌರವವೇ ನಿಜವಾದ ಮೌಲ್ಯ ಹೊಂದಿರುತ್ತದೆ. ಅಧಿಕಾರದಲ್ಲಿದ್ದಾಗ ಅಧಿಕಾರಕ್ಕೆ ಹೆಚ್ಚು ಬೆಲೆ ಕೊಡುತ್ತಾರೆಯೇ ಹೊರತು, ಮನುಷ್ಯನಿಗೆ ಅಲ್ಲ. ಎಷ್ಟೋ ಜನ ಅಧಿಕಾರದಲ್ಲಿದ್ದಾಗ ಅಹಂಕಾರದಿಂದ ಮೆರೆದಿರುತ್ತಾರೆ. ಅವರು ಅಯೋಗ್ಯರು ಎಂದು ತಿಳಿದಿದ್ದರೂ ಅಧಿಕಾರ ಇರುವ ಕಾರಣಕ್ಕೆ ಜನ ಗೌರವಿಸುತ್ತಿರುತ್ತಾರೆ. ನಿವೃತ್ತಿಯಾದ ಮೇಲೆ ಎದುರಿಗೆ ಸಿಕ್ಕರೂ ಪರಿಚಯಸ್ಥ ಜನರು ಕನಿಷ್ಠ ಗೌರವವನ್ನು ನೀಡುವುದಿಲ್ಲ. ಆಗ ಅವರಿಗೆ ಆಗುವ ನೋವು ಅಷ್ಟಿಷ್ಟಲ್ಲ. ಆದರೆ ಎಷ್ಟೋ ಜನ ನಿವೃತ್ತರಾದರೂ ಜನರ ಗೌರವಕ್ಕೆ ಭಾಜನರಾಗುತ್ತಾರೆ ಅಂದರೆ ಅವರ ವ್ಯಕ್ತಿತ್ವ ಉತ್ತಮವಾಗಿದೆ ಎಂದರ್ಥ.

ನಮಗೆ ಬೆಲೆ ಸಿಗದ ಜಾಗದಲ್ಲಿ ನಮ್ಮ ಪಾದರಕ್ಷೆಯನ್ನು ಸಹ ಬಿಡಕೂಡದು ಮಾತು ಚಾಲ್ತಿಯಲ್ಲಿದೆ. ಎಷ್ಟೋ ಜನರು ಆಹ್ವಾನ ಪತ್ರಿಕೆ ಕೊಟ್ಟು ಆಹ್ವಾನಿಸಿದ್ದರೂ, ಅವರ ಕಾರ್ಯಕ್ರಮಗಳಿಗೆ ಹೋದಾಗ, ತಮ್ಮ ಸ್ಥಾನಕ್ಕಿಂತ ಮೇಲಿನವರನ್ನು ಗೌರವಿಸಿ, ಇತರರನ್ನು ಕಡೆಗಣಿಸುತ್ತಿರುತ್ತಾರೆ. ಕತ್ತೆಗೇನು ಗೊತ್ತು ಕಸ್ತೂರಿ ಗುಣ ಎಂದು ನಮ್ಮ ಮೌಲ್ಯ ಅರಿಯದ ಅಂತಹ ಅಧಮರಿಂದ ಆರೋಗ್ಯಕರ ಅಂತರ ಕಾಪಾಡಿಕೊಳ್ಳುವುದು ಒಳಿತು. ಅಂತಹ ಮಹಾನುಭಾವರು ವ್ಯಕ್ತಿಗಳಿಗೆ ಗೌರವ ನೀಡಲು ಬೇರೆಯದೇ ಮಾನದಂಡ ಅನುಸರಿಸುತ್ತಿರುತ್ತಾರೆ. ಅಂತಹವರಿಗೆ ಅಹಂಕಾರಕ್ಕೆ ಉದಾಸೀನವೇ ಮದ್ದು ಎಂದು ಕಾರ್ಯಕ್ರಮಕ್ಕೆ ಹೋಗಿ ಅಗೌರವ ಅನುಭವಿಸುವುದಕ್ಕಿಂತ ಗೈರುಹಾಜರಾಗಿ ನಮ್ಮ ಗೌರವ ಉಳಿಸಿಕೊಳ್ಳುವುದು ಒಳಿತು.

ಎಲ್ಲದಕ್ಕೂ ಬೆಲೆ (Price) ಅಂದಾಜಿಸುವುದು ಒಳ್ಳೆಯ ಪ್ರವೃತ್ತಿಯಲ್ಲ. ಮೌಲ್ಯವನ್ನು (Value) ಅರಿತು ನಡೆದು ಕೊಳ್ಳಬೇಕು. ಯಾರೋ ನಮ್ಮನ್ನು ಕಡೆಗಣಿಸಿದರೂ ಎಂದ ಮಾತ್ರಕ್ಕೆ ನೊಂದುಕೊಳ್ಳಬಾರದು, ಅವರಿಗೆ ನಮ್ಮ ಮೌಲ್ಯ ತಿಳಿಯುವ ಯೋಗ್ಯತೆ ಇದೆಯೇ ಎಂದು ಭಾವಿಸಿ ಸುಮ್ಮನಿರಬೇಕು. ನಾವು ಮಾತ್ರ ಅತಿಥಿ ದೇವೋಭವ ಎಂಬಂತೆ ಅವರ ಸಿರಿವಂತಿಕೆ/ಬಡತನ ನೋಡದೆ ಸರ್ವರನ್ನು ಸಮಾನವಾಗಿ ಗೌರವಿಸಬೇಕು.

ಹೂರಣ: ಬೆಲೆ ಕಟ್ಟುವ ಬುದ್ಧಿ ಅನೇಕರಿಗೆ ಇರಬಹುದು,
ಮೌಲ್ಯ ಅರಿಯುವ ಯೋಗ್ಯತೆ ಎಲ್ಲರಿಗೂ ಇರದು!

ಭಾವನೆ, ರಾಗ, ತಾಳ ಸೇರಿದರೆ ಮಾತ್ರ ಉತ್ತಮ ಸಂಗೀತ

ಐವರು ಸಾಧಕರಿಗೆ ಕಲಾದೀಪ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉದ್ಯಮಿ ಜಗನ್ನಾಥ ಶೆಣೈ ಅಭಿಮತ

ಮೈಸೂರು, ಫೆ.8 (ಎಂಟಿವೈ)– ಭಾವನೆ, ರಾಗ ಮತ್ತು ತಾಳ ಸೇರಿದರೆ ಮಾತ್ರ ಉತ್ತಮ ಸಂಗೀತ ಹೊರಹೊಮ್ಮುತ್ತದೆ ಎಂದು ಉದ್ಯಮಿ ಎಂ. ಜಗನ್ನಾಥ ಶೆಣೈ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿ.ವಿ.ಮೊಹಲ್ಲಾದ ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ನಡೆದ ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟಿನ 39ನೇ ವಾರ್ಷಿಕೋತ್ಸವ, ಶ್ರೀ ಪುರಂದರ ದಾಸರು, ತ್ಯಾಗರಾಜರ ಆರಾಧನೆ ಹಾಗೂ ಐವರು ಸಾಧಕರಿಗೆ ಕಲಾದೀಪ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಪರಂಪರೆಯನ್ನು ಉಳಿಸಿ, ಬೆಳೆಸಬೇಕು. ಮನೆಯಲ್ಲಿ ಮಕ್ಕಳಿಗೂ ಸಂಗೀತ ಕಲಿಸಬೇಕು. ಆ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸಬೇಕು. ಮನಸ್ಸು ಸಮಾಧಾನದಿಂದ ಇರಲು ಸಂಗೀತ ಮುಖ್ಯ. ಕಲೆಯಿಂದ ನಂತರ ಆಧ್ಯಾತ್ಮದ ಕಡೆ ಹೊರಳಬಹುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಟ್ರಸ್ಟಿನ ಅಧ್ಯಕ್ಷ ಡಾ.ಪಿ.ಮೋಹನದಾಸ್‌ಭಟ್ ಮಾತನಾಡಿ, ಸಂಗೀತದಿಂದ ಸಂತೋಷ ಸಿಗುತ್ತದೆ. ಮನಸ್ಸು ಭಕ್ತಿಯ ಕಡೆಯ ತಿರುಗಿ ನಾದಮಯವಾಗುತ್ತದೆ. ಆದ್ದರಿಂದ ನಾದೋಪಾಸನೆ ಕೂಡ ಮುಖ್ಯ ಎಂದರು.



ಮೈಸೂರಿನ ವಿ.ವಿ.ಮೊಹಲ್ಲಾದ ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟಿನ 39ನೇ ವಾರ್ಷಿಕೋತ್ಸವದಲ್ಲಿ ಸಂಗೀತ ಕ್ಷೇತ್ರದ ಸಾಧಕರಿಗೆ ಕಲಾದೀಪ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನ: ಇದೇ ಸಂದರ್ಭದಲ್ಲಿ ಕರ್ನಾಟಕ ಸಂಗೀತ ಗಾಯಕಿಯರಾದ ಎಂ.ಎಸ್.ಶೀಲಾ, ಡಾ.ಬಿ.ಎನ್. ಮಂಜುಳಾ, ವೇಣುವಾದಕ ಎ.ವಿ. ದತ್ತಾತ್ರೇಯ, ಮೃದಂಗ ವಾದಕ ಕೆ.ಹೆಚ್. ರವಿಕುಮಾರ್ ಹಾಗೂ ವಾಗ್ಗೇಯಕಾರರಾದ ಡಾ.ಗೀತಾ ಸೀತಾರಾಮ್ ಅವರಿಗೆ ಕಲಾದೀಪ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇತ್ತೀಚೆಗೆ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿರುವ ಖ್ಯಾತ ಕೊಳಲು ವಾದಕ ಪ್ರೊ.ಸಿ.ಎ.ಶ್ರೀಧರ್ ಹಾಗೂ ಒಂಟಿಕೊಪ್ಪಲು ಶ್ರೀ ಪ್ರಸನ್ನ ವಿದ್ಯಾ ಗಣಪತಿ ಟ್ರಸ್ಟಿನ ಕಾರ್ಯದರ್ಶಿ ಸಿ.ಆರ್.ಹಿಮಾಂಶು ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅತಿಥಿಯಾಗಿದ್ದರು. ಹಿರಿಯ ವಿದ್ವಾಂಸರಾದ ಎಚ್.ಕೆ. ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಜಿ.ಎಸ್.ರಾಮಾನುಜಂ ಕಾರ್ಯಕ್ರಮ ನಿರೂಪಿಸಿದರು. ಕೇಶವ ಸರಳಾಯ ಸ್ವಾಗತಿಸಿ, ವಾರ್ಷಿಕ ವರದಿ ಮಂಡಿಸಿದರು. ವಿ.ಎಸ್.ರಮೇಶ್ ವಂದಿಸಿದರು. ಪೃಥ್ವಿ ಭಾಸ್ಕರ್ ಪ್ರಾರ್ಥಿಸಿದರು.

ನಂತರ ನಗರದ ಹಿರಿಯ ಸಂಗೀತ ವಿದ್ವಾಂಸರು, ವಿದುಷಿಯರು ಹಾಗೂ ಅವರ ಶಿಷ್ಯ ವೃಂದದಿಂದ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗಾಯನ ಗೋಷ್ಠಿ ನಡೆಯಿತು.

ಇದಕ್ಕೂ ಮೊದಲು ಸಾಂಪ್ರದಾಯಿಕವಾಗಿ ವಿ.ವಿ.ಮೊಹಲ್ಲಾದ ಪ್ರಮುಖ ರಸ್ತೆಗಳಲ್ಲಿ ಸಂಗೀತ ಕಲಾವಿದರ ಗಾಯನ ವಾದ್ಯ ವಾದನ ಸಹಿತ ಪುರಂದರದಾಸರ ಹಾಗೂ ತ್ಯಾಗರಾಜರ ಚಿತ್ರಗಳನ್ನು ಹೊತ್ತ ಅಲಂಕೃತ ರಥದ ಮೆರವಣಿಗೆ ನಡೆಯಿತು.

ಮುಕ್ತಕ ಕವಿ ಗೋಪಾಲ್ ಭಟ್ಟರಿಗೆ ಡಾ.ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿ

ಮೈಸೂರು: ಮೈಸೂರಿನ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿಯ 24ನೇ ವಾರ್ಷಿಕೋತ್ಸವವು ಫೆ.22ರಂದು ನಡೆಯಲಿದ್ದು, ಅಕಾಡೆಮಿ ವತಿಯಿಂದ ನೀಡಲಾಗುವ 2025–26ನೇ ಸಾಲಿನ ಡಾ.ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿಗೆ ಕೇರಳದ ಜನಪ್ರಿಯ ಮುಕ್ತಕ ಕವಿ ಗೋಪಾಲ್ ಭಟ್.ಸಿ.ಹೆಚ್ ಆಯ್ಕೆಯಾಗಿದ್ದಾರೆ. ಫೆ.22ರಂದು ಬೆಳಗ್ಗೆ 10.30ಕ್ಕೆ ಸರಸ್ವತಿಪುರಂನಲ್ಲಿರುವ ಮೈಸೂರು ರೋಟರಿ ವೆಸ್ಟ್ ಸಭಾಂಗಣದಲ್ಲಿ ನಡೆಯಲಿರುವ ಕರ್ನಾಟಕ ಮುಕ್ತಕ ಸಾಹಿತ್ಯ ಆಕಾಡೆಮಿ 24ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.



ಗೋಪಾಲ್‌ಭಟ್

ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ. ಸೋಮಶೇಖರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಡಾ.ಶರಣಪ್ಪ ಹಲಸೆ, ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಜನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ನೇತೃತ್ವದ ಹೊನ್ನಾರು ಜಾನಪದ ಗಾಯಕರ ತಂಡದಿಂದ ಜನಪದ ಗೀತೆಗಳ ಗಾಯನ ಏರ್ಪಡಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

'ಮೈಸೂರು ಸಂತೆ–2026' ಅದ್ಧೂರಿ ತೆರೆ

ಪಂಚ್ ಡೈಲಾಗ್‌ನಿಂದ ಮಿಂಚಿದ ಬಿಗ್‌ಬಾಸ್ ಖ್ಯಾತಿಯ ರಜತ್ ಕಿಶನ್



'ಮೈಸೂರು ಸಂತೆ' ಕಾರ್ಯಕ್ರಮ ಉದ್ದೇಶಿಸಿ ಬಿಗ್‌ಬಾಸ್ ಸೀಸನ್–11ರ ಖ್ಯಾತಿಯ ನಟ ರಜತ್ ಕಿಶನ್ ಮಾತನಾಡಿದರು.

ಮೈಸೂರು, ಫೆ.8(ವಿವಿಹೆಚ್)– ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರಿನ ಸಾಂಸ್ಕೃತಿಕ ಸೊಬಗು, ಪರಂಪರೆ, ಪ್ರವಾಸೋದ್ಯಮ, ವಾಣಿಜ್ಯೋದ್ಯಮ ಹಾಗೂ ಮೈಸೂರಿನ ಹಿರಿಮೆಯನ್ನು ಸಾರುವ, ಸಂಗೀತ, ಹಾಸ್ಯ, ನೃತ್ಯ, ಮನರಂಜನೆ ನೀಡುವ ಉದ್ದೇಶದಿಂದ ಫೆ.6, 7 ಹಾಗೂ 8 ರಂದು ಮೂರು ದಿನಗಳ ಕಾಲ ಆಯೋಜಿಸಿದ್ದ 'ಮೈಸೂರು ಸಂತೆ–2026' ಕಾರ್ಯಕ್ರಮಕ್ಕೆ ಭಾನುವಾರ ಅದ್ಧೂರಿ ತೆರೆ ಬಿದ್ದಿತು.

ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಜನಸಮೂಹ ನಾಟಕ, ನೃತ್ಯ, ಸಂಗೀತ, ವಾಣಿಜ್ಯೋದ್ಯಮ, ಖಾದ್ಯ ಸೇರಿದಂತೆ 100ಕ್ಕೂ ಹೆಚ್ಚು ಮಳಿಗೆಗಳಲ್ಲಿ ತಮಗಿಷ್ಟದ ವಸ್ತುಗಳ ಖರೀದಿ, ಆಟೋಟಗಳಲ್ಲಿ ಭಾಗವಹಿಸುವ ಮೂಲಕ ಮೈಸೂರು ಸಂತೆಯನ್ನು ಆನಂದಿಸಿದರು.

ಈ ವೇಳೆ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಬಿಗ್‌ಬಾಸ್ ಸೀಸನ್–11ರ ಖ್ಯಾತಿಯ ನಟ ರಜತ್ ಕಿಶನ್, ಪಂಚ್ ಡೈಲಾಗ್ ಮೂಲಕ ನೆರೆದಿದ್ದವರನ್ನು ರಂಜಿಸಿದರು.

ಬಳಿಕ ಮಾತನಾಡಿ, ಬಹಳ ಅದ್ಧೂರಿಯಾಗಿ ಮೈಸೂರಲ್ಲಿ ಕಾರ್ಯಕ್ರಮ ಆಯೋಜನೆಯಾಗಿದೆ. ಸಾಂಸ್ಕೃತಿಕ ನಗರಿಯಲ್ಲಿ ಎಲ್ಲಾ ಕಾರ್ಯಕ್ರಮಗಳಿಗೂ ಇಲ್ಲಿನ ಜನತೆ ಉತ್ತೇಜನ ನೀಡುತ್ತಾ ಬಂದಿದ್ದಾರೆ. ಅದರಿಂದಾಗಿಯೇ ಇಂತಹ ದೊಡ್ಡ ಕಾರ್ಯಕ್ರಮ ಇಂದು ಯಶಸ್ವಿಯಾಗಿದೆ ಎಂದರು.

ಮೈಸೂರು ಕರ್ನಾಟಕದ ಆಸ್ತಿ, ಇಲ್ಲಿ ಕಲೆಗಳ ಜೊತೆಗೆ, ಮಹಾನ್ ನಾಯಕರ, ಕಲಾವಿದರ ಉದಯವಾಗಿದೆ. ಇಂತಹ ನಗರಕ್ಕೆ ಯಾವುದೇ ಕಾರಣಕ್ಕು ಧಕ್ಕೆ ತರದ ಹಾಗೆ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಆಯೋಜಕರಾದ ಭರತ್ ಗೌಡ, ಕಾರ್ತಿಕ್, ಮಹೇಶ್, ಡಾ.ಪೂಜಾ ಜೋಶಿ, ಸ್ಮಿತಾ ಬಾಲು, ಸ್ನೇಹಲ್ ಇಗೂರ್, ರಮ್ಯಾ, ಚೈತ್ರಾ ಭರತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದೇಶ–ಧರ್ಮದ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲು ಹಿಂದೂ ಸಮಾಜೋತ್ಸವ ಆಯೋಜನೆ

ಶ್ರೀರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದ





ಮೈಸೂರಿನ ಕುವೆಂಪುನಗರದ ಉತ್ತರ ಕನ್ನಡ ಸಾಂಸ್ಕೃತಿಕ ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಭಾರತಾಂಬೆ ಫೋಟೋಗೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಮತ್ತೊಂದು ಚಿತ್ರದಲ್ಲಿ ಶೋಭಾಯಾತ್ರೆಯಲ್ಲಿ ಸಾಗುತ್ತಿರುವವರನ್ನು ಕಾಣಬಹುದು.

ಮೈಸೂರು,ಫೆ.8(ಪಿಎಂ)– ಭಾರತ ಮತ್ತು ಹಿಂದೂ ಧರ್ಮದ ಸಂರಕ್ಷಣೆ ಸಂಬಂಧ ನಮ್ಮ ಕರ್ತವ್ಯದ ಬಗ್ಗೆ ಅರಿವು ಮೂಡಿಸಲೆಂದೇ ಹಿಂದೂ ಸಮಾಜೋತ್ಸವ ಸಂಘಟಿಸಲಾಗಿದೆ ಎಂದು ಶ್ರೀರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದ ಹೇಳಿದರು.

ಮೈಸೂರಿನ ಕುವೆಂಪುನಗರದ ಲವಕುಶ ಉದ್ಯಾನವನ ಸಮೀಪದ ಉತ್ತರ ಕನ್ನಡ ಸಾಂಸ್ಕೃತಿಕ ಸಂಘದ ಸಭಾಂಗಣದಲ್ಲಿ ಕುವೆಂಪುನಗರ ಹಿಂದೂ ಸಮಾಜೋತ್ಸವ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಭಾರತ ದೇಶ, ಹಿಂದು ಧರ್ಮವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ನಾವಿಂದು ಯಾವ ಭಾರತವನ್ನು ನೋಡುತ್ತಿದ್ದೇವೆಯೋ ಅದು ಸಾಕಷ್ಟು ಪ್ರಗತಿಯಾಗಿದೆ. ಇಷ್ಟಾಗಿದ್ದರೂ ನಿಜವಾದ ಅಭಿವೃದ್ಧಿ ಹೊಂದಿದ ಭಾರತವನ್ನು ನಾವಿನ್ನೂ ನೋಡಬೇಕಿದೆ. ಅದಕ್ಕೆ ಬೇಕಾದ ಪರಿಶ್ರಮ, ನಿಷ್ಠೆಯನ್ನು ನಾವು ಅರಿಯಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಪಾಲಿನ ಕರ್ತವ್ಯ ಅರಿಯಬೇಕು ಎಂದು ಹೇಳಿದರು.

ವೈಭವಪೂರ್ಣವಾಗಿ ಭಾರತಮಾತೆ ಬೆಳೆಯುತ್ತಾಳೆ. ಅದಕ್ಕಾಗಿ ನಮ್ಮ ನಿಮ್ಮ ಕರ್ತವ್ಯವೂ ಇದೆ. ಅಂತಹ ಕರ್ತವ್ಯದ ಬಗ್ಗೆ ಅರಿವು ಮೂಡಿಸಲು ಹಿಂದೂ ಸಮಾಜೋತ್ಸವ ಸಂಘಟಿಸಲಾಗಿದೆ. ಅದನ್ನೇ ಒಂದು ವಾಕ್ಯದಲ್ಲಿ ಸ್ವಾಮಿ ವಿವೇಕಾನಂದರು 'ಭವಿಷ್ಯದ ಭಾರತ ನಮ್ಮ ಮೇಲೆ ಅವಲಂಬಿತವಾಗಿದೆ' ಎಂದು ಕರೆ ಕೊಟ್ಟಿದ್ದಾರೆ. ಅಂದರೆ ಯಾರೋ ಬಂದು ನಮ್ಮನ್ನು ಉದ್ಧಾರ ಮಾಡಬೇಕಿಲ್ಲ. ಉದ್ಧಾರವಾಗುವ ಎಲ್ಲಾ ಸಾಮರ್ಥ್ಯ ನಮ್ಮಲ್ಲಿದೆ ಎಂದು ವಿವೇಕಾನಂದರು ಹೇಳಿದ್ದಾರೆ. ನಾವು ಭಾರತೀಯತೆ, ನಮ್ಮ ಹಿಂದು ಧರ್ಮದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳಬೇಕು ಎಂದು ತಿಳಿಸಿದರು.


ಭಾರತದ ಭೂಮಿಯಲ್ಲಿ ಅಪಾರವಾದ ನೈಸರ್ಗಿಕ ಸಂಪತ್ತು ಅಡಗಿದೆ. ಆದರೆ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ನಾವು ಎಲ್ಲೋ ಒಂದು ಕಡೆ ವಿಫಲವಾಗುತ್ತಿದ್ದೇವೆ. ನಮ್ಮ ಸಂಸ್ಥೆಯ ಹಳೇ ವಿದ್ಯಾರ್ಥಿಯೊಬ್ಬರು ಒಬ್ಬ ಖ್ಯಾತ ವಿಜ್ಞಾನಿಯಾಗಿದ್ದು, ಅವರೊಮ್ಮೆ ನನ್ನೊಂದಿಗೆ ಇಸ್ರೇಲ್‌ನಂತಹ ಪುಟ್ಟ ದೇಶ ಅಭಿವೃದ್ಧಿಯಾಗಿರುವ ಬಗ್ಗೆ ಹೇಳಿದ್ದರು. ಮರಳು ಭೂಮಿಯಾದರೂ ಆ ದೇಶದಲ್ಲಿ ಕೃಷಿಯಲ್ಲಿ ಸಾಧಿಸಿದ ಪ್ರಗತಿ ಬಗ್ಗೆ ಕೇಳಿ ಅಚ್ಚರಿಯಾಯಿತು. ಹಾಗಾಗಿ ಆ ದೇಶದಂತೆ ನಾವು ನಮ್ಮಲ್ಲಿನ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಳ್ಳುವುದನ್ನು ಕಲಿಯಬೇಕು ಎಂದರು.

ಇದಕ್ಕೂ ಮುನ್ನ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕಾಮಾಕ್ಷಿ ಆಸ್ಪತ್ರೆ ವ್ಯವಸ್ಥಾಪಕ ಟ್ರಸ್ಟಿ ಎಂ.ಮಹೇಶ್ ಶೆಣೈ ಮಾತನಾಡಿ, ನಮ್ಮ ಹಿಂದು ಧರ್ಮ ಸಾವಿರಾರು ವರ್ಷದಷ್ಟು ಪುರಾತನ ಪರಂಪರೆಯನ್ನು ಹೊಂದಿದೆ. ಇಂತಹ ಧರ್ಮವನ್ನು ಉಳಿಸಿ ಎಂದು ಕೇಳುವ ಸನ್ನಿವೇಶ ನಿರ್ಮಾಣ ಆಗಿರುವುದು ದುರಂತವೇ ಸರಿ. ಎಷ್ಟೋ ವರ್ಷಗಳ ಕಾಲ ಪರಕೀಯರು ನಮ್ಮ ದೇಶದ ಮೇಲೆ ದಾಳಿ ನಡೆಸಿ ಸಂಪತ್ತನ್ನು ಲೂಟಿ ಮಾಡಿದರು. ಎಲ್ಲಾ ರೀತಿಯ ಆಕ್ರಮಣಗಳ ನಡುವೆಯೂ ನಮ್ಮ ಹಿಂದು ಧರ್ಮ ಸದೃಢವಾಗಿ ಉಳಿದಿದೆ ಎಂದು ಹೇಳಿದರು.

ನಮ್ಮಲ್ಲಿ ಒಗ್ಗಟ್ಟು ಮೂಡಿಸುವುದು ಇಂದು ಬಹುಮುಖ್ಯವಾಗಿದೆ. ನಮ್ಮ ಧರ್ಮದ ಸಂರಕ್ಷಣೆಗಾಗಿ ಸೂಕ್ತ ನಾಯಕರನ್ನು ಆಯ್ಕೆ ಮಾಡಿ ಅವರನ್ನು ಬೆಳೆಸುವ ಜವಾಬ್ದಾರಿ ಅರಿಯಬೇಕು. ಏಕೆಂದರೆ ಇಂದು ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣವಾಗಲು ಸೂಕ್ತ ನಾಯಕತ್ವ ಇದ್ದುದ್ದೇ ಕಾರಣ ವಾಯಿತು. ಇಲ್ಲವಾಗಿದ್ದರೆ ರಾಮ ಮಂದಿರ ನಿರ್ಮಾಣ ಕನಸಾಗಿಯೇ ಉಳಿಯುತ್ತಿತ್ತು. ಹಾಗಾಗಿ ಹಿಂದು ಧರ್ಮ ಸಂರಕ್ಷಣೆಗೆ ಸೂಕ್ತ ನಾಯಕರನ್ನು ಬೆಳೆಸಿ ಅವರಿಗೆ ಅಧಿಕಾರ ದಕ್ಕಿಸಿಕೊಡುವ ಜವಾಬ್ದಾರಿ ನಮ್ಮದಾಗಬೇಕು ಎಂದು ತಿಳಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಕುವೆಂಪುನಗರದ ಶ್ರೀ ಗಣಪತಿ ದೇವಸ್ಥಾನದಿಂದ ಶೋಭಾಯಾತ್ರೆ ನಡೆಸಲಾಯಿತು. ತೆರೆದ ಜೀಪಿನಲ್ಲಿ ಭಾರತ ಮಾತೆಯ ಫೋಟೋದೊಂದಿಗೆ ಶೋಭಾಯಾತ್ರೆ ಸಾಗಿತು. ಭಜನಾ ತಂಡಗಳು, ವಾದ್ಯ ತಂಡಗಳು ಹೆಜ್ಜೆ ಹಾಕಿದವು. ಆರ್‌ಎಸ್‌ಎಸ್ ಕಾರ್ಯಕರ್ತ ಆರ್. ವಿದ್ಯಾಧರ ಮುಖ್ಯ ಭಾಷಣ ಮಾಡಿದರು. ನಿವೃತ್ತ ನ್ಯಾಯಾಧೀಶ ಆರ್.ಚಂದ್ರಶೇಖರ್, ಕುವೆಂಪುನಗರ ಹಿಂದೂ ಸಮಾಜೋತ್ಸವ ಸಮಿತಿ ಉಪಾಧ್ಯಕ್ಷ ಜಿ.ಎಸ್.ಗಣೇಶ್ ವೇದಿಕೆಯಲ್ಲಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಹಲವು ಗಣ್ಯರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸೆಮಿಕಂಡಕ್ಟರ್ ಸೇರಿ 11 ಮಹತ್ವದ ಒಪ್ಪಂದಗಳಿಗೆ ಭಾರತ–ಮಲೇಷ್ಯಾ ಸಮ್ಮತಿ



ಕ್ವಾಲಾಲಂಪುರ: ವ್ಯಾಪಾರ, ಹೂಡಿಕೆ, ರಕ್ಷಣೆ, ಇಂಧನ, ಉತ್ಪಾದನೆ ಮತ್ತು ಸೆಮಿಕಂಡಕ್ಟರ್‌ನಂತಹ ಆದ್ಯತಾ ವಲಯಗಳಲ್ಲಿನ ಸಂಬಂಧ ವಿಸ್ತರಿಸಲು ಭಾರತ ಮತ್ತು ಮಲೇಷ್ಯಾ ಭಾನುವಾರ ಒಪ್ಪಿಗೆ ಸೂಚಿಸಿವೆ.

ಸೆಮಿಕಂಡಕ್ಟರ್ ವಲಯ ಸೇರಿದಂತೆ ವಿವಿಧ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ವೃದ್ಧಿಸಲು ಒಟ್ಟು 11 ಒಪ್ಪಂದಗಳು ಮತ್ತು ದಾಖಲೆಗಳಿಗೆ ಉಭಯ ದೇಶಗಳ ಪ್ರಧಾನಿ ಅವರು ಸಹಿ ಹಾಕಿದ್ದಾರೆ.

ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗಿನ ಮಾತುಕತೆ ನಂತರ, ಭಯೋತ್ಪಾದನೆಯನ್ನು ಎದುರಿಸುವ ಬಗ್ಗೆ ಭಾರತದ ನಿಲುವನ್ನು ಪುನರುಚ್ಚರಿಸಿದ ಮೋದಿ, ಭಯೋತ್ಪಾದನೆ ಬಗ್ಗೆ ನಮ್ಮ ಸಂದೇಶ ಸ್ಪಷ್ಟವಾಗಿದೆ. ಈ ವಿಷಯದಲ್ಲಿ ಯಾವುದೇ ದ್ವಿಮುಖ ನೀತಿಗಳಿಲ್ಲ, ರಾಜಿ ಇಲ್ಲ' ಎಂದು ಹೇಳಿದ್ದಾರೆ.

ದ್ವಿಪಕ್ಷೀಯ ವ್ಯಾಪಾರಕ್ಕಾಗಿ ಸ್ಥಳೀಯ ಕರೆನ್ಸಿಗಳಾದ ಭಾರತೀಯ ರೂಪಾಯಿ ಮತ್ತು ಮಲೇಷ್ಯಾದ ರಿಂಗಿಟ್ ಬಳಕೆಯನ್ನು ಉತ್ತೇಜಿಸುವ ನಿರ್ಧಾರವನ್ನು ಮೋದಿ ಮತ್ತು ಇಬ್ರಾಹಿಂ ಪ್ರಕಟಿಸಿದ್ದಾರೆ.

ಮಲೇಷ್ಯಾದಲ್ಲಿ ಭಾರತೀಯ ಕಾನ್ಸುಲೇಟ್ ಜನರಲ್ ಸ್ಥಾಪಿಸಲಾಗುವುದು. ಎಐ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಜೊತೆಗೆ ಸೆಮಿಕಂಡಕ್ಟರ್‌ಗಳು, ಆರೋಗ್ಯ ಮತ್ತು ಆಹಾರ ಭದ್ರತಾ ವಲಯದ ಪಾಲುದಾರಿಕೆಯನ್ನು ಮುನ್ನಡೆಸುತ್ತೇವೆ. ಇಂಡೋಪೆಸಿಫಿಕ್ ಪ್ರದೇಶವು ವಿಶ್ವದ ಬೆಳವಣಿಗೆಯ ಎಂಜಿನ್ ಆಗಿ ಹೊರಹೊಮ್ಮುತ್ತಿದೆ. ನಾವು, ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಜೊತೆಗೆ, ಇಂಡೋಪೆಸಿಫಿಕ್ ಪ್ರದೇಶದಾದ್ಯಂತ ಅಭಿವೃದ್ಧಿ, ಶಾಂತಿ ಮತ್ತು ಸ್ಥಿರತೆಗೆ ಬದ್ಧರಾಗಿದ್ದೇವೆ ಎಂದು ಮೋದಿ ತಿಳಿಸಿದ್ದಾರೆ.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಸ್ಥೆಯ 90ನೇ ವಾರ್ಷಿಕೋತ್ಸವ

ಮಹಾಶಿವರಾತ್ರಿಯ ಪ್ರಯುಕ್ತ ಶ್ರೀ ಸೋಮನಾಥ ದರ್ಶನ ಮೇಳಕ್ಕೆ ಚಾಲನೆ



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ ಸಾಹಿತಿ ಕೆ.ಸಿ.ಶಿವಪ್ಪ, ಭರತನಾಟ್ಯ ಪಟು ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ 'ಈಶ್ವರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಫೆ.8(ವಿವಿಹೆಚ್)– ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಸ್ಥೆಯ 90ನೇ ವರ್ಷದ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿಯ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದರ್ಶನ ಮೇಳಕ್ಕೆ ಭಾನುವಾರ ವಿದ್ಯುಕ್ತ ಚಾಲನೆ ದೊರೆಯಿತು.

ಮೈಸೂರಿನ ವಿಜಯನಗರದ 1ನೇ ಹಂತದ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಎದುರಿನ ಮೈದಾನದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಹಿರಿಯ ನ್ಯಾಯವಾದಿ ಅಶೋಕ್ ಹಾರನಹಳ್ಳಿ, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ಸಿ.ಕೆ.ಸುಬ್ಬರಾಯ, ಸಂಸ್ಥೆಯ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ಡಾ.ಬಿ.ಕೆ.ಲಕ್ಷ್ಮೀಜಿ, ಬ್ರಹ್ಮಕುಮಾರ ಬಿ.ಕೆ.ರಂಗನಾಥಣ್ಣ, ಗಾಯಕಿ ಅಮೂಲ್ಯ, ರಾಜಯೋಗ ಶಿಕ್ಷಕಿ ಶಿವಲೀಲ, ರಾಮಚಂದ್ರ ರಾವ್ ಉಪಸ್ಥಿತರಿದ್ದರು.

ಈ ವೇಳೆ ಮಾತನಾಡಿದ ಕೆ.ಆರ್.ನಗರ ಶಾಸಕ ಡಿ.ರವಿಶಂಕರ್, ಪ್ರತಿಯೊಬ್ಬರೂ ಜೀವನದಲ್ಲಿ ಒಂದಲ್ಲ ಒಂದು ರೀತಿಯ ಒತ್ತಡದಲ್ಲಿ ಇದ್ದೇ ಇರುತ್ತಾರೆ. ಅವರಿಗೆ ಒತ್ತಡ ನಿವಾರಣೆ ಮಾಡುವ ನಿಟ್ಟಿನಲ್ಲಿ ಇಂತಹ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ಅಭಿಪ್ರಾಯಿಸಿದರು.

ಈ ಸಂಸ್ಥೆ ಹಲವಾರು ಜನಸ್ನೇಹಿ, ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. ರಾಜ್ಯ, ದೇಶ, ವಿದೇಶಗಳಲ್ಲಿ ಶಾಂತಿ, ಸಹಬಾಳ್ವೆಯನ್ನು ಬಿತ್ತುವುದರಲ್ಲಿ ನಿರಂತರವಾಗಿ ಕಾರ್ಯಪ್ರವೃತ್ತರಾಗಿದ್ದಾರೆ. ಇಂತಹ ಸಂಸ್ಥೆಗಳ ಜೊತೆ ಕೈಜೋಡಿಸಿ ಸಮಾಜದ ಒಳಿತಿಗೆ ಪ್ರಾರ್ಥಿಸಬೇಕು ಎಂದರು.

ಈಶ್ವರೀಯ ವಿವಿಯಿಂದ 15 ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಎಲ್ಲರೂ ಭಾಗಿಯಾಗಬೇಕು. ನವ ದುರ್ಗಿಯರು, 12 ಜ್ಯೋತಿರ್ಲಿಂಗ ದರ್ಶನ ಸೇರಿದಂತೆ ವಿಜ್ಞಾನ ಮೇಳವೂ ಇದ್ದು, ಇದರ ಸದುಪಯೋಗಪಡೆದುಕೊಳ್ಳಿ ಎಂದು ಸೂಚಿಸಿದರು.

ಇದೇ ವೇಳೆ ಜೀವಮಾನ ಸಾಧನೆಗಾಗಿ ಸಾಹಿತಿ ಕೆ.ಸಿ.ಶಿವಪ್ಪ, ಭರತನಾಟ್ಯ ಪಟು ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ 'ಈಶ್ವರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಇದೇ ಫೆ.8 ರಿಂದ 22 ವರೆಗೆ ನಡೆಯಲಿರುವ ಮೇಳದಲ್ಲಿ ಶ್ರೀ ಸೋಮನಾಥ ಮಂದಿರದ ಪ್ರತಿಕೃತಿ, ಮಾದಕದ್ರವ್ಯ ಸೇವನೆ ವಿರುದ್ಧ ಜಾಗೃತಿ, ಮೈಂಡ್ ಸ್ಪಾ, ಗೃಹಸ್ಥರು ಸಾಮರಸ್ಯದಿಂದಿರಲು ಪ್ರಾಯೋಗಿಕ ಚಿತ್ರಪ್ರದರ್ಶನ, ವಿದ್ಯಾರ್ಥಿ ಜೀವನದಲ್ಲಿ ಏಕಾಗ್ರತೆ ಮತ್ತು ಗುರಿ ಸಾಧನೆಯ ಬಗ್ಗೆ ಸಮಾಲೋಚನೆ, ಮೌಲ್ಯಗಳ ಪ್ರಯೋಜನ ವಿವರಿಸುವ ಆಟಗಳು ಮತ್ತು ಧ್ಯಾನ ಶಿಬಿರ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಇನ್ನು 15 ದಿನಗಳ ಕಾಲ ನಡೆಯುವ ಈ ಮೇಳದಲ್ಲಿ ಬೆಳಿಗ್ಗೆ 8 ರಿಂದ ರಾತ್ರಿ 9 ಗಂಟೆ ವರೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರಲಿದೆ.



ಟಿ-20 ಮಹಾಸಮರ

ಟೀಮ್ ಸೈಫರ್ಟ್ ಆಕರ್ಷಕ ಆಟ

ಅಫ್ಘಾನಿಸ್ತಾನ ತಂಡ ಮಣಿಸಿದ ನ್ಯೂಜಿಲೆಂಡ್



ಗುಲ್ಬದಿನ್ ನೈಬ್ ಹಾಗೂ ಸೈದಿಕುಲ್ಲಾ ಅತಲ್ 84 ರನ್‌ಗಳ ಜೊತೆಯಾಟ ಆಡುವ ಮೂಲಕ ತಂಡಕ್ಕೆ ಆಸರೆಯಾದರು.

ಚೆನ್ನೈ, ಫೆ.8(ವಿವಿಹೆಚ್)–ಟೀಮ್ ಸೈಫರ್ಟ್ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ ಅಫ್ಘಾನಿಸ್ತಾನ ವಿರುದ್ಧ 5 ವಿಕೆಟ್‌ಗಳಿಂದ ಗೆಲುವು ದಾಖಲಿಸಿತು. ಆ ಮೂಲಕ ಐಸಿಸಿ ಟಿ20 ವಿಶ್ವಕಪ್‌ನಲ್ಲಿ ಇದೇ ಮೊದಲ ಬಾರಿಗೆ 180ಕ್ಕಿಂತ ಅಧಿಕ ಮೊತ್ತವನ್ನು ಚೇಸ್ ಮಾಡುವಲ್ಲಿ ಸಫಲವಾಯಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ಐಸಿಸಿ ಟಿ20 ವಿಶ್ವಕಪ್ 'ಡಿ' ಗುಂಪಿನ ನಾಲ್ಕನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 182 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ನ್ಯೂಜಿಲೆಂಡ್ 17.5 ಓವರುಗಳಲ್ಲಿ 5 ವಿಕೆಟ್‌ಗೆ 183 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ಇತ್ತ ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನಕ್ಕೆ ಉತ್ತಮ ಆರಂಭ ದೊರೆಯಿತು. ಇಬ್ರಾಹಿಂ ಜದ್ರಾನ್ 10, ರೆಹಮಾನುಲ್ಲಾ ಗುರ್ಬಾಜ್ 27 ರನ್ ಗಳಿಸಿ ಔಟಾದರು. ಬಳಿಕ ಜೊತೆಯಾದ ನೈಬ್ 35 ಎಸೆತಗಳಲ್ಲಿ 63 ರನ್ ಗಳಿಸಿದರೆ, ಅತಲ್ 29 ರನ್ ಗಳಿಸಿದರು.

ಉಳಿದಂತೆ ರಸೂಲಿ 20 ರನ್, ಓಮರ್‌ಜೈ 14 ರನ್ ಗಳಿಸಿದರೇ, ಮೊಹಮ್ಮದ್ ನಬಿ ಔಟಾಗದೇ 10 ರನ್ ಗಳಿಸಿದರು.

ಕಿವೀಸ್ ಪರ ಲಾಕಿ ಫರ್ಗೂಸನ್ 2, ಮ್ಯಾಟ್ ಹೆನ್ರಿ, ಜಾಕೋಬ್ ಢಫಿ ಹಾಗೂ ರಚಿನ್ ರವೀಂದ್ರ ತಲಾ ಒಂದೊಂದು ವಿಕೆಟ್ ಪಡೆದರು.

ಬೃಹತ್ ಮೊತ್ತ ಬೆನ್ನತ್ತಿದ ನ್ಯೂಜಿಲೆಂಡ್ ಆರಂಭ ಉತ್ತಮವಾಗಿರಲಿಲ್ಲ. ಆರಂಭ ಆಟಗಾರ ಫಿನ್ ಅಲೆನ್ (1) ಮತ್ತು ರಚಿನ್ ರವೀಂದ್ರ (0) ಅವರ ವಿಕೆಟ್ ತಂಡಕ್ಕೆ ಹೊಡೆತ ನೀಡಿತು. ಈ ವೇಳೆ ಮೂರನೇ ವಿಕೆಟ್‌ಗೆ ಜೊತೆಯಾದ ಗ್ಲೆನ್ ಫಿಲಿಪ್ಸ್ ಹಾಗೂ ಸೀಫರ್ಟ್ 74 ರನ್ ಜೊತೆಯಾಟವಾಡಿ ತಂಡವನ್ನು ಸುರಕ್ಷಿತ ಸ್ಥಿತಿಗೆ ತಲುಪಿಸಿದರು.

ಸೈಫರ್ಟ್ 42 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಹಿತ 65 ರನ್ ಚಚ್ಚಿದರು. ಇತ್ತ ಫಿಲಿಪ್ಸ್ 25 ಎಸೆತಗಳಲ್ಲಿ 42ರನ್ ಕಲೆಹಾಕಿದರು. ಉಳಿದಂತೆ ಮಾರ್ಕ್ ಚಾಪ್‌ಮನ್ 28, ಕೊನೆಯಲ್ಲಿ ಒಂದಾದ ಡೇರಿಲ್ ಮಿಚೆಲ್ ಅಜೇಯ 25, ನಾಯಕ ಮಿಚೆಲ್ ಸ್ಯಾಂಟ್ನರ್ ಅಜೇಯ 17 ರನ್ ಬಾರಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಅಫ್ಘಾನಿಸ್ತಾನ್ ಪರ ಮುಜ್ಬಿ ರೆಹಮಾನ್ 2, ಓಮರ್‌ಜೈ ಹಾಗೂ ಮೊಹಮ್ಮದ್ ನಬಿ ತಲಾ 1 ವಿಕೆಟ್ ಕಿತ್ತರು. ಅರ್ಧಶತಕ ಬಾರಿಸಿದ ಕಿವೀಸ್ ಬ್ಯಾಟರ್ ಟಿಮ್ ಸೈಫರ್ಟ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ನೇಪಾಳದ ವಿರುದ್ಧ ಗೆಲ್ಲಲು ತಿಣುಕಾಡಿದ ಇಂಗ್ಲೆಂಡ್



ಮುಂಬೈ, ಫೆ.8(ವಿವಿಹೆಚ್)– ಕ್ರಿಕೆಟ್ ಶಿಶು ನೇಪಾಳ ವಿರುದ್ಧದ ರಣರೋಚಕ ಪಂದ್ಯಾವಳಿಯಲ್ಲಿ ಸ್ವಲ್ಪದರಲ್ಲೇ ಸೋಲಿನ ಸುಳಿಯಿಂದ ಪಾರಾದ ಎರಡು ಬಾರಿ ವಿಶ್ವ ಚಾಂಪಿಯನ್ ಇಂಗ್ಲೆಂಡ್ ಟೂರ್ನಿಯಲ್ಲಿ ಪ್ರಯಾಸದ ಮೊದಲ ಗೆಲುವು ದಾಖಲಿಸಿತು.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ನೀಡಿದ್ದ 184 ರನ್ ಗುರಿ ಬೆನ್ನತ್ತಿದ ನೇಪಾಳ ತಂಡ 6 ವಿಕೆಟ್‌ಗೆ 180 ರನ್ ಗಳಿಸಿ 4 ರನ್ ಗಳಿಂದ ಸೋತು ನಿರಾಸೆ ಅನುಭವಿಸಿತು.

ಇಂಗ್ಲೆಂಡ್ ನೀಡಿದ ಗೆಲುವಿನ ಮೊತ್ತ ಬೆನ್ನತ್ತುವಲ್ಲಿ ವೀರೋಚಿತ ಆಟವಾಡಿದ ಲೋಕೇಶ್ ಬಾಮ್ (ಔಟಾಗದೇ 39, 20 ಎಸೆತ) ರನ್ ಗಳಿಸಿಯೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಕೊನೆಯ ಓವರಿನಲ್ಲಿ ನೇಪಾಳ ಗೆಲುವಿಗೆ ಬೇಕಿದ್ದ 10 ರನ್ ಬೇಕಿತ್ತು. ಆದರೆ ತಂಡ ಐದು ರನ್ ಗಳಿಸಲಷ್ಟೇ ಶಕ್ತವಾಯಿತು. ನೇಪಾಳ ಪರ ನಾಯಕ ರೋಹಿತ್ ಪೌದೆಲ್ (39), ದೀಪೇಂದ್ರ ಸಿಂಗ್ ಐರಿ (39) ಮತ್ತು ಕುಶಲ್ ಭುರ್ತೆಲ್ (29) ಅವರು ತಂಡದ ಹೋರಾಟಕ್ಕೆ ಬಲ ನೀಡಿದರು. ಹೀಗಿದ್ದರೂ ಪಂದ್ಯ ಗೆಲ್ಲಲಾಗಲಿಲ್ಲ.

ಇತ್ತ ಇಂಗ್ಲೆಂಡ್ ಪರ ಲಯಾಮ್ ಡಾವ್‌ಸನ್ 2, ಲೂಕ್ ವುಡ್, ಆರ್ಚರ್, ವಿಲ್ ಜಾಕ್ ಸಾಮ್ ಕರನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೆ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡಕ್ಕೆ ಜೇಕಬ್ ಬೆಥೆಲ್ ಆಸರೆಯಾದರು. 35 ಎಸೆತಗಳಲ್ಲಿ 4 ಬೌಂಡರಿ, 4 ಸಿಕ್ಸರ್ ಸಹಿತ 55 ರನ್ ಕಲಹಾಕಿದರು. ಇವರಿಗೆ ಸಾಥ್ ನೀಡಿದ ನಾಯಕ ಹ್ಯಾರಿ ಬ್ರೂಕ್ 32 ಎಸೆತಗಳಲ್ಲಿ 4ಬೌಂಡರಿ, 3 ಸಿಕ್ಸರ್ ಒಳಗೊಂಡಂತೆ 53 ರನ್ ಕಲೆಹಾಕಿ ತಂಡಕ್ಕೆ ಚೇತರಿಕೆ ನೀಡಿದರು.

ಉಳಿದಂತೆ ಫಿಲ್ ಸಾಲ್ಟ್ 1, ಜೋಸ್ ಬಟ್ಲರ್ 26 ಮತ್ತು ಟಾಮ್ ಬ್ಯಾಂಟಮ್ 2 ರನ್ ರನ್ ಬಾರಿಸಿದರೆ, ಕೊನೆಯಲ್ಲಿ ಅಬ್ಬರಿಸಿದ ವಿಲ್ ಜಾಕ್ಸ್ 18 ಎಸೆತಗಳಲ್ಲಿ 39 ರನ್ ಕಲೆಹಾಕಿ ತಂಡದ ಮೊತ್ತ 180ರ ಗಡಿ ದಾಟಲು ಸಹಕರಿಸಿದರು. ನೇಪಾಳ ಪರ ದೀಪೇಂದ್ರ ಐರೀ ನಂದನ್ ಯಾದವ್ ತಲಾ ಎರಡೆರಡು ವಿಕೆಟ್ ಪಡೆದರು.

ಬ್ಯಾಟಿಂಗ್, ಬೌಲಿಂಗ್ ಎರಡೂ ವಿಭಾಗದಲ್ಲಿಯೂ ಉತ್ತಮ ಪ್ರದರ್ಶನ ತೋರಿದ ಇಂಗ್ಲೆಂಡ್‌ನ ವಿಲ್ ಜಾಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಐರ್ಲೆಂಡ್ ಮಣಿಸಿದ ಶ್ರೀಲಂಕಾ



ಐರ್ಲೆಂಡ್‌ನ ಹ್ಯಾರಿ ಟೆಕ್ಟರ್ ವಿಕೆಟ್ ಪಡೆದ ಶ್ರೀಲಂಕಾದ ವನಿಂದು ಹಸರಂಗ ಅವರನ್ನು ಸಹ ಆಟಗಾರರು ಅಭಿನಂದಿಸಿದರು.

ಕೊಲೊಂಬೊ, ಫೆ.8(ವಿವಿಹೆಚ್)– ಇಲ್ಲಿನ ಆರ್.ಪ್ರೇಮದಾಸ್ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್‌ನ 6ನೇ ಪಂದ್ಯದಲ್ಲಿ ಅತಿಥೇಯ ಶ್ರೀಲಂಕಾ ತಂಡ ಪ್ರವಾಸಿ ಐರ್ಲೆಂಡ್ ತಂಡವನ್ನು 20 ರನ್‌ಗಳಿಂದ ಸೋಲಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ ತಂಡ ಕುಶಾಲ್ ಮೆಂಡಿಶ್ (56) ಕಮಿಂದು ಮೆಂಡೀಸ್ (44) ಅವರ ಅರ್ಧಶತಕದ ಬಲದಿಂದ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 163ರನ್ ಗಳಿಸಿ ಎದುರಾಳಿ ತಂಡಕ್ಕೆ 164 ರನ್‌ಗಳ ಸಾಮಾನ್ಯ ಗುರಿ ನೀಡಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಐರ್ಲೆಂಡ್ 19.5 ಓವರ್‌ಗಳಲ್ಲಿ ಆಲ್‌ಔಟ್ ಆಗುವ ಮೂಲಕ 143 ರನ್ ಗಳಿಸಿ 20 ರನ್ ಗಳ ಅಂತರದಿಂದ ಸೋಲೊಪ್ಪಿಕೊಂಡಿತು. ಶ್ರೀಲಂಕಾ ಪರ ಭರ್ಜರಿ ಬ್ಯಾಟಿಂಗ್ ಆಡಿ ಕಮಿಂದು ಮೆಂಡೀಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಂಕ್ಷಿಪ್ತ ಸ್ಕೋರ್ ವಿವರ

ಶ್ರೀಲಂಕಾ: 163/6 (20 ಓವರ್)– ಕಮಿಂದು ಮೆಂಡೀಸ್ 44(19), ಕುಶಾಲ್ ಮೆಂಡೀಸ್ 56(43), ಪಾಥುಮ್ ನಿಸ್ಸಾಂಕ 24(23), ಬ್ಯಾರಿ ಮೆಕಾರ್ಥಿ 40ಕ್ಕೆ2, ಜಾರ್ಜ್ ಡಾಕ್ರೆಲ್ 17ಕ್ಕೆ2,

ಐರ್ಲೆಂಡ್: 143/10 (19.5 ಓವರ್)– ಹ್ಯಾರಿ ಟೆಕ್ಟರ್ 40(34), ರಾಸ್ ಅಡೈರ್ 34(23), ಲೋರ್ಕನ್ ಟಕರ್ 21(10), ಮಹೀಶಾ ತೀಕ್ಷಣ 23ಕ್ಕೆ3, ವನಿಂದು ಹಸರಂಗ 25ಕ್ಕೆ3, ಮತೀಶ ಪತಿರಣ 26ಕ್ಕೆ2

ಸಾರ್ವಜನಿಕರಿಗೆ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ

'ಮ್ಯಾರಥಾನ್ ಓಟದ ಸ್ಪರ್ಧೆ'ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ

ಪಾಂಡವಪುರ, ಫೆ.8– ಇಲ್ಲಿನ ಶ್ರೀಶಂಭು ಲಿಂಗೇಶ್ವರ ಶಿಕ್ಷಣ ಸಂಸ್ಥೆ ವತಿಯಿಂದ ಸಾರ್ವಜನಿಕರಿಗೆ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಭಾರತ್ ಕ್ಯಾನ್ಸರ್ ಆಸ್ಪತ್ರೆ ಹಾಗೂ ಎಸ್‌ಬಿಐ ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸಿದ್ದ 'ಮ್ಯಾರಥಾನ್ ಓಟದ ಸ್ಪರ್ಧೆ'ಗೆ ಪಟ್ಟಣದ ಐದು ದೀಪದ ವೃತ್ತದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಮ್ಯಾರಥಾನ್‌ನಲ್ಲಿ 30, 18 ಹಾಗೂ 14 ವರ್ಷ ಮೇಲ್ಪಟ್ಟ ಹಾಗೂ ಒಳಪಟ್ಟ ಪುರುಷ–ಮಹಿಳೆಯರ ವಿಭಾಗಗಳಲ್ಲಿ 10 ಕಿಮೀ ಹಾಗೂ 6 ಕಿಮೀವರೆಗಿನ 2 ವಿಭಾಗದಲ್ಲಿ ಓಟದ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮ್ಯಾರಥಾನ್ ಓಟದ ಸ್ಪರ್ಧೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸೋದರ ರಾಘವ ಪ್ರಕಾಶ್ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಎಸ್‌ಐ ಉಮೇಶ್ ಸೇರಿದಂತೆ ನೂರಾರು ಸಾರ್ವಜನಿಕರು, ಯುವಕ–ಯುವತಿಯರು, ಮಹಿಳೆಯರು, ಅನೇಕ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸುವ ಮೂಲಕ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು.



ಮ್ಯಾರಥಾನ್ ಓಟದ ಸ್ಪರ್ಧೆಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಉತ್ತಮ ಆರೋಗ್ಯಕ್ಕೆ ಕ್ರೀಡೆ ಸಹಕಾರಿಯಾಗಿದೆ. ಕ್ಯಾನ್ಸರ್ ಮಾರಕ ಕಾಯಿಲೆಯಾಗಿದೆ. ಕ್ಯಾನ್ಸರ್ ಕಾಯಿಲೆ ಬರುವುದು ಗೊತ್ತಾಗುವುದಿಲ್ಲ. ಆರಂಭದಲ್ಲಿ ಅದರ ಗುಣಲಕ್ಷಣಗಳು ತಿಳಿಯುವುದಿಲ್ಲ. ನನ್ನ ಹೆಂಡತಿಗೆ ಕ್ಯಾನ್ಸರ್ ಬಂದಿರುವ ಕಾರಣ ಅದರ ಅನುಭವ ನನಗೆ ಹೆಚ್ಚಾಗಿದೆ. ಹಾಗಾಗಿ ಪ್ರತಿಯೊಬ್ಬರೂ ಪರೀಕ್ಷೆ ಮಾಡಿಸಿಕೊಂಡು ಮಾರಕ ಕ್ಯಾನ್ಸರ್ ಕಾಯಿಲೆಯಿಂದ ಮುಕ್ತರಾಗಬೇಕು. ಆ ನಿಟ್ಟಿನಲ್ಲಿ ಜನರಿಗೆ ಅರಿವು ಮೂಡಿಸುವ ಸಲುವಾಗಿ ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ಮ್ಯಾರಥಾನ್ ಓಟದ ಸ್ಪರ್ಧೆ ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಸುತ್ತಿರುವುದು ಸಮಾಜಕ್ಕೆ ಉಪಕಾರಿಯಾಗಲಿದೆ ಎಂದರು.

ಭಾರತ್ ಕ್ಯಾನ್ಸರ್ ಆಸ್ಪತ್ರೆ ವೈದ್ಯ ಡಾ. ಚೇತನ್ ಮಾತನಾಡಿ, ಕ್ಯಾನ್ಸರ್ ರೋಗ ಕಾಣಿಸಿಕೊಂಡ ವ್ಯಕ್ತಿಗಳಿಗೆ ಅದು ಎರಡ್ಮೂರು ಹಂತಕ್ಕೆ ಬರುವವರೆಗೆ ಅದರ ಗುಣಲಕ್ಷಣ ಕಾಣಿಸುವುದಿಲ್ಲ. ಹೀಗಾಗಿ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳಬೇಕು. ಉತ್ತಮ ಆಹಾರ ಸೇವಿಸಬೇಕು. ಜಂಕ್‌ಫುಡ್ ಬಳಕೆ ಕಡಿಮೆ ಮಾಡಬೇಕು. ವಂಶಾವಳಿಯಿಂದ ತಂಬಾಕು ಸೇವೆ, ಧೂಮಪಾನ ಮಾಡುವುದರಿಂದ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ. ಹೀಗಾಗಿ ಜಾಗೃತರಾಗಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪುಸ್ತಕ ಪ್ರೇಮಿ ಅಂಕೇಗೌಡರನ್ನು ಅಭಿನಂದಿಸಲಾಯಿತು.

ಸ್ಪರ್ಧೆಯಲ್ಲಿ ವಿಜೇತರಾದ 14 ವರ್ಷ ಒಳಪಟ್ಟವರ ವಿಭಾಗದಲ್ಲಿ **ಬಾಲಕರು:** ಆಕಾಶ್ ಮೀನಾ(ಪ್ರ), ಸುಭಾಷ್ ಗೌಡ(ದ್ವಿ), ಅಮೋಘ್ ಉಡುಪ(ತೃ), **ಬಾಲಕಿಯರ ವಿಭಾಗ:** ಸಂಜನಾ ಎನ್.ಎಂ(ಪ್ರ), ಇಂಚರ(ದ್ವಿ), ಮೇಘನಾ(ತೃ), 18 ವರ್ಷ ಒಳಪಟ್ಟವರ **ಬಾಲಕರ ವಿಭಾಗದಲ್ಲಿ:** ಕಪಥನ್ ಸಿಂಗ್(ಪ್ರ), ಆನಂದ್ ಸಾಕಲ್ (ದ್ವಿ), ಚಂದನ್ ಶೇಖರ್(ತೃ), **ಬಾಲಕಿಯರ ವಿಭಾಗದಲ್ಲಿ:** ರಂಜಿತ(ಪ್ರ), ಅನನ್ಯ(ದ್ವಿ), ಮಮತ(ತೃ), 30ವರ್ಷ ಒಳಪಟ್ಟ **ಪುರುಷರ ವಿಭಾಗ:** ರಾಜೇಶ್ ಕುಮಾರ್(ಪ್ರ), ವೈಭವ್ ಮಾರುತಿ ಪಾಟೀಲ್(ದ್ವಿ), ಅಬ್‌ತವ್‌(ತೃ), **ಮಹಿಳೆಯರ ವಿಭಾಗ:** ತಮನ(ಪ್ರ), ಮೋನಿಕ ಎಲ್.(ದ್ವಿ), ವಿನುತ ಎಸ್(ತೃ) 30 ವರ್ಷ ಮೇಲ್ಪಟ್ಟ **ಪುರುಷರು:** ಗೌತಮ್ ಎಸ್.(ಪ್ರ), ಸಂದೀಪ್ ಕುಮಾರ್ ಎಂ.ವೈ(ದ್ವಿ), ಷಣ್ಮುಗ(ತೃ), **ಮಹಿಳೆಯರ ವಿಭಾಗ:** ಎನ್.ಆರ್.ಶೋಭಾ (ಪ್ರ), ವಿಜಯ(ದ್ವಿ), ಮಾನಸ(ತೃ) ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಈ ವೇಳೆ ಸಂಸ್ಥೆ ಅಧ್ಯಕ್ಷ ಪಿ.ಹೊನ್ನರಾಜು, ಮ್ಯಾನೇಜಿಂಗ್ ಟ್ರಸ್ಟಿ ಪ್ರೊ.ಪಂಚಲಿಂಗೇಗೌಡ, ಕಾರ್ಯದರ್ಶಿ ಪಿ.ಅಕ್ಷಯ್, ಎಸ್‌ಬಿಐ ರೀಜನಲ್ ಮ್ಯಾನೇಜರ್ ವೀರಭದ್ರೇಗೌಡ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ವಿಜೃಂಭಣೆಯ ಏಳೂರಮ್ಮ ದೇವಿ ರಥೋತ್ಸವ

ಭಾರತೀನಗರ, ಫೆ.8– ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆಯಲ್ಲಿ 3 ದಿನಗಳ ಕಾಲ ನಡೆದ ಏಳೂರಮ್ಮ ದೇವಿಯ ಸಿಡಿ ಹಬ್ಬದ ಅಂಗವಾಗಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಕ್ಯಾತಮ್ಮ ದೇವಿ ದೇವಾಲಯದ ಬಳಿ ಸಿಡಿ ರಥೋತ್ಸವದಲ್ಲಿ ದೇವರ ವಿಗ್ರಹವಿಟ್ಟು, ಬಣ್ಣ ಬಣ್ಣದ ಬಾವುಟಗಳನ್ನು ಕಟ್ಟಿ ಸಿಂಗರಿಸಿದ್ದು, ರಥಕ್ಕೆ 50 ಅಡಿ ಉದ್ದದ ಸಿಡಿ ಮರವನ್ನು ಮಧ್ಯ ಭಾಗಕ್ಕೆ ಅಳವಡಿಸಿ, ಆ ಸಿಡಿ ಮರದ ಮುಂಭಾಗಕ್ಕೆ ತೊಟ್ಟಿಲು ಕಟ್ಟಿ ಮಧ್ಯರಾತ್ರಿ 1 ಗಂಟೆ ವೇಳೆಗೆ ಚಿಕ್ಕಮ್ಮ ದೇವಿ ದೇವಾಲಯದಲ್ಲಿ ದೇವಿ ಗುಡ್ಡಪ್ಪ ಪೂಜೆ ನೆರವೇರಿಸಿ ಅಲ್ಲಿಂದ ರಥವಿರುವ ಸ್ಥಳಕ್ಕೆ ಬಂದು ರಥೋತ್ಸವ ಸಾಗುವಂತೆ ನುಡಿದ ನಂತರ ರಥ ಸಾಗಿತು.

ಕ್ಯಾತಮ್ಮ ದೇವಾಲಯದ ರಸ್ತೆ, ಪುರೋಹಿತ ಪ್ರಸನ್ನ ಅವರ ಮನೆ, ಅಂಬಿ ಸರ್ಕಲ್ ಮೂಲಕ ಸಾಗಿ ಕಾಳಮ್ಮ ದೇವಾಲಯದ ಬಳಿಯಿಂದ ಏಳೂರಮ್ಮ ದೇವಿ ದೇವಾಲಯದ ಬಳಿಗೆ ರಥೋತ್ಸವ ಸಾಗಿತು. ದಾರಿಯುದ್ದಕ್ಕೂ ನೆರೆದಿದ್ದ ಸಾವಿರಾರು ಭಕ್ತರು ರಥಕ್ಕೆ ಹಣ್ಣು, ಜವನ ಎಸೆದು ಭಕ್ತಿ ಸಮರ್ಪಿಸಿದರು.

ಸಾವಿರಾರು ಮಹಿಳೆಯರು ಶನಿವಾರ ಏಳೂರಮ್ಮ ದೇವಸ್ಥಾಕ್ಕೆ ಕಿಚಡಿ ಅನ್ನ, ಮಡೆ ಅನ್ನ ಸಮರ್ಪಿಸಿ ಪೂಜೆ ಸಲ್ಲಿಸಿದರು. ಪೋತಲಿಂಗೇಶ್ವರ ದೇವಸ್ಥಾನದ ಬಳಿ ತಂಬಿಟ್ಟಿನ ಆರತಿ ನಡೆಯಿತು. ಅಲ್ಲದೇ ಏಳೂರಮ್ಮ ದೇವಸ್ಥಾನದ ಬಳಿ ಕೊಂಡೋತ್ಸವವನ್ನು ಏಳೂರಮ್ಮನ ಗುಡ್ಡಪ್ಪ ಮತ್ತು ಕಾಳಮ್ಮನ ಪೂಜಾರಿ, ಕ್ಯಾತಮ್ಮನ ಪೂಜಾರಿ ಕರಗಹೊತ್ತು ನೇರವೇರಿಸಿದರು. ಸಾವಿರಾರು ಭಕ್ತರು ಹರ್ಷೋದ್ಗಾರದ ನಡುವೆ ಕೊಂಡೋತ್ಸವವನ್ನು ಕಣ್ತುಂಬಿಕೊಂಡರು.



ಏಳೂರಮ್ಮ ದೇವಿ

ಸಂಭ್ರಮದ ಲಕ್ಷ್ಮಿನಾರಾಯಣಸ್ವಾಮಿ ಕಲ್ಯಾಣೋತ್ಸವ

ಮದ್ದೂರು: ತಾಲೂಕಿನ ಕೆ.ಹೊನ್ನಲಗೆರೆಯ ಪುರಾಣ ಪ್ರಸಿದ್ಧ ಶ್ರೀಲಕ್ಷ್ಮಿನಾರಾಯಣಸ್ವಾಮಿ ದೇಗುಲದಲ್ಲಿ 11ನೇ ವರ್ಷದ ಕಲ್ಯಾಣೋತ್ಸವ ಭಾನುವಾರ ಸಂಭ್ರಮ ಸಡಗರದಿಂದ ಅದ್ಧೂರಿಯಾಗಿ ನಡೆಯಿತು.

ಕಲ್ಯಾಣೋತ್ಸವ ಅಂಗವಾಗಿ ಪ್ರಾತಃಕಾಲ ಸುಪ್ರಭಾತಸೇವೆ, ವೇದಾದಿಶಾತ್ತುಮುರೈ, ರಾಷ್ಟ್ರಾಶೀರ್ವಾದ, ಮಹಾಮಂಗಳಾರತಿ, ತೀರ್ಥ, ಪ್ರಸಾದ ವಿನಿಯೋಗ ನಡೆಯಿತು. ನಂತರ ಶ್ರೀ ಲಕ್ಷ್ಮಿನಾರಾಯಣಸ್ವಾಮಿ ಅವರ ತಿರುಕಲ್ಯಾಣೋತ್ಸವ, ಮಹಾಂಗಳಾರತಿ ನಡೆಯಿತು. ಮಧ್ಯಾಹ್ನ 12 ಗಂಟೆಗೆ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ರಾತ್ರಿ 8.30ಕ್ಕೆ ಗ್ರಾಮದಲ್ಲಿ ಶ್ರೀಲಕ್ಷ್ಮಿನಾರಾಯಣಸ್ವಾಮಿ ಹಾಗೂ ಶ್ರೀಮುತ್ತುರಾಯಸ್ವಾಮಿ ಅವರ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು. ಈ ವೇಳೆ ಭಕ್ತರು ಹಾಗೂ ಮಹಿಳೆಯರು ದೇವರಿಗೆ ಪೂಜೆ ಸಲ್ಲಿಸಿದರು.

ಗ್ರಾಮದ ಯಜಮಾನ ಹೆಚ್.ಬಿ.ಪುಟ್ಟಸ್ವಾಮಿ ಮಾತನಾಡಿ, ಜಗತ್ತಿನ ಒಳಿತಿಗಾಗಿ, ಸಂಕಷ್ಟಗಳ ನಿವಾರಣೆಗಾಗಿ, ಭಕ್ತರಲ್ಲಿ ಭಕ್ತಿಭಾವ ಮೂಡಿಸಲು ಹಾಗೂ ದಂಪತಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಕಲ್ಯಾಣೋತ್ಸವ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತಾದಿಗಳು ಆಗಮಿಸಿ ಕಲ್ಯಾಣೋತ್ಸವದಲ್ಲಿ ಭಾಗವಹಿಸಿರುವುದು ಸಂತೋಷ ತಂದಿದೆ ಎಂದರು.

ಶ್ರೀ ಲಕ್ಷ್ಮಿನಾರಾಯಣಸ್ವಾಮಿ ದೇವಸ್ಥಾನಕ್ಕೆ 600 ವರ್ಷಗಳ ಇತಿಹಾಸವಿದ್ದು, ಇಲ್ಲಿಗೆ ಬಂದು ಶ್ರದ್ಧಾಭಕ್ತಿಯಿಂದ ಪೂಜೆ ಮಾಡಿದರೆ ಜೀವನದಲ್ಲಿ ಅಂದುಕೊಂಡಿದ್ದು ನೆರವೇರುತ್ತದೆ ಎಂಬುದು ಭಕ್ತರ ಅಪಾರ ನಂಬಿಕೆಯಾಗಿದೆ ಎಂದರು.

ಗ್ರಾಮದ ಮುಖಂಡ ಹೆಚ್.ಪಿ.ಸ್ವಾಮಿ ಮಾತನಾಡಿ, ಕಲ್ಯಾಣೋತ್ಸವದ ಅಂಗವಾಗಿ ಸಹಸ್ರಾರು ಭಕ್ತಾದಿಗಳಿಗೆ ಅವರೇಕಾಳು ಕೂಟು, ರಾಗಿಮುದ್ದೆ, ಅನ್ನಸಾಂಬಾರ್, ಪಾಯಸವನ್ನು ವ್ಯವಸ್ಥಿತವಾಗಿ ಉಣಬಡಿಸಲಾಯಿತು ಎಂದರು. ಕಲ್ಯಾಣೋತ್ಸವ ಅಂಗವಾಗಿ ಗ್ರಾಮದ ಪ್ರತಿ ಮನೆಯಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದ್ದು, ದೇಗುಲಕ್ಕೆ ವಿಶೇಷವಾಗಿ ವಿದ್ಯುತ್ ದೀಪಾಲಂಕಾರ ಮಾಡಿರುವುದು ನೋಡುಗರ ಗಮನ ಸೆಳೆಯುತ್ತಿದೆ ಎಂದರು.

ದೇಗುಲದ ಪ್ರಧಾನ ಅರ್ಚಕ ಕಿಟ್ಟಿ ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವ ವಹಿಸಿದ್ದರು. ಗ್ರಾಮದ ಮುಖಂಡರಾದ ಎಸ್.ಸಿ.ಪುಟ್ಟಸ್ವಾಮಿ, ಸ್ವಾಮಿ, ಶಿವಮಾದು, ಶಿವರಾಮು, ಪುಟ್ಟಸ್ವಾಮಿ, ಲೋಕೇಶ್, ಕೃಷ್ಣ, ವೈರಮುಡಿ, ರಾಮಕೃಷ್ಣ, ವರುಣ್, ಸಂತೋಷ್, ರಾಜಣ್ಣ, ನಾಗೇಶ್, ಕೃಷ್ಣ ಇತರರಿದ್ದರು.

ಗೌಡಯ್ಯನದೊಡ್ಡಿಯಲ್ಲಿ ಚಿರತೆ ಪ್ರತ್ಯಕ್ಷ

ಭಾರತೀನಗರ: ಇಲ್ಲಿಗೆ ಸಮೀಪದ ಗೌಡಯ್ಯನದೊಡ್ಡಿಯಲ್ಲಿ ಚಿರತೆ ಪ್ರತ್ಯಕ್ಷಗೊಂಡು ಜನರಲ್ಲಿ ಆತಂಕ ಮೂಡಿಸಿದೆ.

ಇತ್ತೀಚೆಗೆ ಗ್ರಾಮದ ನಿವಾಸಿ ಚಿಕ್ಕಹೈದೇಗೌಡರ ತಮ್ಮಣ್ಣ ಎಂಬುವರಿಗೆ ಸೇರಿದ ಮೇಕೆಯನ್ನು ಚಿರತೆ ಹೊತ್ತೊಯ್ದು ಕೊಂದು ಹಾಕಿತ್ತು. ಇದರಿಂದ ಗ್ರಾಮಸ್ಥರು ಆತಂಕಗೊಂಡಿದ್ದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಚಿರತೆ ಸೆರೆಗೆ ಬೋನಿಡುವುದಾಗಿ ಭರವಸೆ ನೀಡಿದ್ದರು. ಆದರೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮದ ಮುಖಂಡ ಬಲ್ಲೇಗೌಡ ಬೇಸರ ವ್ಯಕ್ತಪಡಿಸಿ, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೂಡಲೇ ಬೋನಿಟ್ಟು ಚಿರತೆ ಸೆರೆ ಹಿಡಿಯಬೇಕು ಎಂದು ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಅಧಿಕಾರಿಗಳು ಚಿರತೆ ಸೆರೆಗೆ ಬೋನಿಡಲು ಮುಂದಾಗಿದ್ದಾರೆ,

ಸಂವಿಧಾನ ನಾಶಕ್ಕೆ ಮೂಲ ಬೇರುಗಳನ್ನು ಕತ್ತರಿಸಲಾಗುತ್ತಿದೆ

ರಾಜ್ಯ ಯೋಜನಾ ಇಲಾಖೆ ನಿರ್ದೇಶಕ ಚಂದ್ರಶೇಖರಯ್ಯ ಕಳವಳ

ಮಂಡ್ಯ, ಫೆ.8– ಪ್ರಸ್ತುತ ಸಂವಿಧಾನ ನಾಶಕ್ಕಾಗಿ ಮೂಲ ಬೇರುಗಳನ್ನು ಒಂದೊಂದಾಗಿ ಕತ್ತರಿಸಲಾಗುತ್ತಿದೆ. ಭಾರತದಲ್ಲಿ ಸಂವಿಧಾನ ಜಾರಿಯಾಗಿ 77 ವರ್ಷ ಕಳೆದರೂ ಇನ್ನೂ ಶೇ.43ರಷ್ಟು ಕಡು ಬಡವರಿದ್ದಾರೆ ಎಂದು ರಾಜ್ಯ ಯೋಜನಾ ಇಲಾಖೆ ನಿರ್ದೇಶಕ ಚಂದ್ರಶೇಖರಯ್ಯ ಕಳವಳ ವ್ಯಕ್ತಪಡಿಸಿದರು.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಸಂವಿಧಾನ ಸೇನೆ(ಕೆಎಸ್‌ಎಸ್) ಆಯೋಜಿಸಿದ್ದ ಸಂವಿಧಾನ ಜಾರಿ ದಿನ ಪ್ರಯುಕ್ತ ಭಾರತದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜ ಕಲ್ಯಾಣ ಇಲಾಖೆಯಡಿ ಎಸ್ಸಿ–ಎಸ್ಟಿ ಸಮುದಾಯ ಅಭಿವೃದ್ಧಿಗಾಗಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆ ಇದೆ. 2014ರಿಂದ ಇಲ್ಲಿವರೆಗೆ ಎಸ್‌ಸಿಪಿ ಅಡಿ 2 ಲಕ್ಷದ 3 ಸಾವಿರ ಕೋಟಿ ರೂ., ಟಿಎಸ್‌ಪಿ ಅಡಿ 79 ಸಾವಿರ ಕೋಟಿ ರೂ. ಖರ್ಚಾಗಿದೆ. ಒಟ್ಟಾರೆ 2.80 ಲಕ್ಷ ಕೋಟಿ ಖರ್ಚಾದರೂ ಈ ಸಮುದಾಯದವರು ಎಲ್ಲಿದ್ದಾರೋ, ಹೇಗಿದ್ದಾರೋ ಹಾಗೇಯೇ ಇದ್ದಾರೆ ಎಂದರು.



ಕಾರ್ಯಕ್ರಮವನ್ನು ರಾಜ್ಯ ಯೋಜನಾ ಇಲಾಖೆ ನಿರ್ದೇಶಕ ಚಂದ್ರಶೇಖರಯ್ಯ ಉದ್ಘಾಟಿಸಿದರು.

ಈ ಸಮುದಾಯಗಳು ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಆದರೆ ಆಳುವ ವರ್ಗ ಸಂವಿಧಾನ ವನ್ನು ಅರ್ಥ ಮಾಡಿಕೊಂಡು ಹಿಡಿತ ಸಾಧಿಸುತ್ತಿದ್ದಾರೆ. ಅಂಬೇಡ್ಕರ್ ಅವರ ಆಶಯಗಳು ಜನರಿಗೆ ತಲುಪಬೇಕಿದೆ ಎಂದು ಸಲಹೆ ನೀಡಿದರು.

ಕರ್ನಾಟಕ ಸಂವಿಧಾನ ಸೇನೆ ರಾಜ್ಯಾಧ್ಯಕ್ಷ ಹೆಚ್.ಎನ್.ನರಸಿಂಹ ಮೂರ್ತಿ ಮಾತನಾಡಿ, ಬಹುಜನ ಚಳುವಳಿಯಿಂದ ಸಾಕಷ್ಟು ಹೊಸ ಬದಲಾವಣೆ ಸಾಧ್ಯವಾಗುತ್ತಿದೆ. ಹೋರಾಟದ ಫಲದಿಂದ ಮನೆ ಮನೆ, ಊರೂರಿಗೆ ಸಂವಿಧಾನ ಪ್ರಸ್ತಾವನೆ, ಸಂವಿಧಾನ ದಿನಾಚರಣೆ, ನಾಲ್ವಡಿ ಸೇರಿದಂತೆ ಪೂರ್ವಿಕರ ಮಾಹಿತಿಗಳು ಲಭ್ಯವಾಗಿವೆ ಎಂದರು. ಮೌಢ್ಯತೆಯ ವಿದ್ಯಾವಂತ ಸಮುದಾಯವನ್ನು ವಿದ್ಯಾವಂತರೇ ಜಾಗೃತಿ ಮೂಡಿ ಸುವ ಕೆಲಸವಾಗುತ್ತಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಜ್ಞೆ ಹೆಚ್ಚಿಸಬೇಕಿದೆ. ಶೇ.2ರಷ್ಟಿರುವ ಜನತೆ ಶೇ.98ರ ಜನತೆಯನ್ನು ಆಳಿ ಗುಲಾಮಗಿರಿಗೆ ನೂಕುತ್ತಿರುವುದನ್ನು ತಡೆಯಲು ಅರಿವು ಮುಖ್ಯವಾಗಿದೆ ಎಂದರು.

ಮೈಸೂರಿನ ಉರಿಲಿಂಗಪೆದ್ದಿ ಮಠದ ಪೀಠಾಧ್ಯಕ್ಷ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಭಾರತ ದೇಶದಲ್ಲಿ ಸಂವಿಧಾನ ಜಾರಿಯಲ್ಲಿದ್ದರೂ, ಮನುಸ್ಮೃತಿಯ ಆಡಳಿತ ವ್ಯವಸ್ಥೆ ತೊಲಗಿಲ್ಲ ಸಂವಿಧಾನವನ್ನೇ ಸುಟ್ಟ ಸಂಘವಿದೆ. ಸಂವಿಧಾವನ್ನೇ ಒಪ್ಪದ ಜನತೆ–ಸಂಘವಿದೆ ಎಂದು ಎಚ್ಚರಿಸಿದರು.

ಈ ವೇಳೆ ಪ್ರಜಾ ಪರಿವರ್ತನಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಗೋಪಾಲ್ ಮಾತನಾಡಿದರು. ಸಾಧಕರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಜಿಪಂ ಮಾಜಿ ಅಧ್ಯಕ್ಷ ಸುರೇಶ್ ಕಂಠಿ, ಡಿವೈಎಸ್‌ಪಿ ಗಂಗಾಧರ್, ದ್ರಾವಿಡ ಕನ್ನಡ ಚಳುವಳಿ ಮುಖಂಡ ಅಭಿ ಒಕ್ಕಲಿಗ, ಬಿಎಸ್‌ಪಿ ಹಿರಿಯ ಮುಖಂಡ ಎಸ್.ಸಿದ್ದಯ್ಯ, ನಿವೃತ್ತ ನೌಕರ ಸಂಘದ ಅಧ್ಯಕ್ಷ ಗುರುಮೂರ್ತಿ, ಕೆಎಸ್‌ಎಸ್ ಜಿಲ್ಲಾಧ್ಯಕ್ಷ ಕುಮಾರ್ ಗಂಗವಾಡಿ, ಟಿ.ಡಿ.ನಾಗರಾಜು, ಪ್ರದೀಪ್ ಮತ್ತಿತರರಿದ್ದರು.

ಮೂರನೇ ಪುಟದಿಂದ

ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆ

ಸ್ಥಾನವನ್ನು ಹೊಂದಿರುವ ಭಾರತದಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು 23 ದೇಶಗಳ 39 ಹಿರಿಯ ಅಧಿಕಾರಿಗಳು ಈ ಶೃಂಗ ಸಭೆಯಲ್ಲಿ ಮಾಹಿತಿ ಹಂಚಿಕೊಳ್ಳ ಲಿದ್ದಾರೆ. ಭಾರತೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಸಂಸ್ಥೆಯ (ಐಟಿಬಿಸಿ) ಸಹಕಾರದಲ್ಲಿ ನಡೆಯುತ್ತಿರುವ ಈ ಶೃಂಗ ಸಭೆಯಲ್ಲಿ ಭಾರತದಲ್ಲಿ ಹುಲಿ ಸಂತತಿಯ ಅಭಿವೃದ್ಧಿ, ಕೈಗೊಂಡಿರುವ ಉತ್ತಮ ಪದ್ಧತಿ, ಸಾಂಸ್ಥಿಕ ಸಾಮರ್ಥ್ಯ, ಜಾಗತಿಕ ಪಾಲುದಾರಿಕೆ, ಜೀವ ವೈವಿಧ್ಯತೆ, ಅವುಗಳ ಸಂರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳ ಯೋಜನೆಗಳ ಮಾಹಿತಿಯನ್ನು ಈ ಸಭೆಯಲ್ಲಿ ಚರ್ಚಿಸಲಾಗುತ್ತದೆ.

ವಿಶ್ವದಲ್ಲಿ ಹುಲಿ ಸಂತತಿ ಹೊಂದಿರುವ ದೇಶಗಳಾದ ಅರ್ಮೇನಿಯಾ, ಭೂತಾನ್, ಕಾಂಬೋಡಿಯಾ, ಕಾಂಗೋ, ಗ್ವಾಟೆಮಾಲ, ಖಜಕಿಸ್ಥಾನ್, ಕೀನ್ಯಾ, ಕಿರ್ಜಿಸ್ಥಾನ್, ಲೈಬೀರಿಯಾ, ಮಲಾವಿ, ಮಲೇಷಿಯಾ, ಮಾಲಿ, ಮೇಕ್ಸಿಕೋ, ಮಂಗೋಲಿಯಾ, ಮಯನ್ಮಾರ್, ನೇಪಾಳ, ನೈಜರ್, ಪನಾಮಾ, ಪೆರು, ರೊಮೇನಿಯಾ, ರಷ್ಯಾ, ಸೋಮಾಲಿಯಾ ಹಾಗೂ ಶ್ರೀಲಂಕಾ ಸೇರಿದಂತೆ ಇನ್ನಿತರ ರಾಷ್ಟ್ರಗಳ ಹಿರಿಯ ಅಧಿಕಾರಿ ವರ್ಗ ಈ ಶೃಂಗ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ತಿಳಿಸಿದರು.

ನಾಗರಹೊಳೆಯಲ್ಲೂ ಸಭೆ: ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎನಿಸಿರುವ ಬಂಡೀಪುರದಲ್ಲಿ 3 ದಿನ ಶೃಂಗ ಸಭೆ ನಡೆಯಲಿದ್ದು, ಫೆ.11ರಿಂದ 13ರವರೆಗೆ 2 ದಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ 2ನೇ ಹಂತದ ಮುಂದುವರೆದ ಶೃಂಗ ಸಭೆ ನಡೆಯಲಿದೆ. ಹೆಚ್.ಡಿ. ಕೋಟೆ ತಾಲೂಕಿನ ಕಬಿನಿ ಜೆಎಲ್‌ಆರ್‌ನಲ್ಲಿ ಮುಂದುವರೆದ ಶೃಂಗ ಸಭೆ ಜರುಗಲಿದ್ದು, ಆಗಮಿಸಿರುವ ಎಲ್ಲಾ ದೇಶದ ಅರಣ್ಯಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಫೆ.13ರಂದು ಸಂಜೆ ಸಭೆ ಸಮಾಪ್ತಿಗೊಳ್ಳಲಿದೆ.

ಕರ್ನಾಟಕವೇ ಏಕೆ ಆಯ್ಕೆ: ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್‌ನ ಮೊದಲ ಆವೃತ್ತಿಯ ಶೃಂಗ ಸಭೆ 2025ರ ಫೆ.10ರಿಂದ 16ರವರೆಗೆ ಅಸ್ಸಾಂನಲ್ಲಿರುವ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಆಯೋಜಿಸಲಾಗಿತ್ತು. ಇದೀಗ ಎರಡನೇ ಶೃಂಗ ಸಭೆಯನ್ನು ಕರ್ನಾಟಕದಲ್ಲಿ, ಅದರಲ್ಲೂ ಹುಲಿ ಸಂತತಿ ಹೆಚ್ಚಾಗಿರುವ ಹಳೇ ಮೈಸೂರು ಪ್ರಾಂತೀಯ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಆಯೋಜಿಸಿರುವುದು ವಿಶೇಷವಾಗಿದೆ. ದೇಶದಲ್ಲಿಯೇ 563 ಹುಲಿಗಳನ್ನು ಹೊಂದಿರುವ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದರೆ, 1879 ಚಿರತೆ, 6013 ಏಷ್ಯಾದ ಆನೆ ಹೊಂದಿರುವ ರಾಜ್ಯ ಎಂಬ ಕೀರ್ತಿ ಕರ್ನಾಟಕಕ್ಕೆ ಲಭಿಸಿದೆ. ಈ ಹಿನ್ನೆಲೆಯಲ್ಲಿ ಶೃಂಗ ಸಭೆ ನಡೆಸಲು ಕರ್ನಾಟಕವನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ.

ಎಆರ್‌ಎಐ ಸಂಶೋಧನಾ ಕೇಂದ್ರ

ನೀಡಲಾಗುತ್ತಿದ್ದು, ಹೆಚ್‌ಎಂಟಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಆದರೆ ಹೆಚ್‌ಎಂಟಿ ಭೂಮಿ ರಾಜ್ಯ ಸರ್ಕಾರಕ್ಕೆ ಸೇರಬೇಕೆಂದು ನ್ಯಾಯಾಲಯಕ್ಕೆ ಹೋಗಿದ್ದಾರೆ. ಕುದುರೆ ಮುಖ ಅದಿರು ತೆಗೆಯಲು ರಾಜ್ಯ ಸರ್ಕಾರ ಅನುಮತಿ ನೀಡುತ್ತಿಲ್ಲ. ಮೊದಲು ಕೇಂದ್ರ ಸರ್ಕಾರದ ಜೊತೆ ಒಳ್ಳೆಯ ಸಂಬಂಧ ಕಾಪಾಡಿಕೊಳ್ಳಲಿ, ಅವರ ನಡುವಳಿಕೆ ಬದಲಾಯಿಸಿಕೊಳ್ಳಲಿ, ಅದು ಬಿಟ್ಟು ಪ್ರತಿ ವಿಚಾರಕ್ಕೂ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುವುದಲ್ಲ. 2047ರ ವಿಕಸಿತ ಭಾರತದ ಪರಿಕಲ್ಪನೆಯಲ್ಲಿ ದೇಶವನ್ನು ಅಭಿವೃದ್ಧಿ ಮಾಡಲು ನರೇಂದ್ರ ಮೋದಿ ಅವರು ಬಜೆಟ್ ಮೂಲಕ ಭದ್ರ ಬುನಾದಿ ಹಾಕಿದ್ದಾರೆ. ಈ ಮೂಲಕ ಭಾರತವನ್ನು ವಿಶ್ವದಲ್ಲಿ ಬಲಯುತವಾಗಿ ಬೆಳೆಸಲು ಹಲವು ವಿಶಿಷ್ಟ ಯೋಜನೆ ರೂಪಿಸಲಾಗಿದೆ ಎಂದು ಅವರು ತಿಳಿಸಿದರು.

ನಾವೇ ಟಾರ್ಗೆಟ್: ಸಿದ್ದರಾಮಯ್ಯ ಅವರಿಗೆ ಹೆಚ್.ಡಿ.ದೇವೇಗೌಡರು ಹಾಗೂ ನಾನು ಇಬ್ಬರೂ ಟಾರ್ಗೆಟ್ ಆಗಿದ್ದೇವೆ. ನಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ತರಲು ವ್ಯವಸ್ಥಿತ ತಂತ್ರ ರೂಪಿಸುತ್ತಿದ್ದಾರೆ. ಆದರೆ ಇದರಲ್ಲಿ ಅವರು ಯಶಸ್ವಿಯಾಗಲು ಸಾಧ್ಯವಿಲ್ಲ. ಜೆಡಿಎಸ್ ಪಕ್ಷ ಮುಗಿಸಲು ಇವರಿಂದ ಆಗುವುದಿಲ್ಲ. ಈ ಇಳಿ ವಯಸ್ಸಿನಲ್ಲಿ ದೇವೇಗೌಡರನ್ನು ಕುಗ್ಗಿಸಲು ಯಾರಿಂದಲೂ ಸಾಧ್ಯವಿಲ್ಲ. ನೈಸ್ ಯೋಜನೆ ಲೂಟಿ ಬಗ್ಗೆ ಸದನ ಸಮಿತಿ ವರದಿ ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ನಾನು ನಾಲ್ಕು ಎಕರೆ ಒತ್ತುವರಿ ಮಾಡಿಕೊಂಡಿದ್ದೇನೆ ಎಂದು ಎಸ್‌ಐಟಿ ರಚನೆ ಮಾಡಿದರು. ಆದರೆ ಜನ ಬೆಂಬಲ ಇರುವಾಗ ನಮ್ಮನ್ನು ಯಾರೂ ಏನು ಮಾಡಲು ಸಾಧ್ಯವಿಲ್ಲ ಎಂದು ವಾಗ್ದಾಳಿ ನಡೆಸಿದರು.

ಸಾಲ ತೀರಿಸಲು ಒದ್ದಾಟ: ಮೆಟ್ರೋ ಯೋಜನೆಗೆ ರಾಜ್ಯ ಸರ್ಕಾರ ಶೇಕಡ 80ರಷ್ಟು ಹಣ ನೀಡಿದರೆ, ಕೇಂದ್ರ ಸರ್ಕಾರ ಶೇಕಡ 20ರಷ್ಟು ಹಣ ನೀಡುತ್ತದೆ. ಮೆಟ್ರೋ ಯೋಜನೆಗೆ ತನ್ನ ಪಾಲು ಹೊಂದಿಸಲು ರಾಜ್ಯ ಸರ್ಕಾರ ಸಾಲ ಮಾಡಿದೆ. ಆದರೆ ಪಡೆದಿರುವ ಸಾಲದ ಅಸಲು ಹಾಗೂ ಬಡ್ಡಿ ಪಾವತಿಸಲು ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ. ಈ ಹಿನ್ನೆಲೆಯಲ್ಲಿ ಮೆಟ್ರೋ ದರ ಹೆಚ್ಚಳ ಮಾಡಲು ಮುಂದಾಗಿದೆ ಎಂದು ಕುಮಾರಸ್ವಾಮಿ ಆಪಾದಿಸಿದರು.

ವಾಸ್ತವ ಸ್ಥಿತಿಯನ್ನು ಒಪ್ಪಿಕೊಳ್ಳಬೇಕು. ಅದು ಬಿಟ್ಟು ನಾವು ಸತ್ಯವನ್ನೆ ಹೇಳುವುದು, ಸತ್ಯವನ್ನಲ್ಲದೆ ಬೇರೇನು ಹೇಳುವುದಿಲ್ಲ ಎಂದೇಳಲು ಇವರೇನು ಹರಿಶ್ಚಂದ್ರರೇ? ರಾಜ್ಯದಲ್ಲಿ ತಲೆದೋರುವ ಪ್ರತಿಯೊಂದು ವಿಚಾರಕ್ಕೂ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡುವುದನ್ನು ಮೊದಲು ಬಿಡಬೇಕು. ಕೇಂದ್ರ ಸರ್ಕಾರದ ಜೊತೆ ಉತ್ತಮ ಬಾಂಧವ್ಯ ಕಾಯ್ದುಕೊಳ್ಳಬೇಕು. ನಾನು ಕೇಂದ್ರದ ಮಂತ್ರಿಯಾಗಿ ಒಂದು ಮುಕ್ಕಾಲು ವರ್ಷವಾಯಿತು. ಈ ತನಕ ಕರ್ನಾಟಕದ ಯಾವ ಮಂತ್ರಿಯೂ ನನ್ನ ಬಳಿ ಬಂದು ಸಮಸ್ಯೆ ಹೇಳಿಕೊಂಡಿಲ್ಲ. ಹೀಗಿರುವಾಗ ರಾಜ್ಯದ ಸಮಸ್ಯೆ ಹೇಗೆ ಪರಿಹಾರವಾಗುತ್ತದೆ ಎಂದು ಪ್ರಶ್ನಿಸಿದರು.

ನಾನು ಜ್ಯೋತಿಷಿಯಲ್ಲ: ಸಿದ್ದರಾಮಯ್ಯ ಅವರೆ ಸಿಎಂ ಆಗಿ ಮುಂದುವರೆಯುತ್ತಾರೆ ಎಂದು ಭವಿಷ್ಯ ಹೇಳಲು ನಾನು ಜ್ಯೋತಿಷಿಯೇ. ಸಿದ್ದರಾಮಯ್ಯ ಅವರ ಬದಲಾವಣೆ ನಮಗೆ ಸಂಬಂಧಿಸದ ವಿಚಾರವಲ್ಲ. ಸಿಎಂ ಬದಲಾ ವಣೆಗಿಂತ ನಮಗೆ ರಾಜ್ಯದ ಅಭಿವೃದ್ಧಿ ಮುಖ್ಯ. ಸಿದ್ದರಾಮಯ್ಯ ಬದಲಾಗಲಿ ಅಥವಾ ಬಿಡಲಿ, ಕಾಂಗ್ರೆಸ್‌ನಿಂದ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ನಾನು ರಾಜ್ಯ ರಾಜಕಾರಣಕ್ಕೆ ಬರುವ ಬಗ್ಗೆ ಸಮಯ ಬಂದಾಗ ಪ್ರತಿಕ್ರಿಯೆ ನೀಡುವೆ ಎಂದು ಕುಮಾರಸ್ವಾಮಿ ಅವರು ತಿಳಿಸಿದರು.

ಸಂಸದ ಯದುವೀರ್ ಕೃಷ್ಣರಾಜ ಒಡೆಯರ್, ಶಾಸಕರಾದ ಟಿ.ಎಸ್.ಶ್ರೀವತ್ಸ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ ಅಮು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಾಲವೇ ನಿರ್ಧರಿಸುತ್ತದೆ...

ಇರಬೇಕು. ಜೆಡಿಎಸ್‌ನಲ್ಲಿದ್ದುಕೊಂಡು ಕಾಂಗ್ರೆಸ್ ಹೊಗಳುವುದು ಶೋಭೆ ತರುವುದಿಲ್ಲ ಎಂದರು. ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಜಿಟಿಡಿ ಕಾಂಗ್ರೆಸ್ ಸರ್ಕಾರವನ್ನು ಹೊಗಳುತ್ತಿದ್ದಾರೆ ಎಂಬ ಚರ್ಚೆ ನಡೆದಿರುವ ಬಗ್ಗೆ ಪ್ರತಿಕ್ರಿಯಿಸಿ, ಯಾವುದೇ ಯೋಜನೆಗೆ ಅನುದಾನ ತರಲು ಈಗ ಕಮಿಷನ್ ಫಿಕ್ಸ್ ಮಾಡಿದ್ದಾರೆ. ಇದನ್ನು ರಾಜ್ಯದ ಪ್ರತಿಯೊಬ್ಬ ಶಾಸಕರು ಅನುಸರಿಸುತ್ತಿದ್ದಾರೆ. ಹೀಗಿರುವಾಗ ಜಿ.ಟಿ.ದೇವೇಗೌಡರು ಕೂಡ ಕಮಿಷನ್ ಕೊಟ್ಟು ಅನುದಾನ ತರಲಿ, ಸುಖಾ ಸುಮ್ಮನೆ ಸಿದ್ದರಾಮಯ್ಯ ಅವರನ್ನೇಕೆ ಹೊಗಳುತ್ತಾರೆ ಎಂದು ಕೇಳಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರ ಬದಲು ಪರ್ಯಾಯ ನಾಯಕರು ಯಾರಿದ್ದಾರೆ, ಯಾರಿಗೆ ಟಿಕೆಟ್ ಕೊಡುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಚುನಾವಣೆಯಲ್ಲಿ ಸ್ಪರ್ಧಿಸಲು ಹಲವರು ದೊಡ್ಡ ಮಟ್ಟದಲ್ಲಿ ತಯಾರಾಗಿದ್ದಾರೆ. ಸದ್ಯ ಜಿ.ಟಿ.ದೇವೇಗೌಡರು ನಮ್ಮ ಪಕ್ಷದಲ್ಲಿ ಇಲ್ಲ. ಆದ ಕಾರಣ ನೀವು ಪದೇ ಪದೆ ಅವರ ಬಗ್ಗೆ ಪ್ರಶ್ನೆ ಕೇಳಬೇಡಿ. ಇವರ ಬಗ್ಗೆ ಕಾಲವೇ ನಿರ್ಧರಿಸುತ್ತದೆ ಎಂದರು.

ಯತೀಂದ್ರ ಹಸ್ತಕ್ಷೇಪ

ಸಿದ್ದರಾಮಯ್ಯ ಪುತ್ರ ಯತೀಂದ್ರ ಅವರು ಪ್ರತಿಯೊಂದು ಇಲಾಖೆ ಹಾಗೂ ವಿಧಾನ ಸಭಾ ಕ್ಷೇತ್ರ ದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದರು.

ಹಸ್ತಕ್ಷೇಪ ನನ್ನ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ, ಇಡೀ ರಾಜ್ಯದಲ್ಲಿ ಹಸ್ತಕ್ಷೇಪ ಆಗುತ್ತಿದೆ. ಈ ಬಗ್ಗೆ ಸಮಯ ಬಂದಾಗ ಪ್ರತಿಕ್ರಿಯೆ ನೀಡುತ್ತೇನೆ. ಕೆಲವು ಅಧಿಕಾರಿಗಳು ಶಂಖದಿಂದ ಬಂದರೆ ತೀರ್ಥ ಎಂದು ಭಾವಿಸಿದ್ದಾರೆ. ನಾನು ಕೂಡ ಶಂಖ ಊದುವ ಕೆಲಸ ಮಾಡು ತ್ತೇನೆ ಎಂದು ಖಾರವಾಗಿ ಪ್ರತಿಕ್ರಿಯೆ ನೀಡಿದರು. ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಸಿಎಂ ಆಗಿರುತ್ತಾರೆ ಎಂಬ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ್ದ ಡಿ.ಕೆ.ಶಿವಕುಮಾರ್ ಅವರು, ಯತೀಂದ್ರ ನಮ್ಮ ಪಾರ್ಟಿ ಹೈಕಮಾಂಡ್ ಎಂದು ವ್ಯಂಗ್ಯವಾಡಿದ್ದರು. ಈ ವೇಳೆ ಡಿ.ಕೆ.ಶಿವ ಕುಮಾರ್ ಅವರ ಹೇಳಿಕೆಯನ್ನು ನಾನು ಸಮರ್ಥಿ ಸುತ್ತೇನೆ ಎಂದು ಶಾಸಕ ತನ್ವೀರ್ ಸೇಠ್ ಸ್ಪಷ್ಟಪಡಿಸಿದ್ದರು.

ಯಾರೋ ಏನೋ ಹೇಳಿಕೆ ಕೊಟ್ಟರೆ ಬದಲಾಗಲ್ಲ

ಸಿಎಂ ಬದಲಾವಣೆ ವಿಚಾರಕ್ಕೆ ದಿನೇಶ್ ಗುಂಡೂರಾವ್ ಪ್ರತಿಕ್ರಿಯೆ



ಬೀದರ್: ಮುಖ್ಯಮಂತ್ರಿ ಯಾರೆಂಬುದು ಪಕ್ಷದ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತೆ. ಯಾರೋ ಏನೋ ಹೇಳಿಕೆ ಕೊಟ್ಟರೆ ಏನೂ ಬದಲಾಗಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿಎಂ ಯಾರಾಗುತ್ತಾರೆ ಎನ್ನುವುದರ ಬಗ್ಗೆ ಚರ್ಚೆ ನಡೆಸುವ ಅಗತ್ಯವಿಲ್ಲ. ಕೆಲವರ ಹೇಳಿಕೆಗಳಿಂದ ಈ ರೀತಿಯ ಚರ್ಚೆಗಳು ಆಗುತ್ತಿರುತ್ತವೆ. ಆದರೆ, ಇದೆಲ್ಲ ಅನಗತ್ಯ. ಇದರ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ಈಗಾಗಲೇ ಹೇಳಿದ್ದಾರೆ ಎಂದರು.

ಮುಖ್ಯಮಂತ್ರಿ ಪುತ್ರ ಯಾವುದೋ ಮಾಧ್ಯಮದಲ್ಲಿ ಹೇಳಿದ್ದಾರೆ. ಆದರೆ, ಇದು ಯಾರೋ ಒಬ್ಬರ ತೀರ್ಮಾನವಲ್ಲ. ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಎಲ್ಲರೂ ಹೈಕಮಾಂಡ್ ನಿರ್ಧಾರವನ್ನು ಒಪ್ಪುತ್ತಾರೆ. ಪಕ್ಷದಲ್ಲಿ ಗುಂಪುಗಾರಿಕೆ, ಭಿನ್ನಮತ ಇಲ್ಲ. ಅಧಿವೇಶನದಲ್ಲಿ ಒಗ್ಗಟ್ಟಾಗಿ ಎದುರಿಸಿದ್ದೇವೆ. ಪಕ್ಷದ ಹಿತದೃಷ್ಟಿಯಿಂದ ಹೈಕಮಾಂಡ್ ಏನು ಮಾಡಬೇಕೋ ಅದನ್ನು ಮಾಡುತ್ತದೆ. ಕೆಲವು ಊಹಾಪೋಹಗಳು ಇರುತ್ತವೆ. ಆಯವ್ಯಯದ ನಂತರ ಸಚಿವ ಸಂಪುಟದ ಪುನರ್ ರಚನೆ ಖಂಡಿತವಾಗಿ ಆಗುತ್ತದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಸುಳ್ಳಿನ ರಾಜ; ಕೇಂದ್ರ ಸಚಿವ ಸೋಮಣ್ಣ ವಾಗ್ದಾಳಿ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸುಳ್ಳಿನ ರಾಜ, ಅವರು ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಾಗಿನಿಂದ ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರು ತಮ್ಮ ಆಡಳಿತದಲ್ಲಾಗಿರುವ ಒಂದೇ ಒಂದು ಅಪಚಾರದ ಬಗ್ಗೆಯೂ ಮಾತನಾಡುತ್ತಿಲ್ಲ. ಮುಂದೆಂದೂ ಅಧಿಕಾರಕ್ಕೆ ಬರುವುದಿಲ್ಲ ಎಂಬಂತೆ ಕಾಂಗ್ರೆಸ್ ವರ್ತಿಸುತ್ತಿದೆ ಎಂದು ಕಿಡಿಕಾರಿದರು.

ರೈಲ್ವೇ ಭೂಸ್ವಾಧೀನ ವಿಳಂಬ: ರೈಲ್ವೆ ಸೇರಿದಂತೆ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಿದೆ ಆದರೆ, ರಾಜ್ಯ ಸರ್ಕಾರ ನಿಗದಿತ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಯೋಜನೆಗೆ ಕಲ್ಪಿಸಿಕೊಡುವಲ್ಲಿ ಹಿಂದೇಟು ಹಾಕುತ್ತಿದೆ. ಇದರಿಂದ ಯೋಜನೆಗಳು ಕುಂಟುತ್ತ ಸಾಗಿವೆ. ಬೆಳಗಾವಿಯಿಂದ ಧಾರವಾಡ ಸಮೀಪದ ಮುಮ್ಮಿಗಟ್ಟಿವರೆಗೆ ರೈಲ್ವೆ ಹಳಿ ಅಭಿವೃದ್ಧಿಗೆ ಅಗತ್ಯವಿರುವ ಕೇವಲ 55 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ. ಈ ಸಮಸ್ಯೆ ಶೀಘ್ರ ಪರಿಹಾರವಾಗದಿದ್ದರೆ ಕಾನೂನಿನನ್ವಯ ಮುಂದುವರಿಯಬೇಕಾಗುತ್ತದೆ ಎಂದು ಸಚಿವ ಸೋಮಣ್ಣ ಎಚ್ಚರಿಸಿದರು.



ವಿ.ಸೋಮಣ್ಣ

ಭಾಷೆ ಕಲಿಯಬೇಕು: ರೈಲ್ವೆ ಪರೀಕ್ಷೆಗಳಲ್ಲಿ ಭಾಷಾ ವಿವಾದ ಕುರಿತು ಸ್ಪಷ್ಟನೆ ನೀಡಿದ ಅವರು, ಇತ್ತೀಚಿನ ಪರೀಕ್ಷೆಯು ಉದ್ಯೋಗ ಬಡ್ತಿಗೆ ಸಂಬಂಧಿಸಿದ್ದಾಗಿದೆ. ಕೇಂದ್ರ ಸರ್ಕಾರವು ಈಗಾಗಲೇ ಅಭ್ಯರ್ಥಿಗಳಿಗೆ ತಮ್ಮ ರಾಜ್ಯ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಿದೆ. ಅನೇಕರು ತಮ್ಮ ಮಾತೃಭಾಷೆಯಲ್ಲಿ ಪರೀಕ್ಷೆ ಬರೆದು ಉದ್ಯೋಗ ಪಡೆದಿದ್ದಾರೆ. ಆದಾಗ್ಯೂ, ರೈಲ್ವೇ ಮಂಡಳಿ ಆಡಳಿತಾತ್ಮಕ ವ್ಯವಹಾರ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಯುತ್ತಿರುವುದರಿಂದ ಅಧಿಕಾರಿಗಳು ಈ ಭಾಷೆಗಳನ್ನೂ ಕಲಿಯಬೇಕು. ಇಲ್ಲದಿದ್ದರೆ ಅವರ ಬಡ್ತಿ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಜನರೇ ಉತ್ತರಿಸುತ್ತಾರೆ: ಬೆಂಗಳೂರು ಮೆಟ್ರೋ ವಿಚಾರವಾಗಿ ಮಾತನಾಡಿ, ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಮೆಟ್ರೋ ಯೋಜನೆಗೆ ಅಡಿಪಾಯ ಹಾಕಲಾಗಿತ್ತು. ಇಂದು ಲಕ್ಷಾಂತರ ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಜನಸಂದಣಿ ನಿಯಂತ್ರಿಸಲು ಕೇಂದ್ರ ಸರ್ಕಾರವು ಮೆಟ್ರೋ ಯೋಜನೆಗೆ ಭರಪೂರ ನೆರವು ನೀಡುತ್ತಿದೆ. ಆದರೆ ಕಾಂಗ್ರೆಸ್ ಸರ್ಕಾರವು ಕೇಂದ್ರದ ಯೋಜನೆಗಳ ಕ್ರೆಡಿಟ್ ಪಡೆಯಲು ಯತ್ನಿಸುತ್ತಿದೆ. ಪ್ರಯಾಣ ದರ ಏರಿಕೆ ವಿಚಾರವಾಗಿ ರಾಜ್ಯ ಸರ್ಕಾರದ ಹಾದಿ ತಪ್ಪಿಸುವ ವರ್ತನೆಗಳಿಗೆ ಮುಂದಿನ ದಿನಗಳಲ್ಲಿ ಜನರೇ ಉತ್ತರ ನೀಡಲಿದ್ದಾರೆ ಎಂದು ಸಚಿವ ಸೋಮಣ್ಣ ಹೇಳಿದರು.

ಕ್ರೀಡಾ ಶಾಲಾ, ನಿಲಯಗಳಿಗೆ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆ

ಮೈಸೂರು: ಯುವ ಸಬಲೀಕರಣ, ಕ್ರೀಡಾ ಇಲಾಖೆ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ಕ್ರೀಡಾಶಾಲೆ, ನಿಲಯಗಳಿಗೆ 14 ವರ್ಷದೊಳಗಿನ, 2026–27ನೇ ಸಾಲಿಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಕಿರಿಯರ ವಿಭಾಗದ ಹಾಗೂ 2026–27ನೇ ಸಾಲಿಗೆ ಪ್ರಥಮ ಪಿಯುಸಿ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಹೊಂದಿರುವ 18 ವರ್ಷದೊಳಗಿನ ಹಿರಿಯರ ವಿಭಾಗದ ಯುವಕ–ಯುವತಿಯರಿಗೆ ಫೆ15, 16ರಂದು ಬೆಳಿಗ್ಗೆ 9 ಗಂಟೆಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಸಲಾಗುವುದು.

ಅಥ್ಲೆಟಿಕ್ಸ್, ಬಾಸ್ಕೆಟ್ ಬಾಲ್, ಸ್ಕೇಟಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಖೋ–ಖೋ, ಕಬಡ್ಡಿ, ಹಾಕಿ, ಜೂಡೋ, ವಾಲಿ ಬಾಲ್, ಕುಸ್ತಿ, ಅರ್ಚರಿ, ಫೆನ್ಸಿಂಗ್ ಕ್ರೀಡೆಗಳನ್ನು ನಡೆಸಲಾಗುತ್ತದೆ. ಫೆ.10ರಂದು ಬೆಳಿಗ್ಗೆ 10 ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಮಾಹಿತಿಗೆ ದೂ.ಸಂ.: 0821–2564179.



ಜೆಡಿಎಸ್ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಮಾಜಿ ಶಾಸಕ ಅಶ್ವಿನ್‌ಕುಮಾರ್ ಅವರನ್ನು ರಾಜ್ಯ ವಕ್ತಾರ ಎನ್.ಆರ್.ರವಿಚಂದ್ರೇಗೌಡ, ಸರ್ಕಾರಿ ಅತಿಥಿಗೃಹದಲ್ಲಿ ಅಭಿನಂದಿಸಿದರು. ಈ ವೇಳೆ ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ಮುಖಂಡರಾದ ವರುಣ ಪ್ರಶಾಂತ್, ರಾಕೇಶ್ ಮಿತ್ತಲ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಕಾಯಕ ಶರಣರ ಜಯಂತಿ

ಮೈಸೂರು: ಜಿಲ್ಲಾಡಳಿತ, ಕನ್ನಡ–ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಾಯಕ ಶರಣರ ಜಯಂತಿಯನ್ನು ಫೆ.10ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು–ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು. ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ–ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್‌ಕುಮಾರ್, ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಇನ್ನಿತರರು ಉಪಸ್ಥಿತರಿರುವರು.

ನಮೋ ಯೋಗ ಭವನದಲ್ಲಿ ಬಸವತತ್ವ ಆಚರಣೆ, ಸಾಧಕರಿಗೆ ಸನ್ಮಾನ



ನಮೋ ಯೋಗ ಭವನದಲ್ಲಿ ಬಸವ ತತ್ವ ಆಚರಣೆ ಅಭಿಯಾನ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಮೈಸೂರು, ಫೆ.8(ಎಂಕೆ)– ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗ ಭವನದಲ್ಲಿ ಬಸವ ತತ್ವ ಆಚರಣೆ ಅಭಿಯಾನ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಬಸವ ಬಳಗ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಹಾಗೂ ಬಸವ ತತ್ವ ಅನುಯಾಯಿ ನಗರ್ಲೆ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್ ಮಾತನಾಡಿ, ಸರಳ ಹಾಗೂ ಮಾದರಿ ಕಾರ್ಯಕ್ರಮಗಳು ನಮೋ ಯೋಗ ಭವನದಲ್ಲಿ ನಡೆಯುತ್ತಿದ್ದು, ಬಸವ ತತ್ವ ಅಭಿಯಾನ ಇಲ್ಲಿಂದಲೇ ಆರಂಭವಾಗಿರುವುದು ಸಂತಸದ ವಿಚಾರ. ಸ್ವಸ್ಥ ಸಮಾಜ ನಿರ್ಮಾಣಕ್ಕೆ ಬಸವ ತತ್ವಗಳು ಅನುಕರಣೀಯ ಎಂದರು. ಶಿಕ್ಷಕರಾದ ಪ್ರಸಾದ್, ಮಹೇಶ್, ಮಂಜುಳಾ, ಯೋಗ ಭವನ ಪದಾಧಿಕಾರಿಗಳಾದ ಎಂ.ಮಲ್ಲಿಕಾರ್ಜುನಸ್ವಾಮಿ, ಜಿ.ರವಿಶಂಕರ್, ಲಲಿತಾ, ದಿವ್ಯ, ಸುಜಾತಾ, ಸಂತೇಮರಳ್ಳಿ ರವಿಪ್ರಶಾಂತ್, ಉಮ್ಮತ್ತೂರು ಪ್ರಶಾಂತ್ ಮತ್ತಿತರರಿದ್ದರು.

ಅಂಗನವಾಡಿಗಳಿಗೆ ಕಳಪೆ ಆಹಾರ ಪೂರೈಕೆ; ಹಿಂದಿನ ವ್ಯವಸ್ಥೆಯನ್ನೇ ಮರು ಸ್ಥಾಪಿಸಿ

ಸಿಎಂ ಸಿದ್ದರಾಮಯ್ಯರಿಗೆ ಪತ್ರ ಬರೆದು ಆರ್.ಅಶೋಕ್, ಡಾ.ಎಲ್.ಹನುಮಂತಯ್ಯ ಆಗ್ರಹ





ಆರ್.ಅಶೋಕ್



ಡಾ.ಎಲ್.ಹನುಮಂತಯ್ಯ

ಬೆಳಗಾವಿ: ಅಂಗನವಾಡಿ ಕೇಂದ್ರಗಳಿಗೆ ಕಳಪೆ ಆಹಾರ ಪೂರೈಕೆಯನ್ನು ತಕ್ಷಣವೇ ನಿಲ್ಲಿಸಿ, ಸರ್ಕಾರ ನಡೆಸುವ ಸಹಕಾರಿ ಸಂಸ್ಥೆ 'ಜನತಾ ಬಜಾರ್' ಮೂಲಕ ಗುಣಮಟ್ಟದ ಆಹಾರವನ್ನು ಖರೀದಿಸುವ ವ್ಯವಸ್ಥೆಯನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ರಾಜ್ಯಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಈ ಇಬ್ಬರು ನಾಯಕರು ಪ್ರತ್ಯೇಕವಾಗಿ ಬರೆದಿರುವ ಪತ್ರಗಳಲ್ಲಿ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಕರ್ನಾಟಕ ಶಾಸಕಾಂಗ ಸಮಿತಿಯ (2024–25) ಶಿಫಾರಸುಗಳನ್ನು ಉಲ್ಲೇಖಿಸಿ, ಅವುಗಳನ್ನು ಐತಿಹಾಸಿಕ ಮತ್ತು ರಾಜ್ಯದ ಬಡ ಮಕ್ಕಳ ಆರೋಗ್ಯ ಮತ್ತು ಅಭಿವೃದ್ಧಿಗೆ ಅಪಾರ ಮಹತ್ವದ್ದಾಗಿದೆ ಎಂದಿದ್ದಾರೆ.

ಅಂಗನವಾಡಿಗಳಿಗೆ ಪ್ರಸ್ತುತ ಪೌಷ್ಠಿಕಾಂಶ ಪೂರೈಕೆಯ ಬಗ್ಗೆ ಶಾಸಕಾಂಗ ಸಮಿತಿಯು ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ. ಮಕ್ಕಳಿಗೆ ಪೌಷ್ಠಿಕಾಂಶಯುಕ್ತ ಆಹಾರವನ್ನು ಸರಿಯಾಗಿ ಪೂರೈಸಲಾಗುತ್ತಿಲ್ಲ. ಈ ಹಿಂದೆ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ನೀಡಲಾಗುತ್ತಿತ್ತು. ಆದರೆ, ಪ್ರಸ್ತುತ ವ್ಯವಸ್ಥೆಯಲ್ಲಿ ಗುಣಮಟ್ಟ ಕುಸಿತಗೊಂಡಿದೆ ಎಂದು ಸಮಿತಿಯು ಹೇಳಿದೆ.

ಆಹಾರವು ಈಗ ಪುಡಿ ರೂಪದಲ್ಲಿ ಸರಬರಾಜು ಆಗುತ್ತಿದೆ. ಇದು ಸಾಕಷ್ಟು ಪೌಷ್ಠಿಕಾಂಶದ ಮೌಲ್ಯವನ್ನು ಹೊಂದಿದೆಯೇ ಎಂಬ ಅನುಮಾನ ಸೃಷ್ಟಿಯಾಗಿದೆ ಎಂದು ಆರ್.ಅಶೋಕ್ ಆತಂಕ ವ್ಯಕ್ತಪಡಿಸಿದ್ದಾರೆ.

ಸವಲತ್ತು ವಂಚಿತ ಮಕ್ಕಳ ಆರೋಗ್ಯಕರ ಬೆಳವಣಿಗೆಯನ್ನು ಕಾಪಾಡುವಲ್ಲಿ ಸಮಿತಿಯ ಸಂಶೋಧನೆಗಳು ನಿರ್ಣಾಯಕವಾಗಿವೆ. ಹಿಂದಿನ ಆಹಾರ ಪೂರೈಕೆ ಮಾದರಿಗೆ ಹೋಗಬೇಕು ಎಂದು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಒತ್ತಾಯಿಸಿದ್ದಾರೆ

ಕಾಂಗ್ರೆಸ್, ಬಿಜೆಪಿ ಜಾಹೀರಾತು ಜಟಾಪಟಿಯಲ್ಲಿ ಮಹಾತ್ಮ ಗಾಂಧೀಜಿ ಭಾವಚಿತ್ರ ದುರ್ಬಳಕೆ

ಗಾಂಧಿ ಸ್ಮಾರಕ ನಿಧಿ ಖಂಡನೆ



ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ಪ್ರಕಟವಾದ ಜಾಹೀರಾತಿನಲ್ಲಿ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಗಾಂಧಿ ಸ್ಮಾರಕ ನಿಧಿ ಅಸಮಾಧಾನ ವ್ಯಕ್ತಪಡಿಸಿದ್ದು, ಇದು ರಾಷ್ಟ್ರಪಿತನ ಮೂಲ ಆದರ್ಶಗಳಿಗೆ ಮಾಡಿದ ಅವಮಾನವಾಗಿದ್ದು, ರಾಷ್ಟ್ರೀಯ ಕಾಳಜಿಯ ವಿಷಯವಾಗಿದೆ ಎಂದು ಹೇಳಿದೆ.

ಗಾಂಧಿಯವರ ಕಾರ್ಟೂನ್ ಬಳಸಿ ಜಾಹೀರಾತಿನ ಮೂಲಕ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಬಿಜೆಪಿ ತೀವ್ರ ಜಟಾಪಟಿ ನಡೆಸಿವೆ. ರಾಜ್ಯ ಸರ್ಕಾರದಿಂದಲೇ ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗಿದ್ದು, ಫೆ.3ರಂದು ಪ್ರಮುಖ ದೇಶೀಯ ಮತ್ತು ಇಂಗ್ಲಿಷ್ ಮುಖಪುಟದ ಜಾಹೀರಾತಿನಲ್ಲಿ ಸಂಗಪ್ಪ ಎಂಬ ವ್ಯಕ್ತಿಯೊಂದಿಗೆ ಗಾಂಧಿ ಸಂಭಾಷಣೆ ನಡೆಸುತ್ತಿರುವ ವ್ಯಂಗ್ಯಚಿತ್ರಗಳಿವೆ. ಬಿಳಿ ಶರ್ಟ್ ಮತ್ತು ಖಾಕಿ ಪ್ಯಾಂಟ್ ಧರಿಸಿರುವುದನ್ನು ಚಿತ್ರಿಸಲಾಗಿದೆ. ಇದು ಆರ್‌ಎಸ್‌ಎಸ್ ಸಮವಸ್ತ್ರ ಹೋಲುತ್ತದೆ ಎಂದು ಬಿಜೆಪಿ ಹೇಳಿದೆ.

ಇದಕ್ಕೆ ಪ್ರತಿಯಾಗಿ ಫೆ.7ರಂದು ಬಿಜೆಪಿ ಪೂರ್ಣಪುಟದ ಜಾಹೀರಾತು ನೀಡಿದ್ದು, ಅದರಲ್ಲಿ ಗಾಂಧೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೊಣ್ಣೆಯಿಂದ ಹೊಡೆಯುತ್ತಿರುವಂತೆ ತೋರಿಸಲಾಗಿದೆ. ಅಲ್ಲದೇ ಅವರೆಲ್ಲರನ್ನೂ ನುಂಗಪ್ಪ ಎಂದು ಕರೆಯಲಾಗಿದೆ. ಈ ಜಾಹೀರಾತಿನಲ್ಲಿ ಮಹಾತ್ಮರನ್ನೇ ಬಂಡವಾಳ ಮಾಡಿಕೊಂಡ ನುಂಗಪ್ಪಗಳು ಎಂದು ಶೀರ್ಷಿಕೆ ನೀಡಲಾಗಿದೆ.

ಈ ಜಾಹೀರಾತು ಜಟಾಪಟಿ ಕುರಿತು ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವುಡೆ ಪಿ.ಕೃಷ್ಣ ಮತ್ತು ಗೌರವ ಕಾರ್ಯದರ್ಶಿ ಎಂ.ಸಿ.ನರೇಂದ್ರ ಆತಂಕ ವ್ಯಕ್ತಪಡಿಸಿದ್ದಾರೆ. ಇದು ಗಾಂಧಿಯವರ ತತ್ವ ಆದರ್ಶಕ್ಕೆ ಮಾಡಿದ ಅವಹೇಳನ. ಇಂತಹ ಜಾಹೀರಾತುಗಳು ಯುವ ಪೀಳಿಗೆಯನ್ನು ದಾರಿ ತಪ್ಪಿಸುತ್ತವೆ ಮತ್ತು ಅವರ ಪರಂಪರೆಗೆ ಸಂಬಂಧಿಸಿದ ಪಾವಿತ್ರ್ಯವನ್ನು ಹಾಳು ಮಾಡುತ್ತವೆ ಎಂದು ಎಚ್ಚರಿಸಿದ್ದಾರೆ.



ಮೈಸೂರು ತಾಲೂಕು ಜಯಪುರ ಗ್ರಾಮದಲ್ಲಿ ಶನಿವಾರ ರಾತ್ರಿ ಶನಿದೇವರ ಪಲ್ಲಕ್ಕಿ ಉತ್ಸವ ನಡೆಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಮೆರವಣಿಗೆಯಲ್ಲಿ ಛತ್ರಿ ಚಾಮರಗಳು, ಬಿರುದು ಬಾವಲಿಗಳು, ವೀರಗಾಸೆ ನೃತ್ಯ, ತಮಟೆ, ಗೊಂಬೆ ಕುಣಿತ ಕಂಡುಬಂದವು. ಭಕ್ತರು ಶನಿದೇವರಿಗೆ ಪೂಜೆ ಸಲ್ಲಿಸಿದರು.

ಶ್ರದ್ಧೆ, ಪ್ರೀತಿಯಿಂದ ಮಾತ್ರ ಯಶಸ್ವಿ ತರಬೇತಿ ಸಾಧ್ಯ

ಮೈಸೂರು, ಫೆ. 8–ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪರಿಚಯಾತ್ಮಕ ಕಾರ್ಯಕ್ರಮ ಹಾಗೂ ವಿದ್ಯಾರ್ಥಿ ಸಂಘಗಳ ಉದ್ಘಾಟನೆ–2026 ಕಾರ್ಯಕ್ರಮ ನಡೆಯಿತು.



ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪರಿಚಯಾತ್ಮಕ ಕಾರ್ಯಕ್ರಮ, ವಿದ್ಯಾರ್ಥಿ ಸಂಘಗಳ ಉದ್ಘಾಟನೆ–2026 ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ರಾಜಲಕ್ಷ್ಮಿ, ಶ್ರದ್ಧೆ, ಪ್ರೀತಿಯಿಂದ ಮಾತ್ರ ಯಶಸ್ವಿ ತರಬೇತಿ ಸಾಧ್ಯವೆಂದು ತಿಳಿಸಿದರು.

ಶ್ರೀ ಕ್ಷೇತ್ರದಲ್ಲಿ ಅಧ್ಯಯನ ಮಾಡುತ್ತಿರುವ ನೀವುಗಳೆಲ್ಲರೂ ಭಾಗ್ಯಶಾಲಿಗಳು, ಶಿಕ್ಷಕ ವೃತ್ತಿಯು ಅತ್ಯಂತ ಪವಿತ್ರವಾದ ವೃತ್ತಿಯಾಗಿದ್ದು, ಪ್ರಶಿಕ್ಷಣಾರ್ಥಿಗಳಾದ ತಾವುಗಳು ಅದನ್ನು ಕಠಿಣ ಪರಿಶ್ರಮ, ಶ್ರದ್ಧೆ ಹಾಗೂ ಪ್ರೀತಿಯಿಂದ ಗೌರವಿಸಬೇಕು. ಶಿಕ್ಷಕನಿಗೆ ನಿರಂತರ ಓದುವ ಹವ್ಯಾಸವಿರಬೇಕು, ವಿದ್ಯಾರ್ಥಿಗಳಲ್ಲಿ ಚಟುವಟಿಕೆ, ಸಂಗ್ರಹಣೆ, ಚಿಕಿತ್ಸೆ ಹಾಗೂ ಕುತೂಹಲದ ಪ್ರವೃತ್ತಿಗಳಿರುತ್ತವೆ. ಶಿಕ್ಷಕನಾದವನು ಅದನ್ನು ಗಮನಿಸಿ, ಅದಕ್ಕೆ ತಕ್ಕಂತೆ ಬೋಧಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು.

ಮೈಸೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಚಕ ಡಿ.ಆರ್. ಅಮಿತ್, ದೇಶಕ್ಕೆ ಸೈನಿಕರು ಹಾಗೂ ಶಿಕ್ಷಕರು ಬಹಳ ಮುಖ್ಯ, ಸೈನಿಕರು ರಾಷ್ಟ್ರವನ್ನು ರಕ್ಷಿಸಿದರೆ, ಶಿಕ್ಷಕರು ದೇಶವನ್ನು ಕಟ್ಟುತ್ತಾರೆ. ಪ್ರಸ್ತುತ ದಿನಮಾನಗಳಲ್ಲಿ ವಿದ್ಯಾರ್ಥಿಗಳಿಗೆ ದೇಶವನ್ನು ಕಟ್ಟಲು ಬೇಕಾದ ಮಾನವೀಯತೆ, ದೇಶಭಕ್ತಿ ಸೇವಾ ಮನೋಭಾವ ಮುಂತಾದ ಗುಣಗಳನ್ನು ಬೆಳೆಸುವುದರ ಜೊತೆಗೆ ಶಿಕ್ಷಕರು ವೈಯಕ್ತಿಕ ಭಿನ್ನತೆಗಳನ್ನು ಅರಿತು, ಬದಲಾದ ಕಾಲಮಾನಕ್ಕೆ ತಕ್ಕಂತೆ ಬೋಧಿಸಲು ವಿಶಿಷ್ಟ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳಬೇಕು ಎಂದರು.

ಮೈಸೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಚಕರಾದ ಲಕ್ಷ್ಮೀಕಾಂತ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಸಂವಹನ ಕೌಶಲವನ್ನು ಬೆಳೆಸಿಕೊಳ್ಳಬೇಕು. ಹಲವು ಭಾಷೆಗಳ ಕಲಿಕೆ ಇಂದು ಅನಿವಾರ್ಯವಾಗಿದೆ. ಈ ಪೈಪೋಟಿ ದಿನಗಳಲ್ಲಿ ಶಿಕ್ಷಕರು ಸದಾಕಾಲ ವಿದ್ಯಾರ್ಥಿಗಳಾಗಿರಬೇಕು. ಕೆಲಸ ಮಾಡುವ ವ್ಯಕ್ತಿಗೆ ಬೇರೆ ಕೆಲಸವೇ ವಿಶ್ರಾಂತಿ ಎನ್ನುವ ಮನೋಭಾವವಿರಬೇಕು ಎಂದರು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಹಾಯಕ ಸಂಯೋಜನಾಧಿಕಾರಿ ವೀರಭದ್ರಯ್ಯ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಎಂ.ಮಹೇಶ್, ಪರಮಪೂಜ್ಯ ಜಗದ್ಗುರು ಜ್ಞಾನಾನ್ನ ದಾಸೋಹವನ್ನು ಸಮಾಜಕ್ಕೆ ನೀಡುತ್ತಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಬದುಕಿದೆ ಬೆಳಕಾಗಿದ್ದಾರೆ, ಪೂಜ್ಯರ ಆದರ್ಶಗಳನ್ನು ರೂಢಿಸಿಕೊಂಡಾಗ ಮಾತ್ರ ಉತ್ತಮ ಶಿಕ್ಷಕರಾಗಲು ಸಾಧ್ಯ ಎಂದರು.

ವಿದ್ಯಾರ್ಥಿಗಳು ಮಿತ ಸವಲತ್ತು ಬಳಸಿ ಸಾಧನೆ ಮಾಡಿ

ಎಡಿಸಿ ಡಾ.ಶಿವರಾಜು ಸಲಹೆ



ದೀಪಾ ಸಂಯುಕ್ತ ಪಪೂ ಕಾಲೇಜಲ್ಲಿ ನಡೆದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ.

ಮೈಸೂರು,ಫೆ.8–ಗ್ರಾಮೀಣ ಪ್ರದೇಶದಲ್ಲಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಉದ್ದೇಶ ಇಟ್ಟುಕೊಂಡು ಶಿಕ್ಷಣ ಕಲಿಯುವ ಆಸಕ್ತಿ ಬೆಳೆಸಿಕೊಳ್ಳಬೇಕು. ಇರುವ ಮಿತ ಸವಲತ್ತುಗಳನ್ನು ಬಳಸಿಕೊಂಡು ಅಪರಿಮಿತ ಸಾಧನೆ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಕರೆ ನೀಡಿದರು.

ಮೈಸೂರಿನ ರೂಪಾನಗರದ ದೀಪಾ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಶಾರದಾ ಪೂಜಾ ಕಾರ್ಯಕ್ರಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಮೂವತ್ತು ವರ್ಷಗಳ ಹಿಂದಿನ ಕಾಲಘಟ್ಟದಲ್ಲಿ ಓದಲು ಆಗದ ಪರಿಸ್ಥಿತಿಗಳಲ್ಲಿ ಶ್ರದ್ಧೆಯಿಂದ ಕಲಿತವರು ಮುಂದೆ ಬಂದಿದ್ದಾರೆ. ಅದಕ್ಕೆ ನಮ್ಮಂತೆ ಇರುವ ಅನೇಕ ನಿದರ್ಶನಗಳಿವೆ. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಅಡ್ಡದಾರಿ ಹಿಡಿಯದೇ ಉತ್ತಮ ಬದುಕನ್ನು ಕಟ್ಟಿಕೊಳ್ಳಲು ವಿನಯದಿಂದ ಶ್ರದ್ಧೆಯಿಂದ ಕಲಿಯಬೇಕು ಹಾಗೆಯೇ ಮುಂದೆ ಆದರ್ಶಪ್ರಾಯರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆಯ ಅಧ್ಯಕ್ಷ, ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ. ರಾಮಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಬುದ್ಧಿವಂತಿಕೆ ಯಾರ ಆಸ್ತಿಯೂ ಅಲ್ಲ, ಅದನ್ನು ನಾವೇ ಸ್ವತಃ ಗಳಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಸಂಪಾದನೆಗಳಲ್ಲೇ ಉತ್ತಮ ಸಂಪಾದನೆ ಎಂದರೆ ಅದುವೇ ಜ್ಞಾನ ಸಂಪಾದನೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದೀಪಾ ಸಂಸ್ಥೆಯ ಉಪಾಧ್ಯಕ್ಷ ಸದಾಶಿವ ಪೂಜಾರಿ, ಕಾರ್ಯದರ್ಶಿ ವಿ.ಎನ್.ಸುಂದರ್, ನಿರ್ದೇಶಕ ಬಾಲಕೃಷ್ಣ, ಡಾ.ನಿವೇದಿತಾ ಸುವರ್ಣ, ದೀಪಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರಣೀತ ಎರ್ಮಾಳ್, ದೀಪಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶಿಲ್ಪಾ ಜಗದೀಶ್, ದೀಪಾ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಬಾಬು, ದೀಪಾ ಶಾಲೆಯ ಸಹ ಮುಖ್ಯೋಪಾಧ್ಯಾಯಿನಿ ತುಳಸಿ, ಶಿಕ್ಷಣ ಸಂಯೋಜಕರಾದ ರವಿಶಂಕರ್, ವಾರುಣಿ ಇನ್ನಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಬಿಸಿಯೂಟ ಸೇವಿಸಿ 70ಕ್ಕೂ ಅಧಿಕ ವಿದ್ಯಾರ್ಥಿಗಳು ಅಸ್ವಸ್ಥ



ಪಾಟ್ನಾ: ಬಿಹಾರದ ಮಾಧೇಪುರ ಜಿಲ್ಲೆಯ ಸಾಹುಗರ್ ಗ್ರಾಮದ ಅಪ್‌ಗ್ರೇಡ್ ಮಿಡಲ್ ಶಾಲೆಯಲ್ಲಿ ಶನಿವಾರ(ಫೆ.7) ಮಧ್ಯಾಹ್ನದ ಬಿಸಿಯೂಟ ಸೇವಿಸಿದ ಬಳಿಕ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ. ಅಸ್ವಸ್ಥರಾದ ಮಕ್ಕಳನ್ನು ಹತ್ತಿರದ ಸದರ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಓರ್ವ ಬಾಲಕಿ ಸ್ಥಿತಿ ಗಂಭೀರವಾಗಿದೆ. ಶನಿವಾರ ಮಧ್ಯಾಹ್ನ ಬಿಸಿಯೂಟ ಮಾಡಿದ ಸ್ವಲ್ಪ ಸಮಯದ ನಂತರ ಹಲವಾರು ವಿದ್ಯಾರ್ಥಿಗಳು ವಾಂತಿ ಮಾಡಲು ಪ್ರಾರಂಭಿಸಿದ್ದಾರೆ. ಕೆಲವರು ಹೊಟ್ಟೆ ನೋವು, ಅಸ್ವಸ್ಥತೆಯ ಬಗ್ಗೆ ಶಾಲೆಯ ಶಿಕ್ಷಕರಿಗೆ ತಿಳಿಸಿದ ಕೆಲವೇ ನಿಮಿಷಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಅದೇ ರೀತಿ ಅಸ್ವಸ್ಥರಾಗಿದ್ದಾರೆ ಎನ್ನಲಾಗಿದೆ. ಎಲ್ಲಾ ವಿದ್ಯಾರ್ಥಿಗಳು ಅಸ್ವಸ್ಥಗೊಳ್ಳುತ್ತಿದ್ದಂತೆ ತಕ್ಷಣ ಶಾಲಾ ಆಡಳಿತ ಮಂಡಳಿಯು ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳಿಗೆ ಮಾಹಿತಿ ನೀಡಿದೆ. ಶಾಲಾ ಶಿಕ್ಷಕರು ಆಂಬ್ಯುಲೆನ್ಸ್ ಮತ್ತು ಇತರ ಖಾಸಗಿ ವಾಹನಗಳನ್ನು ಕರೆಸಿ, ಅಸ್ವಸ್ಥ ವಿದ್ಯಾರ್ಥಿಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಬಿಸಿಯೂಟದಲ್ಲಿ ಹಲ್ಲಿ ಬಿದ್ದಿರಬಹುದು ಎಂದು ಸ್ಥಳೀಯರು ಶಂಕಿಸಿದ್ದು, ಘಟನೆ ಸಂಬಂಧ ಜಿಲ್ಲಾ ಶಿಕ್ಷಣಾಧಿಕಾರಿ ಸಂಜಯ್‌ಕುಮಾರ್ ಪರಿಶೀಲನೆ ನಡೆಸಿದ್ದಾರೆ.

ಚಾಕುವಿನಿಂದ ವಿದ್ಯಾರ್ಥಿಗಳಿಗೆ ಇರಿದ ಯುವಕ; ನಾಲ್ವರು ಭಾರತೀಯರಿಗೆ ಗಾಯ



ಮಾಸ್ಕೋ: ರಷ್ಯಾದ ಬಾಷ್ಕೋರ್ಟೋಸ್ತಾನ್ ರಿಪಬ್ಲಿಕ್ ವಿಶ್ವವಿದ್ಯಾಲಯವೊಂದರಲ್ಲಿ ಯುವಕನೊಬ್ಬ ಸಿಕ್ಕ ಸಿಕ್ಕವರ ಮೇಲೆ ಚಾಕುವಿನಿಂದ ದಾಳಿ ಮಾಡಿದ್ದು, ಘಟನೆಯಲ್ಲಿ ನಾಲ್ವರು ಭಾರತೀಯ ವಿದ್ಯಾರ್ಥಿಗಳು ಸೇರಿದಂತೆ ಆರು ಮಂದಿ ಗಾಯಗೊಂಡಿದ್ದಾರೆ ಎಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಪ್ರಾಥಮಿಕ ವರದಿಗಳ ಪ್ರಕಾರ, ವಿವಿಯ ಮೆಡಿಕಲ್ ಕಾಲೇಜು ವಸತಿ ನಿಲಯಕ್ಕೆ ಚಾಕುವಿನೊಂದಿಗೆ ಪ್ರವೇಶಿಸಿದ ಯುವಕ, ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಿ ಅವರಲ್ಲಿ ಹಲವರನ್ನು ಇರಿದಿದ್ದಾನೆ. ದಾಳಿಕೋರ ಬಂಧನವನ್ನು ವಿರೋಧಿಸಿ ಚಾಕುವಿನಿಂದ ಇರಿದಿದ್ದು, ಈ ಸಮಯದಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳೂ ಗಾಯಗೊಂಡಿದ್ದಾರೆ. ಬಳಿಕ ತಾನೂ ಚಾಕುವಿನಿಂದ ಕುಯ್ದುಕೊಂಡು ಗಾಯ ಮಾಡಿಕೊಂಡಿದ್ದಾನೆ ಎಂದು ಆಂತರಿಕ ಸಚಿವಾಲಯದ ವಕ್ತಾರೆ ಮೇಜರ್ ಜನರಲ್ ಐರಿನಾ ವೋಲ್ಕ್ ಹೇಳಿದ್ದಾರೆ. ಇದನ್ನು ದುರದೃಷ್ಟಕರ ಘಟನೆ ಎಂದು ಕರೆದಿರುವ ಭಾರತೀಯ ರಾಯಭಾರ ಕಚೇರಿ, ಕಜಾನ್‌ನಲ್ಲಿರುವ ದೂತಾವಾಸದ ಅಧಿಕಾರಿಗಳ ಮೂಲಕ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ದಾಳಿಕೋರ ನಿಷೇಧಿತ ನವ–ನಾಜಿ ಸಂಘಟನೆಗೆ ಸೇರಿದವನು ಎಂದು ಬಾಜಾ ಚಾನೆಲ್ ಹೇಳಿಕೊಂಡಿದೆ.

500 ಕೋಟಿ ರೂ. ವಂಚನೆ ಕೇಸ್; 32ನೇ ಅವೆನ್ಯೂ ಸಿಇಓ ಬಂಧನ



ಚಂಡೀಗಢ: 500 ಕೋಟಿ ರೂ. ವಂಚನೆ ಪ್ರಕರಣದಲ್ಲಿ 32ನೇ ಅವೆನ್ಯೂ ವಾಣಿಜ್ಯ ರಿಯಲ್ ಎಸ್ಟೇಟ್ ಯೋಜನೆಯ ಸ್ಥಾಪಕ ಮತ್ತು ರಿಯಲ್ ಎಸ್ಟೇಟ್ ಉದ್ಯಮಿ ಧ್ರುವ್ ದತ್ ಶರ್ಮಾನನ್ನು ಬಂಧಿಸಲಾಗಿದೆ. ಈತ ಒಂದು ಫ್ಲೋರ್ ಅನ್ನು 25ಕ್ಕೂ ಹೆಚ್ಚು ಜನರಿಗೆ ಮಾರಾಟ ಮಾಡಿದ ಆರೋಪದ ಮೇಲೆ ಬಂಧಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಈತ ಸುಮಾರು 500 ಕೋಟಿ ರೂ. ವಂಚನೆ ಮಾಡಿದ್ದಾನೆ ಎನ್ನಲಾಗಿದೆ. ಆರೋಪಿಯನ್ನು ಬಂಧಿಸಿ, ನಂತರ ನಗರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಶರ್ಮಾ ವಿವಿಧ ಜನರಿಗೆ ಸುಮಾರು 500 ಕೋಟಿ ರೂಪಾಯಿ ವಂಚಿಸಿದ್ದಾರೆ. 2021 ರಲ್ಲಿ, ಸಂಸ್ಥೆಯ ನಿರ್ದೇಶಕರು ಮತ್ತು ಷೇರುದಾರರು ಟ್ರಾಮ್ ವೆಂಚರ್ಸ್ ಅನ್ನು ಸಂಪರ್ಕಿಸಿ ಅವರ 32ನೇ ಅವೆನ್ಯೂ ಸಂಕೀರ್ಣದ ಮೊದಲ ಮಹಡಿಯಲ್ಲಿ 3000 ಚದರ ಅಡಿ ವಿಸ್ತೀರ್ಣದ (ಸಂಖ್ಯೆ 24) ಯೂನಿಟ್ ಅನ್ನು ಮಾರಾಟಕ್ಕೆ ನೀಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಒಪ್ಪಂದವನ್ನು 2.5 ಕೋಟಿ ರೂ.ಗಳಿಗೆ ಮಾಡಲಾಗಿತ್ತು. ಆ ವರ್ಷ ಸೆಪ್ಟೆಂಬರ್ 21 ರಂದು ಮೊತ್ತವನ್ನು ಪಾವತಿಸಲಾಗಿತ್ತು. ಆದರೆ ಅವರಿಗೆ ಅಗತ್ಯ ದಾಖಲೆಗಳು ಸಿಗಲಿಲ್ಲ. ನಂತರ ಟ್ರಾಮ್ ವೆಂಚರ್ಸ್ ದೂರು ದಾಖಲಿಸಿತ್ತು

ಐಎನ್‌ಎ ನಿವೃತ್ತ ಯೋಧರ ಭೇಟಿ ಮಾಡಿದ ಮೋದಿ



ಕ್ವಾಲಾಲಂಪುರ: ಮಲೇಷ್ಯಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಇಲ್ಲಿರುವ ಭಾರತೀಯ ರಾಷ್ಟ್ರೀಯ ಸೇನೆಯ (ಆಜಾದ್ ಹಿಂದ್ ಫೌಜ್ –ಐಎನ್‌ಎ) ನಿವೃತ್ತ ಯೋಧ ಜಯರಾಜ್ ರಾಜಾರಾವ್ ಅವರನ್ನು ಭೇಟಿ ಮಾಡಿ, ಅಸಾಧಾರಣ ಧೈರ್ಯ, ಪರಂಪರೆ ಮತ್ತು ತ್ಯಾಗಕ್ಕಾಗಿ ಎಲ್ಲಾ ಭಾರತೀಯರ ಪರವಾಗಿ ಐಎನ್‌ಎಗೆ ಕೃತಜ್ಞತೆ ತಿಳಿಸಿದ್ದಾರೆ. ಭಾರತದ ಭವಿಷ್ಯ ರೂಪಿಸಲು ಸಹಾಯ ಮಾಡಿದ ಐಎನ್‌ಎಯ ಧೈರ್ಯಶಾಲಿ ಮಹಿಳೆಯರು, ಪುರುಷರು ಹಾಗೂ ನೇತಾಜಿ ಸುಭಾಷ್ ಚಂದ್ರಬೋಸ್ ಅವರಿಗೆ ನಾವು ಎಂದೆಂದಿಗೂ ಋಣಿಯಾಗಿರುತ್ತೇವೆ ಎಂದು ಪ್ರಧಾನಿ ಮೋದಿಯವರು ಸಭೆಯ ನಂತರ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಐಎನ್‌ಎ ಅನುಭವಿರಾವ್ ಅವರನ್ನು ಭೇಟಿಯಾಗಿರುವುದು ತುಂಬಾ ವಿಶೇಷ. ಅವರ ಜೀವನವು ಅಪಾರ ಧೈರ್ಯ ಮತ್ತು ತ್ಯಾಗದಿಂದ ಗುರುತಿಸಲ್ಪಟ್ಟಿದೆ. ಅವರ ಅನುಭವಗಳನ್ನು ಕೇಳುವುದು ತುಂಬಾ ಸ್ಫೂರ್ತಿದಾಯಕವಾಗಿತ್ತು ಎಂದು ತಿಳಿಸಿದ್ದಾರೆ. ಐಎನ್‌ಎಯ ಧೈರ್ಯ, ಪರಂಪರೆ ಮತ್ತು ತ್ಯಾಗಕ್ಕಾಗಿ ಮೋದಿ ಎಲ್ಲಾ ಭಾರತೀಯರ ಪರವಾಗಿ ಕೃತಜ್ಞತೆ ತಿಳಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಚಿನ್ನದ ಸರ ಕಚ್ಚಿ ಹಾರಿದ ಪಾರಿವಾಳ!



ನಾಗೌರ್: ಚಿನ್ನದ ಮಾರುಕಟ್ಟೆಯಲ್ಲಿರುವ ಆಭರಣ ಅಂಗಡಿಯಿಂದ ಪಾರಿವಾಳವೊಂದು 1 ಲಕ್ಷ ರೂ. ಮೌಲ್ಯದ ಚಿನ್ನದ ಸರವನ್ನು ಕಚ್ಚಿಕೊಂಡು ಹಾರುವ ಮೂಲಕ ಕೆಲಕಾಲ ಅಂಗಡಿ ಮಾಲೀಕನಿಗೆ ಆತಂಕ ಹುಟ್ಟಿಸಿದ್ದ ವಿಚಿತ್ರ ಘಟನೆ ರಾಜಸ್ಥಾನದಲ್ಲಿ ನಡೆದಿದೆ.

ಇಲ್ಲಿನ ದೇಗಾನಾ ಬುಲಿಯನ್ ಮಾರ್ಕೆಟ್‌ನಲ್ಲಿರುವ ಚಿನ್ನಾಭರಣ ಮಳಿಗೆಯೊಂದರ ಮೇಲಿನ ಮಹಡಿಯಲ್ಲಿ ಕುಶಲಕರ್ಮಿಗಳು ಚಿನ್ನದ ಆಭರಣಗಳನ್ನು ತಯಾರಿಸುವ ವೇಳೆ ಅನಿರೀಕ್ಷಿತವಾಗಿ ಅಂಗಡಿಯೊಳಗೆ ನುಗ್ಗಿದ ಪಾರಿವಾಳ, ಹೊಸದಾಗಿ ವಿನ್ಯಾಸಗೊಳಿಸಲಾದ ಚಿನ್ನದ ಸರವನ್ನು ತನ್ನ ಕೊಕ್ಕಿನಿಂದ ಕಚ್ಚಿಕೊಂಡು ಕ್ಷಣಾರ್ಧದಲ್ಲಿ ಹಾರಿಹೋಗಿದೆ. ಅಂಗಡಿಯವರು ಪಾರಿವಾಳವನ್ನು ಹಿಂಬಾಲಿಸಿದ್ದು, ಅದು ಮಾರುಕಟ್ಟೆ ಛಾವಣಿಯ ಮೇಲೆ ಸ್ವಲ್ಪ ಸಮಯದವರೆಗೆ ಕುಳಿತಿದೆ. ಪಾರಿವಾಳ ಕುತ್ತಿಗೆ ಅಲ್ಲಾಡಿಸಿದಾಗ ಚಿನ್ನದ ಸರ ಅದರ ಕುತ್ತಿಗೆಗೆ ಸುತ್ತಿಕೊಂಡಿದೆ. ಅಲ್ಲಿ ಜಮಾಯಿಸಿದ್ದ ಜನ ಮತ್ತು ವ್ಯಾಪಾರಿಗಳು ಸರವು ಎಲ್ಲಿಯಾದರೂ ಬಿದ್ದು ಹೋಗಬಹುದೇ ಅಥವಾ ಪಾರಿವಾಳ ದೂರ ಹಾರಿ ಹೋಗಬಹುದೇ ಎಂಬ ಆತಂಕದಿಂದ ಆ ಹಕ್ಕಿಯ ಚಲನವಲನವನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅದೃಷ್ಟವಶಾತ್, ಕೆಲ ನಿಮಿಷಗಳ ನಂತರ ಪಾರಿವಾಳದ ಕೊಕ್ಕಿನಿಂದ ಚಿನ್ನದ ಸರವು ಜಾರಿ ಛಾವಣಿಯ ಮೇಲೆ ಬಿದ್ದಿದೆ. ಕೂಡಲೇ ಅಂಗಡಿ ಸಿಬ್ಬಂದಿ ಆ ಆಭರಣವನ್ನು ತೆಗೆದುಕೊಂಡಿದ್ದಾರೆ.

ರಾಜಕೀಯ ರಹಿತ ಸೌಲಭ್ಯ ಕಲ್ಪಿಸಿ

ಡಿಜಿಟಲ್ ಗ್ರಂಥಾಲಯ ಸೇರಿದಂತೆ ವಿವಿಧ ಕಟ್ಟಡ ಉದ್ಘಾಟಿಸಿ ಶಾಸಕ ಪೊನ್ನಣ್ಣ ಸಲಹೆ

ಮಡಿಕೇರಿ, ಫೆ.8–ಗ್ರಾ.ಪಂ ಪ್ರತಿನಿಧಿಗಳು ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಿ, ರಾಜಕೀಯ ರಹಿತವಾಗಿ ಸಾರ್ವಜನಿಕರಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ಕುಂದಚೇರಿ ಗ್ರಾ.ಪಂ ಚೆಟ್ಟಿಮಾನಿಯಿಂದ ನೂತನವಾಗಿ ನಿರ್ಮಾಣಗೊಂಡಿರುವ ಡಿಜಿಟಲ್ ಗ್ರಂಥಾಲಯ, ಅರಿವು ಕೇಂದ್ರ, ಅಂಚೆ ಕಚೇರಿ ಮತ್ತು ಸಂಜೀವಿನಿ ಒಕ್ಕೂಟದ ಕಟ್ಟಡಗಳನ್ನು ಉದ್ಘಾಟಿಸಿ, ಗ್ರಾಪಂ ಪ್ರತಿನಿಧಿಗಳು ಅತ್ಯಂತ ಜವಾಬ್ದಾರಿಯುತವಾಗಿ ನಡೆದು ಕೊಳ್ಳಬೇಕು ಎಂದರು.

ಕ್ಷೇತ್ರದಲ್ಲಿ ನೂತನ ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದ್ದು, ಎಲ್ಲಾ ಗ್ರಾ.ಪಂ ವ್ಯಾಪ್ತಿಯಲ್ಲೂ ಅನುದಾನ ಒದಗಿಸಲಾಗುತ್ತಿದೆ. ಇದನ್ನು ಪಂಚಾಯಿತಿ ಪ್ರತಿನಿಧಿಗಳು ಸದುಪಯೋಗಪಡಿಸಿ ಜನರಿಗೆ ಅನುಕೂಲ ಕಲ್ಪಿಸಬೇಕು. ತಾವು ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಗುರಿ ಹೊಂದಿದ್ದು, ಸರ್ವರೂ ಕೈಜೋಡಿಸಬೇಕೆಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕುಂದಚೇರಿ ಗ್ರಾ.ಪಂ.ಯ ಹಿರಿಯ ಸದಸ್ಯ ಹ್ಯಾರಿಸ್, 1982ರಲ್ಲಿ ಪಂಚಾಯಿತಿಯ ಹಳೆಯ ಕಟ್ಟಡ ನಿರ್ಮಾಣಗೊಂಡಿತು. ಅಂದಿನಿಂದ ಇಂದಿನವರೆಗೆ ನೂತನ ಕಟ್ಟಡದ ನಿರ್ಮಾಣಕ್ಕೆ ಸಹಕರಿಸಿದ ಸರ್ವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು. ಕುಂದಚೇರಿ ಗ್ರಾ.ಪಂ ಅಧ್ಯಕ್ಷ ಪಿ.ಬಿ.ದಿನೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪಂಚಾಯಿತಿ ಸದಸ್ಯರಾದ ವಿಶ್ವ ಪ್ರವೀಣ್ ಕುಮಾರ್, ಬಸಪ್ಪ, ಸವಿತ, ನಮಿತ, ಸಂಜೀವಿನಿ ಒಕ್ಕೂಟದ ಕಾರ್ಯದರ್ಶಿ ಪುಷ್ಪಾ, ನೇತ್ರಾವತಿ, ರೂಪ, ಲಕ್ಷ್ಮಿ, ಹೇಮಲತ, ಅನುಜ, ನಯನ ಮತ್ತಿತರರು ಉಪಸ್ಥಿತರಿದ್ದರು.


ಕುಂದಚೇರಿಯಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಪೊನ್ನಣ್ಣ ಉದ್ಘಾಟಿಸಿದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ

ಮಡಿಕೇರಿ, ಫೆ.8–ಮೂರು ವರ್ಷಗಳಿಂದ ರಸ್ತೆ ದುರಸ್ತಿ ಕಾಮಗಾರಿ ನಡೆಸದೆ ಇಲಾಖೆ ನಿರ್ಲಕ್ಷ್ಯ ಧೋರಣೆ ತಾಳಿದೆ ಎಂದು ಆರೋಪಿಸಿ, ಮೂರು ಗಂಟೆಗಳ ಕಾಲ ರಸ್ತೆ ತಡೆ ನಡೆಸುವ ಮೂಲಕ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಕಿರುಗೂರು ನಲ್ಲೂರು, ಬೆಸಗೂರು ಹಾಗೂ ಮುಗುಟಗೇರಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ದಿನನಿತ್ಯ ನೂರಾರು ವಾಹನಗಳು ಓಡಾಡುತ್ತಿದ್ದು, ಹದಗೆಟ್ಟ ರಸ್ತೆಯಿಂದ ಸಂಚಾರಕ್ಕೆ ತೊಡಕುಂಟಾಗಿದೆ. ಶಾಲಾ ವಾಹನ, ಬಾಡಿಗೆ ವಾಹನಗಳು, ಕೃಷಿ ಚಟುವಟಿಕೆಗಳಿಗೆ ಕಾರ್ಮಿಕರನ್ನು ಕರೆದೊಯ್ಯುವ ವಾಹನಗಳು ಈ ರಸ್ತೆಯಲ್ಲಿ ದುಪ್ಪಟ್ಟು ಹೆಚ್ಚಿನ ಬಾಡಿಗೆ ವಸೂಲಿ ಮಾಡುತ್ತಿದ್ದು, ಮಳೆಗಾಲದಲ್ಲಿ ಈ ರಸ್ತೆಯು ಕೆರೆಯಂತಾಗುತ್ತದೆ. ರಸ್ತೆ ದುರಸ್ತಿಪಡಿಸುವಂತೆ ಸಂಬಂಧಿಸಿದವರಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಕೂಡ ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿದರು.

ಗ್ರಾಮಸ್ಥರಾದ ಅಲೆಮಾಡ ವಿಜಯ್, ಗಾಂಡಂಗಡ ನವೀನ್, ಕೊಪಟೀರ ಸಂಪು ಉತ್ತಯ್ಯ ಮಾತನಾಡಿ, 3 ವರ್ಷದಿಂದ ಯಾವುದೇ ರಾಜಕಾರಣಿಗಳಾಗಲಿ ಅಧಿಕಾರಿಗಳಾಗಲಿ ಭೇಟಿ ನೀಡಿ ಪರಿಶೀಲನೆ ನಡೆಸಿಲ್ಲ. ಈ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಿದರೆ, ಅನುದಾನ ಬಂದಿದ್ದು, ಆದಷ್ಟು ಶೀಘ್ರ ಕಾಮಗಾರಿ ಕೈಗೊಳ್ಳುವುದಾಗಿ ಭರವಸೆ ನೀಡುತ್ತಲೇ ಬಂದಿದ್ದಾರೆ. ಆದರೆ ಇಲ್ಲಿವರೆಗೆ ಯಾವುದೇ ರೀತಿಯ ಕಾಮಗಾರಿ ಪ್ರಗತಿ ಯಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಚೆಪ್ಪುಡಿರ ಮನೋಜ್ ಗ್ರಾಮಸ್ಥರಾದ ಚೊಟ್ಟೆ ಕಾಳಪಂಡ ಪೂಣಚ್ಚ ಚೆಪ್ಪುಡಿರ ರಾಕೇಶ್ ದೇವಯ್ಯ, ಕೊಕ್ಕೆಂಗಡ ಗಣೇಶ್, ಕೊದೇಗಂಡ, ತೀತರ ಮಾಡ, ಪೆಮ್ಮಂಡ, ಬೋಡಂಗಡ, ಕೊಕ್ಕೆಂ ಗಡ, ಚೋಟ್ಟೆಕಾಳಪಂಡ, ಕಾಕ್ಕಮಾಡ, ಚೆರಿಯಪಂಡ, ಕರ್ತಮಾಡ ಪೊನ್ನಿಮಾಡ ಚೆಪ್ಪುಡಿರ, ಕೋಪಟೀರ, ಅಲೆಮಾಡ ಹಾಗೂ ಗಾಣಂ ಗಡ ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು.



ರಸ್ತೆ ದುರಸ್ತಿ ಕಾಮಗಾರಿ ನಡೆಸದೆ ಇಲಾಖೆ ನಿರ್ಲಕ್ಷ್ಯ ಧೋರಣೆ ತಾಳಿದೆ ಎಂದು ಆರೋಪಿಸಿ, ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಆನೆಕಾಡು ಬಳಿ ಕ್ರೇಟಾ ಕಾರಿಗೆ ಬೆಂಕಿ; ಎಸ್‌ಡಿಪಿಐ ರಾಜ್ಯಾಧ್ಯಕ್ಷ ಪಾರು

ಕುಶಾಲನಗರ, ಫೆ.8–ಚಲಿಸುತ್ತಿದ್ದ ಪ್ರವಾಸಿ ಕಾರಿಗೆ ಬೆಂಕಿ ಹೊತ್ತಿಕೊಂಡು ಹೊತ್ತಿ ಉರಿದಿರುವ ಘಟನೆ ಶನಿವಾರ ಆನೆಕಾಡು ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಐದು ಪ್ರವಾಸಿಗರು ಹುಂಡೈ ಕ್ರೇಟಾ ಕಾರಿನಲ್ಲಿ ಮಡಿಕೇರಿಯಿಂದ ಕುಶಾಲನಗರ ಕಡೆ ರಾತ್ರಿ 9.45ರ ಸಮಯದಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭ ಮಾರ್ಗ ಮಧ್ಯದ ಆನೆಕಾಡು ಬಳಿ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಕಾರನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಅದರೊಳಗೆ ಇದ್ದವರು ಹೊರಗಿಳಿದು ಜೀವ ಉಳಿಸಿಕೊಂಡಿದ್ದಾರೆ. ಅಗ್ನಿಯ ಕೆನ್ನಾಲಿಗೆಗೆ ಕಾರು ದಹಿಸಿದೆ.

ಎಸ್ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಅವರು ಉಡುಪಿಯಿಂದ ಮೈಸೂರಿಗೆ ತೆರಳುವಾಗ ಈ ಘಟನೆ ಸಂಭವಿಸಿದೆ. ಅಪಾಯ ಅರಿತ ಕಾರಿನ ಚಾಲಕನ ಸೂಚನೆಯಂತೆ ಮಜೀದ್ ಕಾರಿನಿಂದ ಕೆಳಗಿಳಿದಿದ್ದಾರೆ. ಕಾರು ಸಂಪೂರ್ಣ ಬೆಂಕಿಗೆ ಆಹುತಿಯಾಗಿದೆ. ಕುಶಾಲನಗರ ಅಗ್ನಿಶಾಮಕ ದಳ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ.


ಬೆಂಕಿಯನ್ನು ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ

ಪಾರದರ್ಶಕ ಆಡಳಿತದಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ

ಕುಶಾಲನಗರ, ಫೆ.8–ನಿಸ್ವಾರ್ಥ ಸೇವೆ ಹಾಗೂ ಪಾರದರ್ಶಕ ಆಡಳಿತ ವ್ಯವಸ್ಥೆಯಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ ಸಾಧ್ಯ ಎಂದು ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಜಯಕರ ಶೆಟ್ಟಿ ಬಿ.ಇಂದ್ರಾಳಿ ಹೇಳಿದರು.

ಬೆಂಗಳೂರಿನ ರಾಜ್ಯ ಸಹಕಾರ ಮಹಾಮಂಡಳ ಮತ್ತು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಂಯುಕ್ತಾಶ್ರಯದಲ್ಲಿ ಮೈಸೂರು ವಿಭಾಗದ ನೌಕರರ ಪತ್ತಿನ ಸಹಕಾರ ಸಂಘಗಳ ಪದಾಧಿಕಾರಿಗಳ ಮತ್ತು ಅಧಿಕಾರಿಗಳಿಗೆ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರಕಾರದ ಯೋಜನೆಗಳೊಂದಿಗೆ ಸಹಕಾರಿಗಳು ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವತ್ತ ಚಿಂತನೆ ಹರಿಸಬೇಕಿದೆ. ಸಹಕಾರ ಕ್ಷೇತ್ರಕ್ಕೆ ಪೂರಕವಾದ ಯೋಜನೆಯನ್ನು ಸರಕಾರ ಅನುಷ್ಠಾನಗೊಳಿಸುತ್ತಿರುವುದು, ಅನೇಕ ಪೂರಕವಾದ ಕಾಯ್ದೆಗಳನ್ನು ತಿದ್ದುಪಡಿಗೊಳಿಸುತ್ತಿರುವುದು ಸ್ವಾಗತಾರ್ಹ ವಿಚಾರ ಸಹಕಾರಿ ಕ್ಷೇತ್ರವನ್ನು ಆರ್ಥಿಕ ವ್ಯವಸ್ಥೆಗೆ ಮಾತ್ರ ಸೀಮಿತಗೊಳಿಸದೆ ಇರುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಕಾರಣೀಭೂತರಾಗಬೇಕಿದೆ ಎಂದರು.

ವಿಶೇಷ ಆಹ್ವಾನಿತರಾದ ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಬಿ.ಸಿ. ಲೋಕಪ್ಪಗೌಡ ಮಾತನಾಡಿ, ಪ್ರಸಕ್ತ ದಿನಗಳಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಅರಿವು, ತಿಳುವಳಿಕೆ ಅತ್ಯವಶ್ಯಕ. ಅದರಲ್ಲೂ ಸಹಕಾರಿಗಳಿಗೆ ಕ್ಷೇತ್ರವನ್ನು ಮುನ್ನಡೆಸಲು ಕಾಯ್ದೆ, ಕಾನೂನು, ತಿದ್ದುಪಡಿಗಳ ಬಗ್ಗೆ ಅಪಾರ ಅರಿವು ಅಗತ್ಯವಿದೆ ಈ ನಿಟ್ಟಿನಲ್ಲಿ ಕೈಗೊಂಡಿರುವ ತರಬೇತಿ ಕಾರ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ಅಧ್ಯಕ್ಷತೆ ವಹಿಸಿದ್ದರು. ಸಹಕಾರ ಸಂಘಗಳ ಕಾಯ್ದೆ–ಇತ್ತೀಚಿನ ತಿದ್ದುಪಡಿ, ಪದಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ–ಕರ್ತವ್ಯಗಳು, ಆದಾಯ ತೆರಿಗೆ ಹಾಗೂ ಜಿಎಸ್ಟಿ ಕುರಿತು, ಮಹಾಮಂಡಳದ ಕಾರ್ಯಚಟುವಟಿಕೆಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಡಾ.ಗುರುಸ್ವಾಮಿ, ಸಿ.ಎ.ರುದ್ರೇಶ್ ಪಟೇಲ್, ಎಂ.ಎಂ. ಶ್ಯಾಮಲ ಉಪನ್ಯಾಸ ನೀಡಿದರು.

ಚಿಕ್ಕಮಗಳೂರು ಸಹಕಾರ ಯೂನಿಯನ್ ಅಧ್ಯಕ್ಷ ಜಿ.ಕೆ.ದಿವಾಕರ್, ಉಪಾಧ್ಯಕ್ಷ ಹೆಚ್.ಕೆ.ಮಾದಪ್ಪ, ನಿರ್ದೇಶಕ ಕೆ.ಟಿ.ಪರಮೇಶ್, ಬಲ್ಲಾರಂಡ ಮಣಿ ಉತ್ತಪ್ಪ ಎಂ.ಎಂ. ಶ್ಯಾಮಲಾ, ಎಸ್.ಆರ್. ಸುನಿಲ್ ರಾವ್, ಸಹಕಾರ ಸಂಘಗಳ ಉಪನಿಬಂಧಕ ಹೆಚ್.ಡಿ. ರವಿಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯೋಗೇಂದ್ರ ನಾಯಕ್, ಸಮನ್ವಯಾಧಿಕಾರಿ ಪುಟ್ಟಸ್ವಾಮಿ ಪಾಲ್ಗೊಂಡಿದ್ದರು.


ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮವನ್ನು ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಜಯಕರ ಶೆಟ್ಟಿ ಬಿ.ಇಂದ್ರಾಳಿ ಉದ್ಘಾಟಿಸಿದರು.

ಕಿರುಂದಾಡು ಅಂಗನವಾಡಿ ಕಟ್ಟಡ ಉದ್ಘಾಟನೆ

ನಾಪೋಕ್ಲು, ಫೆ.8(ದುಗ್ಗಳ)–ಇಲ್ಲಿಗೆ ಸಮೀಪದ ಕೊಣಂಜಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿರುಂದಾಡು ವಿನ ಗ್ರಾಮದಲ್ಲಿ ಅಂಗನವಾಡಿ ಕೇಂದ್ರದ ಕಟ್ಟಡವನ್ನು ಶಾಸಕ ಎ.ಎಸ್. ಪೊನ್ನಣ್ಣ ರವರು ಉದ್ಘಾಟಿಸಿ ಮಾತನಾಡಿ, ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಶಾಸಕರು ಇದೇ ಗ್ರಾ.ಪಂ.ನ ನೂತನ ಕಟ್ಟಡವನ್ನೂ ಉದ್ಘಾಟಿಸಿದರು.

ಗ್ರಾಪಂ ಅಧ್ಯಕ್ಷ ಪಾಡೆಯಂಡ ಕಟ್ಟಿ ಕುಶಾಲಪ್ಪ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಪಂಚಾಯಿತಿ ಸದಸ್ಯರು, ಪಕ್ಷಗಳ ಮುಖಂಡರು, ಬ್ಲಾಕ್ ಅಧ್ಯಕ್ಷ ಕೆಎ ಇಸ್ಮಾಯಿಲ್, ಗ್ಯಾರಂಟಿ ಅನುಷ್ಠಾನ ಉಪಾಧ್ಯಕ್ಷ ಶೇರಿ ಗಿರೀಶ್, ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.


ಕಿರುಂದಾಡು ಅಂಗನವಾಡಿ ಕಟ್ಟಡವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು.

ನಿವೃತ್ತ ನೀರು ಗಂಟಿ ಸಿಬ್ಬಂದಿಗೆ ಬೀಳ್ಕೊಡುಗೆ

ಕುಶಾಲನಗರ: ಸಮೀಪದ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿಯಲ್ಲಿ 30 ವರ್ಷ ನೀರು ಗಂಟಿಯಾಗಿ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಬಸವನಹಳ್ಳಿ ಗ್ರಾಮದ ಬೋಜಪ್ಪ ಹಾಗೂ ಗುಡ್ಡೆಹೊಸೂರು ಗ್ರಾಮದ ನಂಜಪ್ಪ ಅವರನ್ನು ಪಂಚಾಯಿತಿ ಆಡಳಿತ ಮಂಡಳಿ ಸನ್ಮಾನಿಸಿ ಬೀಳ್ಕೊಟ್ಟಿತು. ಇದೇ ಸಂದರ್ಭ ಮಾದಾಪಟ್ಟಣ ಗ್ರಾಮದಲ್ಲಿ ಆಶಾ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ರುಕ್ಮಿಣಿ ಅವರನ್ನು ಸಹ ಗೌರವಿಸಲಾಯಿತು. ಗ್ರಾಪಂ ಅಧ್ಯಕ್ಷೆ ಸೌಮ್ಯ ಮಾತನಾಡಿ, ಭೋಜಪ್ಪ ಮತ್ತು ನಂಜಪ್ಪ ಇಬ್ಬರೂ ಸಹ ಮಂಡಲ ಪಂಚಾಯಿತಿ ಕಾಲದಿಂದಲೂ ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದು, ಜನರಿಗೆ ಉತ್ತಮ ಸೇವೆಯನ್ನು ನೀಡಿದ್ದಾರೆ ಎಂದು ಶ್ಲಾಘಿಸಿದರು. ಪಂಚಾಯಿತಿ ಉಪಾಧ್ಯಕ್ಷ ಪ್ರವೀಣ್ ಕುಮಾರ್, ಅಭಿವೃದ್ಧಿ ಅಧಿಕಾರಿ ಸುಮೇಶ್ ಆಡಳಿತ ಮಂಡಳಿ ಸದಸ್ಯರು ಹಾಗೂ ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

ಪೊನ್ನಂಪೇಟೆಯಲ್ಲಿ ಭವ್ಯ ಹಿಂದೂ ಸಂಗಮ ಶೋಭಾ ಯಾತ್ರೆ


ಪೊನ್ನಂಪೇಟೆ ಪಟ್ಟಣದಲ್ಲಿ ಮಹಿಳಾ ಸಮಾಜದಿಂದ ಆಯೋಜಿಸಲಾಗಿದ್ದ ಹಿಂದೂ ಸಂಗಮ ಶೋಭಯಾತ್ರೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡದೊಂದಿಗೆ ಭವ್ಯ ಮೆರವಣಿಗೆಯಲ್ಲಿ ಕೇಸರಿ ಶಾಲು ಧರಿಸಿದ ಮಹಿಳೆಯರು, ಬಾಲಕಿಯರು ದೀಪ ಮತ್ತು ಕಳಸವನ್ನು ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ನಂತರ ಹಿಂದೂ ಸಂಗಮದ ಸಭಾ ಕಾರ್ಯಕ್ರಮ ಜರುಗಿತು.

ಚಾ.ನಗರ: ಪತ್ರಕರ್ತರ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಪ್ರತಿಯೊಬ್ಬರೂ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ: ಶಾಸಕ ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ, ಫೆ.8– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಸಂಘದ ಸದಸ್ಯರಿಗಾಗಿ ಆಯೋಜಿಸಿದ್ದ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ಹಸಿರುಮನೆ ಸಮೀಪದ ಮೈದಾನದಲ್ಲಿ ಭಾನುವಾರ ಬ್ಯಾಟ್ ಬೀಸುವ ಮೂಲಕ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸದಾ ಒತ್ತಡದ ನಡುವೆ ಕಾರ್ಯನಿರ್ವಹಿಸುವ ಪತ್ರಕರ್ತರ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಗೆ ಕ್ರೀಡೆ ಸಹಕಾರಿಯಾಗಿದೆ ಎಂದರು.

ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಹಿತ ದೃಷ್ಟಿಯಿಂದ ಜೀವನದಲ್ಲಿ ಒಂದಲ್ಲ ಒಂದು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಇರುವಷ್ಟು ದಿನ ನೆಮ್ಮದಿಯಾಗಿ ಇರಬಹುದು ಎಂದರು.

ಯಾವುದೇ ಜಾತಿ, ಮತ, ಭೇದಭಾವ ಇಲ್ಲದ ರಂಗ ಕ್ರೀಡಾ ರಂಗವಾಗಿದೆ. ಮುಖ್ಯವಾಗಿ ಕ್ರೀಡೆಯಲ್ಲಿ ನಾವೆಲ್ಲರೂ ಒಂದೇ ಎನ್ನುವ ಭಾವನೆ ಬರುತ್ತದೆ. ಹೀಗಾಗಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಪ್ರತಿಯೊಬ್ಬರೂ ಚೆನ್ನಾಗಿ ಆಡಿ ಎಲ್ಲರಿಗೂ ಶುಭವಾಗಲಿ ಎಂದು ಆಶಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಮಾತನಾಡಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ತನ್ನ ಸದಸ್ಯರಿಗೆ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಒಳ್ಳೆಯ ಬೆಳವಣಿಗೆ. ಕ್ರೀಡೆಯಲ್ಲಿ ಸೌಹಾರ್ದತೆ ಇರುತ್ತದೆ. ಕ್ರೀಡೆ ಮಾನಸಿಕ, ದೈಹಿಕ ಬೆಳವಣಿಗೆಗೆ ಪೂರಕವಲ್ಲದೆ ಮನಸ್ಸಿಗೆ ಸಂತಸ ಕೊಡುತ್ತದೆ. ಇಂತಹ ಕ್ರೀಡೆಗಳನ್ನು ಹೆಚ್ಚು ಏರ್ಪಡಿಸಿ, ನಾವೂ ಕೂಡ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸುತ್ತೇವೆ. ಸೋಲು–ಗೆಲುವನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಬೇಕು ಎಂದು ಎಲ್ಲಾ ತಂಡಗಳಿಗೆ ಶುಭ ಕೋರಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಮಾತನಾಡಿ, ಕಳೆದ 2 ತಿಂಗಳ ಹಿಂದೆ ನಮ್ಮ ಸಂಘಕ್ಕೆ ಪ್ರಥಮ ಬಾರಿಗೆ ಚುನಾವಣೆ ನಡೆಯಿತು. ಇದುವರೆಗೂ ಅವಿರೋಧ ಆಯ್ಕೆ ನಡೆಯುತ್ತಿತ್ತು. ಇದರಿಂದ ಉಂಟಾಗಿರುವ ಸಣ್ಣ ಪುಟ್ಟ ವೈಮನಸ್ಸು ತೊಡೆದು ಹಾಕಿ ಎಲ್ಲಾ ಪತ್ರಕರ್ತರನ್ನು ಒಗ್ಗೂಡಿಸುವ ಸಲುವಾಗಿ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಖಜಾಂಚಿ ಪುಟ್ಟರಾಜು, ತೀರ್ಪುಗಾರ ವಿ.ಶ್ರೀನಿವಾಸ ಪ್ರಸಾದ್ ಹಾಜರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಲ್.ಲಕ್ಕೂರ್ ಸ್ವಾಗತಿಸಿದರು. ಹಿರಿಯ ಪತ್ರಕರ್ತರಾದ ಕೆ.ಎಸ್.ಬನಶಂಕರ್ ಆರಾಧ್ಯ ನಿರೂಪಿಸಿದರು. ಶ್ರೇಯಸಿ ನಂಜುಂಡನಾಯಕ ಪ್ರಾರ್ಥಿಸಿದರು. ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಮಹೇಂದ್ರ ವಂದಿಸಿದರು. ಸಂಘದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.


ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಚಾಮರಾಜನಗರ ತಂಡಕ್ಕೆ ಟ್ರೋಫಿ

ಚಾಮರಾಜನಗರ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆದ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸಿದ್ದಲಿಂಗಸ್ವಾಮಿ ನೇತೃತ್ವದ ಚಾಮರಾಜನಗರ ತಂಡ ಜಯಭೇರಿ ಬಾರಿಸಿ ಟ್ರೋಫಿ ಎತ್ತಿ ಹಿಡಿಯಿತು.

ಹನೂರು ತಂಡದ ವಿರುದ್ಧ ನಡೆದ ಫೈನಲ್ ಹಣಾಹಣಿಯಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚಾಮರಾಜನಗರ ತಂಡ ಮಧುಸೂದನ್ ಹಾಗೂ ವಿಜಯ ಕುಮಾರ್ ಅವರ ಅತ್ಯುತ್ತಮ ಬ್ಯಾಟಿಂಗ್ ನೆರವಿನಿಂದ 6 ಓವರ್‌ಗಳಲ್ಲಿ 78 ರನ್ ಗಳಿಸಿತು. ನಂತರ ಗೆಲುವಿನ ಗುರಿ ಬೆನ್ನತ್ತಿದ ಹನೂರು ತಂಡ 6 ಓವರ್‌ಗಳಲ್ಲಿ 44 ರನ್ ಗಳಿಸಲಷ್ಟೇ ಶಕ್ತವಾಗಿ 34 ರನ್‌ಗಳಿಂದ ಸೋಲು ಅನುಭವಿಸಿತು.

ಹಿರಿಯ ಪತ್ರಕರ್ತ ಅಬ್ರಾಹಂ ಡಿ.ಸಿಲ್ವ ಹಾಗೂ ಹಿರಿಯ ಕ್ರಿಕೆಟ್ ಆಟಗಾರ ಶ್ರೀನಿವಾಸ ಪ್ರಸಾದ್ ಉಭಯ ತಂಡಗಳಿಗೆ ಟ್ರೋಫಿಗಳನ್ನು ವಿತರಿಸಿದರು. ಸರಣಿ ಶ್ರೇಷ್ಠ ಪ್ರಶಸ್ತಿಗೆ ಮಧುಸೂದನ್, ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ವಿಜಯಕುಮಾರ್ ಭಾಜನರಾದರು. ಪಂದ್ಯಾವಳಿಯಲ್ಲಿ ಗುಂಡ್ಲುಪೇಟೆ ಹಾಗೂ ಯಳಂದೂರು ಪತ್ರಕರ್ತರ ಸಂಘದ ತಂಡಗಳು ಪಾಲ್ಗೊಂಡಿದ್ದವು.


ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಜಯಗಳಿಸಿದ ಚಾ.ನಗರ ಕ್ರಿಕೆಟ್ ತಂಡ.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಮೂವರಿಗೆ ಗಾಯ

ಬೇಗೂರು, ಫೆ.8– ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಮೂವರು ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಕುರುಬರಹುಂಡಿ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ.

ಹೆಚ್.ಡಿ. ಕೋಟೆ ತಾಲೂಕಿನ ದೊಡ್ಡಬರಗಿ ಗ್ರಾಮದ ಗೋವಿಂದರಾಜು, ನಂಜನಗೂಡು ತಾಲೂಕಿನ ಬಂಕಹಳ್ಳಿಯ ಲೋಕೇಶ್ ಹಾಗೂ ಸೋಮೇಶ್ ಗಾಯಗೊಂಡವರು. ಈ ಮೂವರು ಬೇಗೂರು ಕಡೆಯಿಂದ ಹೆಡಿಯಾಲ ಕಡೆಗೆ ತಮ್ಮ ಸ್ಪ್ಲೆಂಡರ್ ಪ್ಲಸ್ ಬೈಕ್(ಕೆಎ–09, ಜೆಎ–9876)ನಲ್ಲಿ ತೆರಳುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ರಭಸಕ್ಕೆ ಕಂಬ ಮುರಿದು ಹೋಗಿ, ಸವಾರ ಗೋವಿಂದರಾಜು ತೀವ್ರ ಗಾಯಗೊಂಡರೆ, ಸೋಮೇಶ್ ಹಾಗೂ ಲೋಕೇಶ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಗಾಯಾಳುಗಳನ್ನು ಬೇಗೂರು ಆಸ್ಪತ್ರೆಗೆ ರವಾನಿಸಿದ್ದಾರೆ.

ಬಂಡೀಪುರದಲ್ಲಿ ಸುರಂಗ ನಿರ್ಮಾಣ ವಿರೋಧಿಸಿ ಪ್ರತಿಭಟನೆ


ಬಂಡೀಪುರದಲ್ಲಿ ಸುರಂಗ ನಿರ್ಮಾಣ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಫೆ.8– ಕೇರಳ ಹಾಗೂ ಕರ್ನಾಟಕ ಸಂಪರ್ಕಿಸುವ ಬಂಡೀಪುರದಲ್ಲಿ ಪರ್ಯಾಯ ಸುರಂಗ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಕೇರಳ ಸರ್ಕಾರದಿಂದ ಮನವಿ ಸಲ್ಲಿಸಿರುವುದನ್ನು ವಿರೋಧಿಸಿ ನಗರದಲ್ಲಿ ಸಂಜೀವಿನಿ ಟ್ರಸ್ಟ್ ಹಸಿರು ಪಡೆಯಿಂದ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪರಿಸರವಾದಿಗಳು ಹಾಗೂ ವಿವಿಧ ಸಂಘಟನೆಗಳ ಮುಖಂಡರು, ಗಿಡ–ಮರ, ವನ್ಯಜೀವಿಗಳ ವೇಷ ತೊಟ್ಟ ಪುಟ್ಟ ಮಕ್ಕಳು ಕೆಲಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು.

ಕರ್ನಾಟಕ ಮತ್ತು ಕೇರಳ ಸಂಪರ್ಕಿಸುವ ಬಂಡೀಪುರದ ಅರಣ್ಯ ಪ್ರದೇಶದಲ್ಲಿ ರಾತ್ರಿ ಸಂಚಾರ ನಿರ್ಬಂಧಿಸಿರುವುದರಿಂದ 24 ಗಂಟೆಗಳ ಸಂಚಾರಕ್ಕೆ ಪರ್ಯಾಯ ಸುರಂಗ ನಿರ್ಮಾಣ ಸಾಧ್ಯತೆ ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಅಧ್ಯಯನ ಸಮಿತಿ ರಚಿಸುವುದಕ್ಕೆ ಸಮ್ಮತಿ ನೀಡಿದ್ದಾರೆ ಎಂದು ದೂರಿದರು.

ಈ ಮಾರ್ಗವು ಹುಲಿ ಸಂರಕ್ಷಿತ ಪ್ರದೇಶವೆಂದು ಸರ್ಕಾರವೇ ಘೋಷಿಸಿದೆ. ಆದರೂ ಸರ್ಕಾರವೇ ಇಂತಹ ಪರ್ಯಾಯ ಮಾರ್ಗವನ್ನು ರಚಿಸಲು ಮುಂದಾಗಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಗಳ ನಿಲುವಿನಿಂದ ಜಿಲ್ಲೆಯಲ್ಲಿ ಮಾನವ ಪ್ರಾಣಿ ಸಂಘರ್ಷ ಹೆಚ್ಚಾಗುತ್ತಿದ್ದು, ಪ್ರಾಣಿಗಳು ನಾಡಿನ ಕಡೆಗೆ ವಲಸೆ ಬರುತ್ತವೆ. ಇದರಿಂದ ಸಾರ್ವಜನಿಕರಿಗೂ ಪ್ರಾಣಿಗಳಿಗೂ ಆಗುವ ಅನಾನುಕೂಲವೇ ಹೆಚ್ಚು. ಅರಣ್ಯನಾಶ, ಶಬ್ದ ಮಾಲಿನ್ಯ, ಅಂತರ್ಜಲ ಕುಸಿತ, ಭೂ ಕುಸಿತ, ಪ್ರಾಣಿ–ಪಕ್ಷಿಗಳ ಸಂಕುಲ ನಾಶ ಇನ್ನು ಅನೇಕ ತೊಂದರೆಗಳ ಸಂಭವ ಸಾಧ್ಯತೆ ಇದೆ ಎಂದರು. ಈ ವೇಳೆ ಸಂಘಟನೆಯ ಪದಾಧಿಕಾರಿಗಳು, ಪರಿಸರವಾದಿಗಳು ಹಾಗೂ ಇತರರಿದ್ದರು.

ಚಿರತೆ ದಾಳಿ: ಇಬ್ಬರಿಗೆ ಗಾಯ

ಹನೂರು, ಫೆ.8– ಚಲಿಸುತ್ತಿದ್ದ ಬೈಕ್ ಮೇಲೆ ಚಿರತೆ ದಾಳಿ ಮಾಡಿದ ಪರಿಣಾಮ ಇಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಆಂಡಿಪಾಳ್ಯ ಬಳಿಯ ತಿರುವಿನಲ್ಲಿ ಭಾನುವಾರ ರಾತ್ರಿ ನಡೆದಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದ ನಿವಾಸಿ ಮೊಹಮ್ಮದ್ ಹನೀಫ್ ಹಾಗೂ ಕೊಳ್ಳೇಗಾಲದ ನಿವಾಸಿ ಅಬಜರ್ ಗಾಯಗೊಂಡವರು. ಇವರಿಬ್ಬರು ಭಾನುವಾರ ರಾತ್ರಿ ಒಡೆಯರಪಾಳ್ಯದಿಂದ ಕೊಳ್ಳೇಗಾಲಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಆಂಡಿಪಾಳ್ಯ ತಿರುವಿನ ಬಳಿ ಏಕಾಏಕಿ ದಾಳಿ ನಡೆಸಿದ ಚಿರತೆ ಇಬ್ಬರನ್ನು ಗಾಯಗೊಳಿಸಿದೆ. ಈ ವೇಳೆ ಹಿಂಬದಿ ಬರುತ್ತಿದ್ದ ಕಾರಿನ ಚಾಲಕ ತನ್ನ ಸಮಯಪ್ರಜ್ಞೆಯಿಂದ ಹಾರನ್ ಅನ್ನು ಒತ್ತಿ ಹಿಡಿದಿದ್ದರಿಂದ ಗಾಬರಿಗೊಂಡ ಚಿರತೆ ಸ್ಥಳದಿಂದ ಪರಾರಿಯಾಗಿದೆ. ಅದೃಷ್ಟವಶಾತ್ ಚಿರತೆ ದಾಳಿಯಿಂದ ಪರಾದವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಮ.ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ತ್ಯಜಿಸಲು ಮನವಿ

ಚಾಮರಾಜನಗರ: ಚಾಮರಾಜನಗರ ಜಿಲ್ಲಾಡಳಿತದಿಂದ ಮಲೆ ಮಹದೇಶ್ವರಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿ ಘೋಷಿಸಲಾಗಿದೆ. ದೇವಾಲಯಕ್ಕೆ ಆಗಮಿಸುವ ಭಕ್ತರು, ಪ್ರವಾಸಿಗರು ಹಾಗೂ ಸ್ಥಳೀಯರು ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸುವಂತೆ ಮನವಿ ಮಾಡಿಕೊಳ್ಳಲಾಗಿದೆ.

ಮಹದೇಶ್ವರ ಬೆಟ್ಟವು ಅರಣ್ಯ ಪ್ರದೇಶದಲ್ಲಿರುವ ಪವಿತ್ರ ಕ್ಷೇತ್ರವಾಗಿರುವುದರಿಂದ, ಪ್ಲಾಸ್ಟಿಕ್‌ನ ಅನಿಯಂತ್ರಿತ ಬಳಕೆ ಪರಿಸರಕ್ಕೆ ಗಂಭೀರ ಹಾನಿಯನ್ನುಂಟು ಮಾಡಲಿದೆ. ಅರಣ್ಯ, ಪ್ರಾಣಿ–ಪಕ್ಷಿಗಳ ಸುರಕ್ಷತೆ, ಪ್ರಕೃತಿ ಸಂರಕ್ಷಣೆ ಮತ್ತು ಕ್ಷೇತ್ರದ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ಪ್ಲಾಸ್ಟಿಕ್ ನಿಷೇಧ ಅತ್ಯಂತ ಅಗತ್ಯವಾಗಿದೆ.

ಭಕ್ತರು ಮತ್ತು ಸಾರ್ವಜನಿಕರು ನೀರು, ಪ್ರಸಾದ ಮತ್ತು ಇತರೆ ವಸ್ತುಗಳನ್ನು ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ತರಬಾರದು. ಇದರ ಬದಲಾಗಿ ಸೆಣಬಿನ ಚೀಲ (ಜ್ಯೂಟ್ ಬ್ಯಾಗ್), ಕಾಗದದ ಚೀಲ, ಸ್ಟೀಲ್, ತಾಮ್ರದಂತಹ ಪಾತ್ರೆಗಳು ಮುಂತಾದ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಬೇಕು. ಪ್ಲಾಸ್ಟಿಕ್ ವಸ್ತುಗಳನ್ನು ಕ್ಷೇತ್ರದೊಳಗೆ ತರುತ್ತಿರುವುದು ಕಂಡುಬಂದಲ್ಲಿ ಜಪ್ತಿ ಮಾಡಲಾಗುತ್ತದೆ. ಕ್ಷೇತ್ರದಲ್ಲಿ ಸ್ವಚ್ಛತೆಗೆ ಸಹಕರಿಸಿ, ಕಸಗಳನ್ನು ಕಸದ ತೊಟ್ಟಿಗಳಲ್ಲಿ ಮಾತ್ರ ಹಾಕಬೇಕು.

ಜಿಲ್ಲಾಡಳಿತ, ಅರಣ್ಯ ಇಲಾಖೆ ಹಾಗೂ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಜಂಟಿಯಾಗಿ ಪ್ಲಾಸ್ಟಿಕ್ ನಿಷೇಧವನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಲಿವೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಭಕ್ತಾದಿಗಳು, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಸಹಕರಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಮನವಿ ಮಾಡಿದ್ದಾರೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ


ಗುಂಡ್ಲುಪೇಟೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿದರು.

ಗುಂಡ್ಲುಪೇಟೆ, ಫೆ.8(ಸೋಮ್.ಜಿ)– ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ, ಅನುಗ್ರಹ ಫೌಂಡೇಶನ್ ನೇತೃತ್ವದಲ್ಲಿ ವೀರಶೈವ ಮಹಾಸಭಾ ನಿರ್ದೇಶಕ ಹಂಗಳ ಹೆಚ್.ಎಂ. ನಂದೀಶ್ ಪ್ರಯೋಕತ್ವದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಅರವಿಂದ ಕಣ್ಣಿನ ಆಸ್ಪತ್ರೆ ಸಾರ್ವಜನಿಕ ಸಂಪರ್ಕ ಅಧಿಕಾರಿ ವಿಜಯಕಾಂತ್ ಮಾತನಾಡಿ, ದಾನಿಗಳ ಕೊಡುಗೆಯಿಂದ ಲಕ್ಷಾಂತರ ಬಡ ಜನರಿಗೆ ದೃಷ್ಟಿ ಬರುವಂತಾಗಿದೆ. ಸಾವಿರಾರು ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಉಚಿತ ಚಿಕಿತ್ಸೆ ಸಿಗುತ್ತಿದೆ ಎಂದರು.

ಕಣ್ಣು ಪ್ರತಿಯೊಬ್ಬರಿಗೂ ಅಮೂಲ್ಯವಾದ ಅಂಗ. ಹೀಗಾಗಿ ಕಣ್ಣಿನ ಆರೋಗ್ಯ ಬಹಳ ಮುಖ್ಯ. ತುಳಿತಕ್ಕೆ ಒಳಗಾದವರ ಹಾಗೂ ಬಡಜನರ ಆರೋಗ್ಯಪೂರ್ಣ ಜೀವನಕ್ಕಾಗಿ ಸಮಾಜ ಸೇವಾ ಕಾರ್ಯದಲ್ಲಿ ಪ್ರತಿಯೊಬ್ಬರೂ ತೊಡಗಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದರು.

ಪ್ರತಿ ಕುಟುಂಬದಲ್ಲೂ ಹಿರಿಯರು ಕಣ್ಣಿನ ತೊಂದರೆಯಿಂದ ಬಳಲುತ್ತಿದ್ದಾರೆ. ಅಂತಹವರು ತಿಂಗಳ ಪ್ರತಿ ಮೊದಲ ಶನಿವಾರ ಗುಂಡ್ಲುಪೇಟೆಯಲ್ಲಿ ನಡೆಯುತ್ತಿರುವ ಉಚಿತ ಕಣ್ಣಿನ ತಪಾಸಣಾ ಶಿಬಿರ ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿಕೊಂಡರು.

ಕಾರ್ಯಕ್ರಮವನ್ನು ಎಸ್‌ಐ ನರೇಶ್, ವೀರಶೈವ ಮಹಾಸಭಾದ ನಿರ್ದೇಶಕ ಹಂಗಳ ನಂದೀಶ್, ಮುಖಂಡರಾದ ಪ್ರಸಾದ್, ಉದ್ಯಮಿ ಪ್ರದೀಪ್, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ, ಜಿಲ್ಲಾ ಸಂಚಾಲಕ ರಾ.ಬಾಬು, ಪತ್ರಕರ್ತರಾದ ವೀರಭದ್ರಪ್ಪ, ಭೈರೇಶ್ ಗಾಣಿಗ್, ವೇಣುನಾಯಕ್, ಚಂದ್ರು ಇತರರಿದ್ದರು.

ಪೈಲಟ್ ಗೊಂದಲದಿಂದ ನಿಗದಿತ ಹೆಲಿಪ್ಯಾಡ್ ಬಿಟ್ಟು ಬೇರೆಡೆ ಇಳಿದ ಸಿಎಂ ಸಿದ್ದರಾಮಯ್ಯರ ಹೆಲಿಕಾಪ್ಟರ್

ಸಿಎಂ ಬದಲು ಸಚಿವರನ್ನು ಕಂಡು ಕಕ್ಕಾಬಿಕ್ಕಿಯಾದ ಅಧಿಕಾರಿಗಳು



ರಾಯಚೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರಿದ್ದ ಹೆಲಿಕಾಪ್ಟರ್ ಲ್ಯಾಂಡಿಂಗ್ ವೇಳೆ ಗೊಂದಲ ಸೃಷ್ಟಿಯಾದ ಘಟನೆ ಲಿಂಗಸೂಗೂರಿನಲ್ಲಿ ನಡೆದಿದೆ.

ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪುರ ಪುತ್ರನ ಮದುವೆಗೆ ತೆರಳಿದ್ದ ವೇಳೆ ಈ ಘಟನೆ ಸಂಭವಿಸಿದೆ.

ಲಿಂಗಸೂಗೂರು ಪಟ್ಟಣದ ಹೊರ ವಲಯದ ರಾಯಚೂರು ರಸ್ತೆಯ ಖಾಸಗಿ ಲೇಔಟ್‌ನಲ್ಲಿ ಸಿಎಂ ಸಿದ್ದರಾಮಯ್ಯನವರ ಹೆಲಿಕಾಪ್ಟರ್ ಲ್ಯಾಂಡಿಂಗ್ ನಿಗದಿಯಾಗಿತ್ತು. ಇದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ ಸಚಿವ ಸತೀಶ್ ಜಾರಕಿಹೊಳಿಯವರ ಹೆಲಿಕಾಪ್ಟರ್ ಲ್ಯಾಂಡಿಂಗ್ ಮಾಡಲು ನಿಗದಿಪಡಿಸಿದ್ದ ಕಲಬುರಗಿ ರಸ್ತೆಯಲ್ಲಿರುವ ಶಾಸಕ ಮಾನಪ್ಪ ವಜ್ಜಲ್ ಅವರ ಖಾಸಗಿ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಮಾಡಲಾಗಿದೆ.

ಇದರಿಂದಾಗಿ ಸಿಎಂ ಹೆಲಿಕಾಪ್ಟರ್‌ಗೆ ನಿಗದಿಯಾಗಿದ್ದ ಹೆಲಿಪ್ಯಾಡ್‌ನಲ್ಲಿ ಸಚಿವ ಜಾರಕಿಹೊಳಿ ಅವರಿದ್ದ ಹೆಲಿಕಾಪ್ಟರ್ ಲ್ಯಾಂಡ್ ಆಗಿದೆ. ಈ ವೇಳೆ ಸಿಎಂ ಸಿದ್ದರಾಮಯ್ಯನವರನ್ನು ಬರಮಾಡಿಕೊಳ್ಳಲು ಕಾದಿದ್ದ ಪೊಲೀಸರು ಹಾಗೂ ಮುಖಂಡರು ಶಾಕ್ ಆಗಿದ್ದಾರೆ. ಶಾಸಕ ಮಾನಪ್ಪ ವಜ್ಜಲ್ ಅವರ ಖಾಸಗಿ ಹೆಲಿಪ್ಯಾಡ್‌ನಲ್ಲಿ ಸಿಎಂ ಹೆಲಿಕಾಪ್ಟರ್ ಲ್ಯಾಂಡಿಂಗ್ ಆಗಿರುವ ವಿಷಯ ತಿಳಿಯುತ್ತಿದ್ದಂತೆ, ಅಲ್ಲಿಗೆ ದೌಡಾಯಿಸಿದ್ದಾರೆ. ಇದಾದ ನಂತರ ನಿಗದಿತ ಸ್ಥಳಕ್ಕೆ ಸಿಎಂ ಹೆಲಿಕಾಪ್ಟರ್ ಆಗಮಿಸಿ, ಪೊಲೀಸ್ ಗೌರವ ವಂದನೆ ಸ್ವೀಕರಿಸಿದ್ದಾರೆ.

ಈ ಗೊಂದಲದ ಬಗ್ಗೆ ಪೊಲೀಸರು ಪ್ರತಿಕ್ರಿಯಿಸಿದ್ದು, ಲಿಂಗಸೂಗೂರು ಪಟ್ಟಣದಲ್ಲಿ ಇಂದು ಹೆಲಿಕಾಪ್ಟರ್ ಲ್ಯಾಂಡಿಂಗ್‌ಗೆ ಮೂರು ಹೆಲಿಪ್ಯಾಡ್ ವ್ಯವಸ್ಥೆ ಮಾಡಲಾಗಿತ್ತು. ಆದರೆ ಪೈಲಟ್ ಗೊಂದಲದಿಂದ ಸಚಿವ ಸತೀಶ್ ಜಾರಕಿಹೊಳಿ ಇಳಿಯಬೇಕಾದ ಹೆಲಿಪ್ಯಾಡ್‌ನಲ್ಲಿ ಸಿಎಂ ಸಿದ್ದರಾಮಯ್ಯನವರ ಹೆಲಿಕಾಪ್ಟರ್ ಲ್ಯಾಂಡ್ ಆಗಿದೆ. ಸಿಎಂ ಲ್ಯಾಂಡ್ ಆಗಬೇಕಿದ್ದ ಹೆಲಿಪ್ಯಾಡ್‌ನಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರು ಇಳಿದಿದ್ದಾರೆ. ಬಳಿಕ ನಿಗದಿತ ಸ್ಥಳಕ್ಕೆ ಮುಖ್ಯಮಂತ್ರಿ ಅವರ ಹೆಲಿಕಾಪ್ಟರ್ ಬಂದಿಳಿದು, ಪೊಲೀಸ್ ಗೌರವ ವಂದನೆ ಸ್ವೀಕರಿಸಿ ಹೆಲಿಕಾಪ್ಟರ್ ಟೇಕ್ ಆಫ್ ಆಗಿದೆ ಎಂದು ತಿಳಿಸಿದ್ದಾರೆ.

ಬ್ಯಾಂಕಿಂಗ್ ಕ್ಷೇತ್ರಕ್ಕೆ ಶೀಘ್ರ ಉನ್ನತಾಧಿಕಾರ ಸಮಿತಿ

ನವದೆಹಲಿ: ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಉನ್ನತಾಧಿಕಾರ ಸಮಿತಿಯನ್ನು ಕೇಂದ್ರ ಸರ್ಕಾರವು ಶೀಘ್ರವೇ ರಚಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.



ಈ ಸಮಿತಿಯು ಅಭಿವೃದ್ಧಿ ಹೊಂದಿದ ಭಾರತದ ಹಣಕಾಸಿನ ಅಗತ್ಯಗಳನ್ನು ಪೂರೈಸಬಲ್ಲ ಬೃಹತ್ ಬ್ಯಾಂಕ್‌ಗಳ ಸೃಷ್ಟಿಗೆ ಅಗತ್ಯವಿರುವ ನೀಲನಕ್ಷೆಯನ್ನು ಸಿದ್ಧಪಡಿಸಬೇಕಿದೆ. 'ವಿಕಸಿತ ಭಾರತಕ್ಕೆ ಅಗತ್ಯವಿರುವ ಹಣಕಾಸಿನ ನೆರವು ನೀಡುವಂತಹ ಬ್ಯಾಂಕಿಂಗ್ ವ್ಯವಸ್ಥೆ ಹೊಂದುವ ನಿಟ್ಟಿನಲ್ಲಿ ಏನೆಲ್ಲಾ ಮಾಡಬೇಕು ಎಂಬುದನ್ನು ಸಮಿತಿಯು ನಮಗೆ ತಿಳಿಸಬೇಕಿದೆ. ನಾವು ವಿಕಸಿತ ಭಾರತದ ಗುರಿಯನ್ನು ತಲುಪಬೇಕಿದೆ. ಅದಕ್ಕೆ ಹಣ ಬೇಕು, ಹಣಕಾಸಿನ ನೆರವು ಬೇಕು, ಸಾಲ ಬೇಕು, ಜನಸಾಮಾನ್ಯರಿಗೆ ಬ್ಯಾಂಕಿಂಗ್ ಸೌಲಭ್ಯ ತಲುಪಬೇಕು. ಸಮಿತಿಯ ರಚನೆ ಪ್ರಸ್ತಾವ ಈ ಬಾರಿಯ ಬಜೆಟ್‌ನಲ್ಲಿ ಇದೆ ಎಂದು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಜನ ಸ್ಥಿರತೆ ಬಯಸುತ್ತಾರೆ: ಸರ್ಕಾರದ ನೀತಿಗಳಲ್ಲಿ ಮತ್ತೆ ಮತ್ತೆ ಬದಲಾವಣೆ ತರುತ್ತಿರಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಒತ್ತಿ ಹೇಳಿದ್ದರಿಂದ ಈ ಬಾರಿಯ ಬಜೆಟ್ ಅನ್ನು ಹಾಗೆಯೇ ರೂಪಿಸಲಾಗಿದೆ. ಜನರು ಸ್ಥಿರತೆಯನ್ನು ಬಯಸುತ್ತಾರೆ. ಹೀಗಾಗಿಯೇ ಅವರು ಮೋದಿ ಅವರನ್ನು ಸತತ ಮೂರನೆಯ ಬಾರಿಗೆ ಚುನಾಯಿಸಿದ್ದಾರೆ ಎಂದು ಅಭಿಪ್ರಾಯಿಸಿದ್ದಾರೆ.

ಮೂರನೇ ಪುಟದಿಂದ

ಮೈಸೂರಿಗಾಗಿ–ಒಂದಾಗೋಣ ಸ್ವಚ್ಛತೆಗಾಗಿ'





ಓಟದಲ್ಲಿ ಗೋಪಿ ಸರೋಜ್ ಪ್ರಥಮ, ಮಹೇಶ್ ದ್ವಿತೀಯ ಹಾಗೂ ಗಣಪತಿ ತೃತೀಯ ಸ್ಥಾನ ಪಡೆದರೆ, 41 ವರ್ಷ ಮೇಲ್ಪಟ್ಟವರಲ್ಲಿ ದಶರಥ ಪ್ರಥಮ, ಗೋಪಿಕೃಷ್ಣ ದ್ವಿತೀಯ ಹಾಗೂ ಮಹದೇವ ಸ್ವಾಮಿ ತೃತೀಯ ಸ್ಥಾನ ಪಡೆದರು. ಹಾಗೆಯೇ ವಿಶೇಷಚೇತರ ವಿಭಾಗದಲ್ಲಿ ಕೆ.ಬಸವರಾಜು ಪ್ರಥಮ, ಯುವರಾಜ್ ದ್ವಿತೀಯ ಹಾಗೂ ಅಜಿತ್ ತೃತೀಯ ಸ್ಥಾನ ಪಡೆದುಕೊಂಡರು.

ಮಹಿಳೆಯರ ವಿಭಾಗದ(18–40 ವರ್ಷ ವಯೋಮಾನ) 5 ಕಿಲೋ ಮೀಟರ್ ಓಟದಲ್ಲಿ ಆರ್.ಉಷಾ ಪ್ರಥಮ, ಚೈತ್ರ ದ್ವಿತೀಯ ಹಾಗೂ ಎಲ್.ವಿದ್ಯಾ ತೃತೀಯ ಸ್ಥಾನ ಪಡೆದರೆ, 41 ವರ್ಷ ಮೇಲ್ಪಟ್ಟವರಲ್ಲಿ ಶಾಂತಕುಮಾರಿ ಪ್ರಥಮ, ಎಂ.ಎಸ್. ಸರೋಜ ದ್ವಿತೀಯ ಹಾಗೂ ಎಂ. ಮಾಲಿನಿ ತೃತೀಯ ಸ್ಥಾನ ಪಡೆದರು. ಹಾಗೆಯೇ 10 ಕಿಲೋ ಮೀಟರ್(18–40 ವರ್ಷ ವಯೋಮಾನ) ಓಟದಲ್ಲಿ ವಿಜಯಲಕ್ಷ್ಮಿ ಪ್ರಥಮ, ಹರ್ಷಿತ ದ್ವಿತೀಯ ಹಾಗೂ ಜಯಶ್ರೀ ತೃತೀಯ ಸ್ಥಾನ ಪಡೆದರೆ, 41 ವರ್ಷ ಮೇಲ್ಪಟ್ಟವರಲ್ಲಿ ಉಮಾ ಪ್ರಥಮ, ಮಾನಸ ದ್ವಿತೀಯ ಹಾಗೂ ರೂಪ ತೃತೀಯ ಸ್ಥಾನ ಪಡೆದರು.

ಸೈಕಲ್ ವಿತರಣೆ: ಶಾಲಾ ವಿದ್ಯಾರ್ಥಿಗಳಲ್ಲಿ ಸ್ವಚ್ಛತಾ ಅರಿವು ಮೂಡಿಸುವ ನಿಟ್ಟಿನಲ್ಲಿ 18 ವರ್ಷದೊಳಗಿನ ವಿಶೇಷ ವಿಭಾಗದಲ್ಲಿ ವಿಜೇತರಾದ ಚಿರಂಜೀವಿ(ಪ್ರಥಮ), ವರುಣ್(ದ್ವಿತೀಯ) ಹಾಗೂ ಶ್ರೇಯಸ್‌ಗೆ ನಗದು ಬಹುಮಾನದ ಬದಲು ಸೈಕಲ್ ವಿತರಣೆ ಮಾಡಲಾಯಿತು.

ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಜೆಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಡಿಐಜಿ ವಿಷ್ಣುವರ್ಧನ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಸಿಇಓ ಯುಕೇಶ್‌ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಡಿಸಿಪಿ ಸುಂದರ್‌ರಾಜ್, ಕೆಪಿಎ ಉಪ ನಿರ್ದೇಶಕ ಚನ್ನಬಸವಣ್ಣ, ನಗರಪಾಲಿಕೆ ಉಪ ಆಯುಕ್ತ(ಕಂದಾಯ) ಜಿ.ಎಸ್. ಸೋಮಶೇಖರ್, ಸ್ವಚ್ಛ ಸರ್ವೇಕ್ಷಣೆ–2025–26ರ ನೋಡಲ್ ಅಧಿಕಾರಿ ಮೃತ್ಯುಂಜಯ, ವಿದ್ಯುತ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ದೀಪಕ್, ಪರಿಸರ ಇಂಜಿನಿಯರ್ ಮೈತ್ರಿ ಮತ್ತಿತರರು ಉಪಸ್ಥಿತರಿದ್ದರು.

ಕ್ರೇನ್ ಡಿಕ್ಕಿ ಸ್ಥಳದಲ್ಲಿಯೇ ಗೃಹಿಣಿ ಸಾವು

ಕ್ರೇನ್ ಚಾಲಕ ಅಪಘಾತ ನಡೆಸಿ ವಾಹನದೊಂದಿಗೆ ಪರಾರಿಯಾಗಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಕೃಷ್ಣಕಾಂತ ಕೋಳಿ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ನಂಜನಗೂಡು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಆಸ್ಪತ್ರೆಯಲ್ಲಿ ಕುಟುಂಬದವರು ಆಕ್ರಂದನ ಮುಗಿಲು ಮುಟ್ಟಿತ್ತು. ಪಿಎಸ್‌ಐ ಕೃಷ್ಣಕಾಂತ ಕೋಳಿ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ ಕ್ರೇನ್ ವಾಹನದ ಚಾಲಕ ಅಪಘಾತ ನಡೆಸಿ ವಾಹನ ಸಮೇತ ನಾಪತ್ತೆಯಾಗಿದ್ದಾನೆ. ಈ ಸಂಬಂಧ ತನಿಖೆ ಮುಂದುವರೆದಿದ್ದು ಶೀಘ್ರದಲ್ಲೇ ವಾಹನವನ್ನು ಪತ್ತೆ ಹಚ್ಚಿ ಚಾಲಕನನ್ನು ವಶಕ್ಕೆ ಪಡೆಯಲಾಗುವುದು ಎಂದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಗಾವಡಗೆರೆ ಬಳಿ ಪ್ರತ್ಯೇಕ ಅಪಘಾತ: ಪಾದಚಾರಿ ಸೇರಿ ಮೂವರ ಸಾವು

ಹುಣಸೂರು, ಫೆ.9– ತಾಲೂಕಿನ ಗಾವಡಗೆರೆ ಬಳಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಪಾದಚಾರಿ ಸೇರಿ ಮೂವರು ಸಾವನ್ನಪ್ಪಿದ್ದಾರೆ.

ಬೈಕ್‌ನಲ್ಲಿ ತೆರಳುತ್ತಿದ್ದ ಗಾವಡಗೆರೆ ಹೋಬಳಿ ತೊಂಡಾಳಿನ ವೆಂಕಟೇಶ್ ಅವರ ಪುತ್ರ ಸುರೇಶ್(29) ಹಾಗೂ ಮಂಜಯ್ಯನ ಪುತ್ರ ಕೃಷ್ಣ(42), ಮತ್ತೊಂದು ಅಪಘಾತದಲ್ಲಿ ಪಾದಚಾರಿ ಹರವೆ ರಾಮೇನಹಳ್ಳಿಯ ಹೆಳವನಾಯಕರ ಪುತ್ರ ನಿಂಗರಾಜು(41) ಮೃತಪಟ್ಟಿದ್ದಾರೆ. ಗಾವಡಗೆರೆಯಿಂದ ತೊಂಡಾಳಿಗೆ ಸುರೇಶ್ ಮತ್ತು ಕೃಷ್ಣ ಬೈಕ್‌ನಲ್ಲಿ ತೆರಳುವ ವೇಳೆ ಎದುರಿನಿಂದ ಬಂದ ಬೊಲೆರೊ ವಾಹನ ಡಿಕ್ಕಿ ಹೊಡೆದಿದ್ದು, ಇಬ್ಬರೂ ತೀವ್ರ ಪೆಟ್ಟಿನಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಹರವೆ ರಾಮೇನಹಳ್ಳಿಯ ನಿಂಗರಾಜು ಗಾವಡಗೆರೆಯಲ್ಲಿನ ತಮ್ಮ ಸಂಬಂಧಿಕರ ಜಮೀನಿಗೆ ನಡೆದು ಹೋಗುತ್ತಿದ್ದ ವೇಳೆ ಹಿಂದಿನಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿ ಹೊಡೆದಿದೆ. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದ ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಮೈಸೂರು ಮಿತ್ರ

ಸೋಮವಾರ 9 ಫೆಬ್ರವರಿ 2026

ತಿ.ನರಸೀಪುರದಲ್ಲಿ ರಸ್ತೆ ಬದಿ ವ್ಯಾಪಾರ ನಿಷೇಧ

ಪುರಸಭೆ ನಿಗದಿ ಪಡಿಸಿದ ಜಾಗದಲ್ಲೇ ವ್ಯಾಪಾರ ಮಾಡಬೇಕು: ಮುಖ್ಯಾಧಿಕಾರಿ



ಬೀದಿ ಬದಿ ವ್ಯಾಪಾರಸ್ಥರ ಸ್ಥಳಾಂತರಿಸುವ ಕುರಿತು ನಡೆದ ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್, ಪೊಲೀಸ್ ಇನ್‌ಸ್ಪೆಕ್ಟರ್ ಧನಂಜಯ್ ಸೇರಿದಂತೆ ಪುರಸಭೆ ಅಧಿಕಾರಿಗಳು ಹಾಜರಿದ್ದರು

ತಿ.ನರಸೀಪುರ, ಫೆ.8– ಪುರಸಭೆ ವ್ಯಾಪ್ತಿಗೊಳಪಡುವ ರಸ್ತೆ ಬದಿ ವ್ಯಾಪಾರಿಗಳು ಇನ್ನು ಮುಂದೆ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವಂತಿಲ್ಲ,ಪುರಸಭೆಯು ನಿಗದಿ ಪಡಿಸಿದ ಸ್ಥಳದಲ್ಲಿ ಮಾತ್ರವೇ ವ್ಯಾಪಾರ ಮಾಡಬೇಕು ಎಂದು ಮುಖ್ಯಾಧಿಕಾರಿ ಸಿ. ಶ್ರೀನಿವಾಸ್ ಸೂಚಿಸಿದ್ದಾರೆ.

ರಸ್ತೆಬದಿ ವ್ಯಾಪಾರಿಗಳನ್ನು ಸ್ಥಳಾಂತರಗೊಳಿಸುವ ಸಂಬಂಧ ಭಾನುವಾರ ಇಂದಿರಾ ಕ್ಯಾಂಟೀನ್ ಬಳಿ ಕರೆಯಲಾಗಿದ್ದ ವ್ಯಾಪಾರಿಗಳ ಕುಂದು ಕೊರತೆ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಸ್ತೆ ಬದಿ ವ್ಯಾಪಾರಿಗಳು ತಮಗೆ ನಿಗದಿ ಪಡಿಸಿದ ಸ್ಥಳದಲ್ಲಿ ವ್ಯಾಪಾರ ಮಾಡದೇ ರಸ್ತೆ ಮಧ್ಯಭಾಗದಲ್ಲಿಯೇ ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ದೂರುಗಳು ಹಾಗೂ ಪತ್ರಿಕೆ, ಮಾಧ್ಯಮಗಳಲ್ಲಿ ಸಮಸ್ಯೆಗಳ ಬಗ್ಗೆ ವರದಿ ಪ್ರಕಟವಾಗುತ್ತಿರುವ ಹಿನ್ನೆಲೆಯಲ್ಲಿ ಪುಟ್ ಪಾತ್ ವ್ಯಾಪಾರಿಗಳನ್ನು ಶೀಘ್ರವಾಗಿ ಸ್ಥಳಾಂತರಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಪುರಸಭೆ ವ್ಯಾಪ್ತಿಯಲ್ಲಿ ಎಲ್ಲೂ ಕೂಡ ಪುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡಲಾಗುವುದಿಲ್ಲ. ಆದರೆ ವ್ಯಾಪಾರಸ್ಥರಿಗೆ ಅಗತ್ಯವಾಗಿ ಪರ್ಯಾಯ ಸ್ಥಳ ಗುರುತಿಸಿ, ಅಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸಿ ನಂತರವಷ್ಟೇ ವ್ಯಾಪಾರಿಗಳನ್ನು ಸ್ಥಳಾಂತರಿಸಲಾಗುತ್ತದೆ,ಒಂದು ತಿಂಗಳು ಅಥವಾ 15 ದಿನಗಳ ಒಳಗೆ ಈ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ ಎಂದರು.

ಪಟ್ಟಣದ ಲಿಂಕ್ ರಸ್ತೆ, ಮಾರುಕಟ್ಟೆ ರಸ್ತೆ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳು ತಮಗೆ ನಿಗದಿ ಪಡಿಸಿದ ಸ್ಥಳದ ಲಿಮಿಟ್ ಮೀರಿ ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿರುವುದರಿಂದ ತೀವ್ರ ತೊಂದರೆ ಎದುರಾಗಿದೆ. ಹಾಗಾಗಿ ತುರ್ತಾಗಿ ವ್ಯಾಪಾರಿಗಳನ್ನು ಸ್ಥಳಾಂತರಿಸುವ ನಿರ್ಧಾರಕ್ಕೆ ಬರಲಾಗಿದೆ. ಪುರಸಭೆ ಹಾಗು ಪೋಲೀಸ್ ಇಲಾಖೆಯ ಈ ನಿರ್ಧಾರಕ್ಕೆ ಎಲ್ಲ ವ್ಯಾಪಾರಿಗಳು ಸಹಮತ ವ್ಯಕ್ತಪಡಿಸಬೇಕಿದೆ ಎಂದರು.

ಸರ್ಕಾರದ ಮಹತ್ವದ ಯೋಜನೆಯಾಗಿರುವ ಇಂದಿರಾ ಕ್ಯಾಂಟೀನ್ ಮುಂದ 'ಯೂ ಕೂಡ ಬೀದಿ ಬದಿ ವ್ಯಾಪಾರಸ್ಥರು, ಕ್ಯಾಂಟೀನ್ ಕಾಣದ ರೀತಿಯಲ್ಲಿ ವ್ಯಾಪಾರ ಮಾಡುತ್ತಿದ್ದು, ನಾಳೆಯೇ ಅಲ್ಲಿ ತೆರವು ಮಾಡಿ ಬೇರೆಡೆ ತೆರಳಬೇಕು ಎಂದು ಮುಖ್ಯಾಧಿಕಾರಿ ಸೂಚಿಸಿದರು.

ಮೈಸೂರು ಮಾದರಿ ಆಟೋ ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಸಾಕಷ್ಟು ವಿಶಾಲವಾದ ಜಾಗವಿದೆ. ಆಟೋದವರು ಎಲ್ಲೆಂದರಲ್ಲಿ ಪ್ರಯಾಣಿಕರನ್ನು ಪಿಕಪ್ ಮಾಡದೇ ನಿಗದಿತ ಸ್ಥಳದಲ್ಲೇ ಪಿಕಪ್ ಮಾಡುವ ಉದ್ದೇಶದಿಂದ ಮೈಸೂರು ಬಸ್ ಸ್ಟ್ಯಾಂಡ್ ಮುಂಭಾಗ ಇರುವಂತೆ ಆಟೋ ಸ್ಟ್ಯಾಂಡ್ ಮಾಡಲಾಗುತ್ತದೆ, ತಮಗಿಷ್ಟ ಬಂದಂತೆ ಆಟೋ ನಿಲ್ಲಿಸಲು ಪೊಲೀಸ್ ಇಲಾಖೆ ಕೂಡ ಬಿಡುವುದಿಲ್ಲ. ಹಾಗಾಗಿ ಆಟೋದವರು ಶಿಸ್ತುಬದ್ಧವಾಗಿ ಪ್ರಯಾಣಿಕರನ್ನು ಕರೆದೊಯ್ಯುವ ಕೆಲಸ ಮಾಡಬೇಕಿದೆ ಎಂದು ಮುಖ್ಯಾಧಿಕಾರಿ ಶ್ರೀನಿವಾಸ್ ಆಟೋ ಚಾಲಕರಿಗೆ ಸಲಹೆ ನೀಡಿದರು.

ಈ ವೇಳೆ ಪುರಸಭೆ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಕಾಶ್, ಸಮುದಾಯ ಸಂಘಟನಾಧಿಕಾರಿ ನಳಿನಿ, ಕಂದಾಯ ಅಧಿಕಾರಿ ತ್ರಿವೇಣಿ, ಕಿರಿಯ ಇಂಜಿನಿಯರ್ ಸಿದ್ದಪ್ಪ, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಹಿರಿಯ ಆರೋಗ್ಯ ನಿರೀಕ್ಷಕಿ ಚಂಪಾಶ್ರೀ, ಪ್ರಥಮ ದರ್ಜೆ ಸಹಾಯಕರಾದ ಜಯಲಕ್ಷ್ಮಮ್ಮ, ಪ್ರಿಯಾಂಕ, ದ್ವಿತೀಯ ದರ್ಜೆ ಸಹಾಯಕರಾದ ಆಶಾ,ಗೋಪಾಲ್, ಸೀನಿಯರ್ ವಾಲ್ಮೆನ್ ರಾಮು,ಅಟೆಂಡರ್ ನಿಂಗರಾಜು ಸೇರಿದಂತೆ ಪೌರ ಕಾರ್ಮಿಕರು, ವಾಟರ್‌ಮೆನ್‌ಗಳು ಹಾಗೂ ಬೀದಿ ಬದಿ ವ್ಯಾಪಾರಿಗಳು ಹಾಜರಿದ್ದರು.

ಪುಟ್‌ಪಾತ್ ಟ್ಯಾಗ್ ಲೈನ್ ಬೇಡ

ಸರ್ಕಲ್ ಇನ್‌ಸ್ಪೆಕ್ಟರ್ ಧನಂಜಯ್ ಮಾತನಾಡಿ, ಎರಡು ವರ್ಷದ ಹಿಂದೆ ರಸ್ತೆ ಬದಿ, ಆಟೋ ಚಾಲಕರ ಸಂಪರ್ಕ ಸಭೆ ಮಾಡಲಾಗಿತ್ತು. ರಸ್ತೆ ಬದಿ ವ್ಯಾಪಾರಿಗಳಿಂದ ಆಗುವ ತೊಂದರೆ ಬಗ್ಗೆ ಚರ್ಚೆ ಮಾಡಲಾಗಿತ್ತು. ಬಹುಪಾಲು ಜನ ಬೀದಿ ಬದಿ ವ್ಯಾಪಾರ ಮಾಡಿಯೇ ಜೀವನ ನಡೆಸುತ್ತಿದ್ದನ್ನು ಮನಗಂಡು ಬೀದಿ ವ್ಯಾಪಾರಕ್ಕೆ ಅವಕಾಶ ನೀಡಲಾಗಿತ್ತು.

ಆದರೆ ಇದರಿಂದ ತೊಂದರೆಯಾಗಲಾರಂಭಿಸಿತು. ಈಗ ರಸ್ತೆ ಬದಿ ವ್ಯಾಪಾರಿಗಳಿಗೆ ಪುಟ್‌ಪಾತ್ ವ್ಯಾಪಾರಿಗಳು ಎಂಬ ಟ್ಯಾಗ್ ಲೈನ್ ಬಂದು ಬಿಟ್ಟಿದೆ. ಹಾಗಾಗಿ ನಮ್ಮ ಉದ್ದೇಶ ಪುಟ್‌ಪಾತ್ ಎಂಬುದನ್ನು ಕಿತ್ತು ವ್ಯಾಪಾರಿಗಳು ಎಂದು ಅನಿಸಿಕೊಳ್ಳುವಂತೆ ಮಾಡುವುದಾಗಿದೆ ಎಂದರು.

ಈ ವೇಳೆ ವ್ಯಾಪಾರಿಗಳು ಕೆಲ ವ್ಯಾಪಾರಿಗಳು ಪುರಸಭೆಯಿಂದ ಹರಾಜಿನಲ್ಲಿ ಪಡೆದ ಮಳಿಗೆಗಳನ್ನು ಬಾಡಿಗೆಗೆ ಕೊಟ್ಟು ತಾವು ಮಾತ್ರ ಬೀದಿಗೆ ಬಂದು ವ್ಯಾಪಾರ ಮಾಡುತ್ತಿದ್ದಾರೆ ಎಂದು ದೂರಿದರೆ, ಮತ್ತೊಬ್ಬರು ನೈಜ ವ್ಯಾಪಾರಿಗಳನ್ನು ಗುರುತಿಸಿ 10 ಅಡಿ ಅಳತೆಯ ಮಳಿಗೆ ನೀಡಬೇಕು, ರಸ್ತೆಯಲ್ಲಿ ಯಾರು ವ್ಯಾಪಾರ ಮಾಡುತ್ತಾರೋ ಅವರ ಮೇಲೆ ಕ್ರಮ ಜರುಗಿಸಿ.

ಇಮ್ಮಾವಿನಲ್ಲಿ ಕಾರ್ ರೇಸ್



ನಂಜನಗೂಡು ತಾಲೂಕಿನ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ನಡೆದ ದಿ.ರಾಕೇಶ್ ಸಿದ್ದರಾಮಯ್ಯ ಸ್ಮರಣಾರ್ಥ ಡರ್ಕ್ ಟ್ರಿಕ್ಸ್ ಕಾರ್ ರೇಸ್ ಪಂದ್ಯಾವಳಿಯನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು.

ನಂಜನಗೂಡು: ಯುವಕರು ಚಾಕಚಕ್ಯತೆಯಿಂದ, ರೋಮಾಂಚನಗೊಳಿಸುವ ಡರ್ಕ್ ಟ್ರಾಕ್ ಕಾರ್ ರೇಸ್‌ನಲ್ಲಿ ತಮ್ಮ ಅದ್ಭುತ ಪ್ರತಿಭೆಯಿಂದ ಪ್ರೇಕ್ಷಕರ ಮನ ಗೆದ್ದಿದ್ದಾರೆ, ಈ ರೀತಿಯ ಸಾಹಸ ಕ್ರೀಡೆಗಳಿಗೆ ಪ್ರೋತ್ಸಾಹದ ಅಗತ್ಯವಿದೆ ಎಂದು ಸಂಸದ ಸುನೀಲ್ ಬೋಸ್ ಹೇಳಿದರು.

ತಾಲೂಕಿನ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ನಡೆದ ದಿ.ರಾಕೇಶ್ ಸಿದ್ದರಾಮಯ್ಯ ಸ್ಮರಣಾರ್ಥ ಅರ್ಕೇಶ ಮತ್ತು ಗೆಳೆಯರ ಬಳಗ ಆಯೋಜಿಸಿದ್ದ ಡರ್ಕ್ ಟ್ರಿಕ್ಸ್ ಕಾರ್ ರೇಸ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಕೇಶ್ ಸಿದ್ದರಾಮಯ್ಯ ಅವರೊಡನೆ ನನಗೆ ಹೆಚ್ಚಿನ ಬಾಂಧವ್ಯವಿತ್ತು, ಅವರ ಜೊತೆಗೂಡಿ ನಮ್ಮ ಜಿಲ್ಲೆಯಲ್ಲಿ ರಾಜಕೀಯ, ಜನಸಂಪರ್ಕ, ಜನಸೇವೆಯ ಪಾಠಗಳನ್ನು ಕಲಿತಿದ್ದೇನೆ, ಅವರು ಬದುಕಿದ್ದರೆ ನಮ್ಮ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಸಾಧಿಸಬಹುದಿತ್ತು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಅರ್ಕೇಶ ಮತ್ತು ಬಳಗ ಸ್ಪರ್ಧೆಯನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದಾರೆ, ಸ್ಪರ್ಧಿಗಳು ತಮ್ಮ ಪ್ರಾಣದ ಹಂಗು ತೊರೆದು ಪೈಪೋಟಿ ನಡೆಸಿದ್ದಾರೆ, ಸಾಹಸ ಕ್ರೀಡೆಗಳಲ್ಲಿ ಸ್ಪರ್ಧಿಗಳಿಗೆ ಹೆಚ್ಚಿನ ರಕ್ಷಣೆ ಮುಖ್ಯವಾಗುತ್ತದೆ, ರಾಕೇಶ್ ಸಿದ್ದರಾಮಯ್ಯ ಅವರ ಸ್ಮರಣಾರ್ಥ ಮುಂದಿನ ದಿನಗಳಲ್ಲಿ ಯುವಕರಿಗೆ ಪ್ರೋತ್ಸಾಹ ನೀಡಲು ಹೆಚ್ಚಿನ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಇಂಧನ್ ಬಾಬು,ಮಾಜಿ ಜಿ.ಪಂ ಸದಸ್ಯ ಚೋಳರಾಜು, ರೈತಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿದ್ಯಾಸಾಗರ್, ಇಮ್ಮಾವು ರಘು, ಅರ್ಕೇಶ್, ದಿನೇಶ್, ಎನ್.ಟಿ.ಗಿರೀಶ್, ದೇವರಾಜು,ಕುಮಾರ್, ರಾಜು ಉಪಸ್ಥಿತರಿದ್ದರು.

ಬನ್ನೂರಲ್ಲಿ ಹೇಮಾದ್ರಾಂಭ ದೇವಿಯ ಭವ್ಯ ರಥೋತ್ಸವ



ಬನ್ನೂರಿನ ಇತಿಹಾಸ ಪ್ರಸಿದ್ಧ ಹೇಮಾದ್ರಾಂಭ ದೇವಿಯ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಬನ್ನೂರು: ತಲಕಾಡು ಗಂಗರಸರ ನೆಲೆಬೀಡಾಗಿದ್ದು, ವಹ್ನಿಪುರವೆಂದೇ ಪ್ರಖ್ಯಾತಗೊಂಡು ವ್ಯಾಸರಾಯರಿಂದ ಪೂಜಿಸಲ್ಪಟ್ಟ ಇತಿಹಾಸ ಪ್ರಸಿದ್ಧ ಶ್ರೀ ಹೇಮಾದ್ರಾಂಭ ದೇವಿಯ ಭವ್ಯ ರಥೋತ್ಸವವು ಭಾನುವಾರ ಹಿಂದಿನಿಂದಲೂ ಬೆಳೆದು ಬಂದಿರುವ ಸಾಂಪ್ರದಾಯಿಕ ಆಚರಣೆಯೊಂದಿಗೆ ವಿಜೃಂಭಣೆಯಿಂದ ಸಂಪನ್ನಗೊಂಡಿತ್ತು.

ಇತಿಹಾಸ: ವಿಜಯನಗರ ಅರಸರ ಕಾಲದಲ್ಲಿ ಬರಗಾಲ ಉಂಟಾಗಿದ್ದ ಸಂದರ್ಭದಲ್ಲಿ ವ್ಯಾಸರಾಜರಿಂದ ಪೂಜಿಸಲ್ಪಟ್ಟ ದೇವಿಯು ಚಿನ್ನದ ಮಳೆಯನ್ನೇ ಸುರಿಸಿದಳು ಎನ್ನುವ ಪ್ರತೀತಿ ಇದೆ, ದೇವಿಯು ಮಡಿವಂತಿಕೆಗೆ ಹೆಸರಾಗಿದ್ದು, ಜಾತ್ರಾ ಮಹೋತ್ಸವದ ವೇಳೆಯಲ್ಲಿ ಮಾತ್ರವೇ ಮುಜರಾಯಿ ಇಲಾಖೆಯಿಂದ ದೇವಿಯ ಚಿನ್ನದ ಮೂರ್ತಿಯನ್ನು ತಂದು ಪೂಜಿಸಿ ನಂತರ ಹಿಂದಿರುಗಿಸುವ ಪ್ರತೀತಿ ಮುಂದುವರೆದಿದೆ.

ಮುಂಜಾನೆಯಿಂದಲೇ ದೇವಾಲಯದಲ್ಲಿ ವಿವಿಧ ಹೋಮ ಹವನಗಳು ನಡೆದು ಕಳಶ ಪೂಜೆಯು ಪೂರ್ಣಗೊಂಡಿತು. ನಂತರ ರಥ ಸಾಗುವ ಬೀದಿಗಳನ್ನು ಪರಿಶುದ್ಧಗೊಳಿಸಿ ಹೇಮಾದ್ರಾಂಭ ದೇವಿಯನ್ನು ದೇವಾಲಯದಿಂದ ಹೊರತಂದು ರಥದ ಸುತ್ತ ಪ್ರದಕ್ಷಿಣೆ ಮಾಡಿ, ಬಣ್ಣ ಬಣ್ಣದ ಪತಾಕೆಗಳು, ವಿವಿಧ ಬಾವುಟಗಳು, ವಿವಿಧ ಹೂಗಳಿಂದ ಅಲಂಕಾರಗೊಂಡಿದ್ದ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ದೇವಾಲಯದಲ್ಲಿ ಸೇರಿದ್ದ ಸಾವಿರಾರು ಭಕ್ತರ ಹರ್ಷೋದ್ಗಾರ ಹಾಗೂ ಹೇಮಾದ್ರಾಂಭ ಚೌಕ ಎನ್ನುವ ಕೂಗಿನ ಮೂಲಕ ಡೋಲು ನಗಾರಿ, ಮಂಗಳಕರ ವಾದ್ಯದ ಮೆರವಣಿಗೆಯಲ್ಲಿ ರಥೋತ್ಸವಕ್ಕೆ ಭವ್ಯ ಚಾಲನೆ ದೊರೆಯಿತು.

ರಥೋತ್ಸವದ ಹಿನ್ನೆಲೆಯಲ್ಲಿ ರಥವು ಸಾಗುವ ತೇರಿನ ಬೀದಿ ಹಾಗೂ ದೊಡ್ಡಂಗಡಿ ಬೀದಿಗಳಲ್ಲಿ ಆಕರ್ಷಕ ರಂಗೋಲಿ ಮೂಲಕ ರಥಕ್ಕೆ ಸ್ವಾಗತ ಕೋರಲಾಯಿತು. ನವ ದಂಪತಿಗಳು ಹಣ್ಣು–ಜವನ ಎಸೆದು ಪುನೀತರಾದರು.

ರಥೋತ್ಸವದ ಹಿನ್ನೆಲೆಯಲ್ಲಿ ಯುವಕರ ನೃತ್ಯ ಸಾರ್ವಜನಿಕರನ್ನು ಸೆಳೆದರೆ, ಪೂಜಾ ಕುಣಿತ ಹಾಗೂ ವೀರಗಾಸೆ ಕುಣಿತ ಬಲು ಆಕರ್ಷಣೀಯವಾಗಿತ್ತು. ಅಲ್ಲಲ್ಲಿ ಮಜ್ಜಿಗೆ ಪಾನಕ ನಿಡುವ ವ್ಯವಸ್ಥೆಯನ್ನು ಭಕ್ತರು ಹಮ್ಮಿಕೊಂಡಿದ್ದರು. ದೇವಾಲಯದ ಬಳಿಯಲ್ಲಿಯೂ ಪ್ರಸಾದ ವಿತರಣೆ ನಡೆಯಿತು.

ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾದ ರಥೋತ್ಸವ ಮದ್ಯಾಹ್ನ 2.30 ರ ವೇಳೆಗೆ ಕೊನೆಗೊಂಡಿತು. ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಕಲ್ಪಿಸಿದ್ದರು.

ನಂಜನಗೂಡಿನಲ್ಲಿ ಬಿಎಐ ಘಟಕ ಉದ್ಘಾಟನೆ

ಕಟ್ಟಡ ಕಾರ್ಮಿಕರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡಲಿ



ನಂಜನಗೂಡಿನ ಬಿಎಐ ಘಟಕವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಫೆ.8– ನಂಜನಗೂಡಿನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಬಿಎಐ(ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ) ಘಟಕವು ಕಟ್ಟಡ ಕಾರ್ಮಿಕರಿಗೆ ಅನುಕೂಲತೆಗಳನ್ನು ಕಲ್ಪಿಸುವ ಜೊತೆಗೆ ಸಾರ್ವಜನಿಕರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಬೇಕು ಎಂದು ಶಾಸಕದರ್ಶನ್ ಧ್ರುವನಾರಾಯಣ್ ಹೇಳಿದರು.

ನಗರದ ಕಾಮಾಕ್ಷಿಬಾಯಿ ಕಲ್ಯಾಣ ಮಂಟಪದಲ್ಲಿ ಬಿಎಐ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ನಂಜನಗೂಡು ಹಲವಾರು ಕಾರ್ಖಾನೆಗಳನ್ನು ಒಳಗೊಂಡಿದೆ ಜೊತೆಗೆ ಆರ್‌ವಿ ಯೂನಿವರ್ಸಿಟಿ ಸೇರಿದಂತೆ ಹಲವಾರು ಶೈಕ್ಷಣಿಕ ಕೇಂದ್ರಗಳನ್ನು ಒಳಗೊಂಡಂತೆ ಒಂದು ಶೈಕ್ಷಣಿಕ ಕೇಂದ್ರವಾಗಿ ಮಾರ್ಪಟ್ಟಿದೆ, ಆದ ಕಾರಣ ನಂಜನಗೂಡಿನಲ್ಲಿ ಅಭಿವೃದ್ಧಿಯ ಹಿತದೃಷ್ಟಿಯಿಂದಾಗಿ ಕಟ್ಟಡಗಳು ತಲೆಯೆತ್ತಲಿವೆ, ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಬಿಎಐ ಘಟಕವು ಸರ್ಕಾರದ ನೀತಿ ನಿಯಮಗಳನ್ನು ಅನುಸರಿಸುವ ಮೂಲಕ ಕಟ್ಟಡ ಕಾರ್ಮಿಕರಿಗೆ ಮತ್ತು ಗುತ್ತಿಗೆದಾರರ ಹಿತರಕ್ಷಣೆಗಾಗಿ ಅನುಕೂಲತೆಗಳನ್ನು ಕಲ್ಪಿಸಬೇಕು ಮತ್ತು ನೂತನ ತಂತ್ರಜ್ಞಾನ ಅಳವಡಿಕೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಮಾಜದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಬೇಕು ಎಂದರು.

ಬಿಎಐ ನೂತನ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ ಮಾತನಾಡಿ ನಂಜನಗೂಡಲ್ಲಿ ಬಿಎಐ ಘಟಕವು ಉದ್ಘಾಟನೆ ಆಗಿರುವುದರಿಂದ ಕಟ್ಟಡ ನಿರ್ಮಾಣದಲ್ಲಿ ನೂತನ ತಂತ್ರಜ್ಞಾನ ಅಳವಡಿಕೆಯ ಜೊತೆಗೆ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸುವುದಲ್ಲದೆ ಅವರ ಕುಂದು ಕೊರತೆಗಳನ್ನು ಮತ್ತು ಸಮಸ್ಯೆಗಳನ್ನು ಬಗೆಹರಿಸಲು ನೆರವಾಗಲಿದೆ ಎಂದು ಹೇಳಿದರು. ಬಿಎಐ ಘಟಕದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಂಜನಗೂಡು ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎನ್. ಆರ್. ಕೃಷ್ಣಪ್ಪಗೌಡ, ಮಹದೇವಶೆಟ್ಟಿ (ಉಪಾಧ್ಯಕ್ಷ), ಈ.ರಮೇಶ್ (ಗೌರವ ಕಾರ್ಯದರ್ಶಿ), ದಿಲೀಪ್‌ಕುಮಾರ್ (ಗೌರವ ಜಂಟಿ ಕಾರ್ಯದರ್ಶಿ), ಮಂಜುನಾಥ್ ಜಿ.ಡಿ. (ಗೌರವ ಖಜಾಂಚಿ), ತಿರುಮಲೇಶ್ ಗೌಡ (ಗೌರವ ಜಂಟಿ ಖಜಾಂಚಿ), ಎನ್.ಉಮೇಶ್, ಎಚ್.ಎಸ್. ಸೋಮಶೇಖರ್, ಗೌತಮ್‌ಕುಮಾರ್ ಬೊಹರಾ, ಸತೀಶ್ ಗಾಣಿಗ, ವೀರೇಂದ್ರ ಕುಮಾರ್, ಬಸವರಾಜ್(ಕಾರ್ಯಕಾರಿ ಸಮಿತಿ ಸದಸ್ಯರು), ಎಂ.ಡಿ. ಶಶಾಂಕ್, ಶಹಾಬ್, ರವೀಶ್, ಬಿ.ಪಿ.ಸುರೇಶ್, ಎನ್.ಎಸ್.ಸುಪ್ರೀತ್, ನಟರಾಜ್, ಶಿವಶಂಕರ್, ಕೆ.ವರುಣ್ (ಸಹ ಕಾರ್ಯಕಾರಿ ಸಮಿತಿ ಸದಸ್ಯರು), ಪಿ.ವಿಪುಲ್, ಎಸ್.ಮಂಜುನಾಥ್, ಎಚ್.ಸಿ. ರವಿ, ಕೌಶಿಕ್ ಉಮೇಶ್, ಎನ್.ಎಂ. ಕೃಷ್ಣಸ್ವಾಮಿ (ಪೋಷಕ ಸದಸ್ಯರು) ಇತರೆ ಪದಾಧಿಕಾರಿಗಳಾಗಿ ಆಯ್ಕೆಯಾದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಶ್ರೀನಾಥ್, ರಮೇಶ್, ಕೃಷ್ಣ, ಯೋಗನರಸಿಂಹ, ಯು. ಎನ್. ಪದ್ಮನಾಭರಾವ್, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮುಖಂಡರಾದ ಹಾಡ್ಯ ಜಯರಾಮು, ಎನ್. ಎಂ.ಮಂಜುನಾಥ್, ಉಮೇಶ್, ಶಿವನಂಜೇಗೌಡ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಮುಚ್ಚುವ ಹಂತದಲ್ಲಿರುವ ಸರ್ಕಾರಿ ಶಾಲೆಗಳನ್ನು ಉಳಿಸಿ

ಮೈಸೂರು ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಕರೆ



ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಮಾತನಾಡಿದರು.

ಟಿ.ನರಸೀಪುರ ಫೆ8– ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ನಾನೂ ಕೂಡ ಸರ್ಕಾರಿ ಶಾಲೆಯಲ್ಲೇ ವಿದ್ಯಾಭ್ಯಾಸ ಮಾಡಿ ಇಂದು ಉನ್ನತ ಮಟ್ಟದ ಅಧಿಕಾರಿಯಾಗಿದ್ದೇನೆ. ಆದ್ದರಿಂದ ಪೋಷಕರು ಮತ್ತು ಸಾರ್ವಜನಿಕರು ಸರ್ಕಾರಿ ಶಾಲೆಗಳನ್ನು ಕೀಳಾಗಿ ಕಾಣದೆ, ಮುಚ್ಚುವ ಹಂತದಲ್ಲಿರುವ ಶಾಲೆಗಳನ್ನು ಉಳಿಸಿ ಬೆಳೆಸುವ ಪ್ರಯತ್ನ ಮಾಡಬೇಕು ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಕರೆ ನೀಡಿದರು.

ತಾಲೂಕಿನ ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುಂಬಲ ಗ್ರಾಮದ ಪಿಎಂ ಶ್ರೀ (PM SHRI) ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಅವರು, ವಿದ್ಯಾರ್ಥಿಗಳು ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿದರೆ ಜೀವನದಲ್ಲಿ ಯಾವುದೇ ಸಾಧನೆಯನ್ನಾದರೂ ಮಾಡಬಹುದು. ಸರ್ಕಾರಿ ಶಾಲೆಯ ಶಿಕ್ಷಣ ಮಕ್ಕಳ ಭವಿಷ್ಯಕ್ಕೆ ಉತ್ತಮ ಬುನಾದಿ ಹಾಕಿಕೊಡುತ್ತದೆ," ಎಂದು ತಿಳಿಸಿದರು.

ನಿವೃತ್ತ ಶಿಕ್ಷಕಿಗೆ ಬೀಳ್ಕೊಡುಗೆ: ಇದೇ ಸಂದರ್ಭದಲ್ಲಿ ಶಾಲೆಯಲ್ಲಿ ಸುಮಾರು 21 ವರ್ಷಗಳ ದೀರ್ಘ ಕಾಲ ಸೇವೆ ಸಲ್ಲಿಸಿದ ಶಿಕ್ಷಕಿ ಶ್ರೀಮತಿ ರೇಣುಕಾಂಬ ಅವರನ್ನು ಶಾಲಾ ವತಿಯಿಂದ ಹಾಗೂ ಗ್ರಾಮಸ್ಥರ ಪರವಾಗಿ ಆತ್ಮೀಯವಾಗಿ ಸನ್ಮಾನಿಸಿ, ಭಾವಪೂರ್ಣವಾಗಿ ಬೀಳ್ಕೊಡಲಾಯಿತು. ಅಲ್ಲದೆ, ಶೈಕ್ಷಣಿಕವಾಗಿ ಮತ್ತು ಕ್ರೀಡೆಯಲ್ಲಿ ಸಾಧನೆಗೈದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಟಿ.ನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಕ್ಷೇತ್ರ ಸಮನ್ವಯ ಅಧಿಕಾರಿ ನಾಗೇಶ್, ವಿಜಯ ಕರ್ನಾಟಕ ಪತ್ರಿಕೆಯ ಸಿಇಒ ವಿಭಾ ದೀಪಕ್, ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಬಿ. ಸಿದ್ದರಾಜು, ಇತಿಹಾಸ ಉಪನ್ಯಾಸಕ ಡಾ. ಯೋಗೇಂದ್ರ ಹಾಗೂ ಡಿಜೆಎಸ್ ಜಿಲ್ಲಾಧ್ಯಕ್ಷ ಮಂಜುನಾಥ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ಶಿವಪ್ಪ ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ರಾಯಪ್ಪ ಗೌಂಡಿ ಸ್ವಾಗತಿಸಿದರು. ವೇದಿಕೆಯಲ್ಲಿ ಎಸ್ಡಿಎಂಸಿ ಸದಸ್ಯರಾದ ಪಾಪಣ್ಣ ನಂದೀಶ್, ರಮೇಶ್, ಸೌಮ್ಯ, ಇಂದ್ರಮ್ಮ, ನವೀನ್, ಸಾಗರ್, ಮಹೇಶ್ ಹಾಜರಿದ್ದರು. ಶಾಲಾ ಶಿಕ್ಷಕರಾದ ಶಶಿಧರ್, ಶ್ರೀಕಂಠಯ್ಯ, ಪುಷ್ಪಲತಾ, ನಿರ್ಮಲ, ನೇತ್ರಾವತಿ, ಮಮತಾ, ನಾಗರತ್ನ, ಆಯಿಷಾ ಪೀರ್ದೋಸ್ ಇದ್ದರು.

ಧರ್ಮಸ್ಥಳದ ಯೋಜನೆಗಳು ಸರ್ಕಾರಗಳ ಮಾದರಿ ಯೋಜನೆಗಳಾಗಿ ಜಾರಿ



ಹೆಚ್.ಡಿ.ಕೋಟೆ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಜಾರಿಗೆ ತಂದ ಯೋಜನೆಗಳನ್ನು ಭಾರತದ ಕೆಲ ರಾಜ್ಯಗಳ ಸರ್ಕಾರಗಳು ಮಾದರಿ ಯೋಜನೆಗಳಾಗಿ ಗುರುತಿಸಿ ತಮ್ಮ ಅಧಿಕಾರವಧಿಯಲ್ಲಿ ಜಾರಿಗೆ ತಂದಿದ್ದಾರೆ ಎಂದು ಸಮಾಜ ಸೇವಕಿ ಸುಧಾ ಮೃತ್ಯುಂಜಯಪ್ಪ ತಿಳಿಸಿದರು.

ಪಟ್ಟಣದ ಹ್ಯಾಂಡ್ ಪೋಸ್ಟ್‌ನಲ್ಲಿರುವ ತಾರಕ ಫಂಕ್ಷನ್ ಹಾಲ್‌ನಲ್ಲಿ ಶನಿವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮ ಅಡಿಯಲ್ಲಿ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಒಂದು ಸರ್ಕಾರ ಜಾರಿಗೆ ತರುವ ಬಹುತೇಕ ಯೋಜನೆಗಳನ್ನು ವೀರೇಂದ್ರ ಹೆಗ್ಗಡೆಯವರು 43 ವರ್ಷಗಳ ಹಿಂದೆ ಸ್ಥಾಪಿಸಿದ ಧರ್ಮಸ್ಥಳ ಯೋಜನೆಯು ಜಾರಿಗೆ ತಂದು ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಮಕ್ಕಳ ಬಗ್ಗೆ ಮಾತನಾಡಿದ ಅವರು ಮನೆಯಲ್ಲಿ ಮಕ್ಕಳಿಗೆ ಇಂದಿನ ದಿನಗಳಲ್ಲಿ ಆಹಾರಕ್ಕಿಂತ ಪ್ರೀತಿಯನ್ನು ನೀಡಬೇಕಾದ ಅನಿವಾರ್ಯತೆ ಎದುರಾಗಿದೆ, ಪೋಷಕರು ಮಕ್ಕಳಿಗೆ ಕೇವಲ ಪಠ್ಯದ ಭೂತವನ್ನು ತಲೆಯಲ್ಲಿ ತುಂಬುತ್ತಾ ಸಾಗಿದ್ದಾರೆ, ಅದಾಗಬಾರದು, ಪಠ್ಯದ ಜೊತೆಗೆ ಪ್ರೀತಿ, ವಾತ್ಸಲ್ಯ, ಮಮಕಾರ ಇದ್ದಲ್ಲಿ ಮಾತ್ರ ಮಕ್ಕಳು ತಮ್ಮ ಕೈ ತಪ್ಪುವುದಿಲ್ಲ ಎಂದರು.

ಯೋಜನೆಯ ತಾಲೂಕು ಯೋಜನಾಧಿಕಾರಿ ಭಾಸ್ಕರ್ ಮಾತನಾಡಿ, ತಾಲ್ಲೂಕಿನಲ್ಲಿ 2446 ಸ್ವಸಹಾಯ ಸಂಘಗಳಿದ್ದು ಇದುವರೆಗೂ 900 ಕೋಟಿಗೂ ಹೆಚ್ಚು ಸಾಲ ಪಡೆದಿದ್ದಲ್ಲದೇ ಮರುಪಾವತಿಯನ್ನೂ ಸಹ ಉತ್ತಮವಾಗಿ ನಡೆಸುತ್ತಾ ಬಂದಿದ್ದು, ಶೇ. 99.99ರಷ್ಟು ಮರುಪಾವತಿಯಾಗಿದೆ ಎಂದರು.

ರಾಜ್ಯದಲ್ಲಿ ಶಿಕ್ಷಕರ ಕೊರತೆಯನ್ನು ಗಮನಿಸಿದ ವೀರೇಂದ್ರ ಹೆಗ್ಗಡೆಯವರು 1070 ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಲಾಗಿದೆ. ಅವರಿಗೆ ಸಂಬಳದ ರೂಪದಲ್ಲಿ ಮಾಸಿಕ 9000 ರೂ ಹಣವನ್ನು ನೀಡಲಾಗುತ್ತಿದೆ ಎಂದರು.

ಪಟ್ಟಣದ ಹ್ಯಾಂಡ್ ಪೋಸ್ಟ್‌ನ ತಾರಕ ವಿದ್ಯಾಸಂಸ್ಥೆಗೆ ಕೊಠಡಿ ನಿರ್ಮಾಣಕ್ಕೆ 1 ಲಕ್ಷ ರೂ ಹಣದ ಚೆಕ್ ಅನ್ನು ಶಿಕ್ಷಕ ಆನಂದ್ ರವರಿಗೆ ಸಂಸ್ಥೆಯ ವತಿಯಿಂದ ವಿತರಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಹೂಗುಚ್ಛ ಸ್ಪರ್ಧೆ ಏರ್ಪಡಿಸಲಾಗಿತ್ತು.

ಜತೆಗೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ನಂಜನಗೂಡಿನಲ್ಲಿ ನಡೆದ ಕುಸ್ತಿ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಅವಧಿಯನ್ನು ಯಶಸ್ವಿಯಾಗಿ ಪೂರೈಸಿದ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಬಿ.ಶಂಕರ್ ಅವರನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಅಭಿನಂದಿಸಿದರು.

ಕಾಲೇಜಿಗೆ ಉತ್ತಮ ಫಲಿತಾಂಶ ನೀಡಿ, ಸತ್ಪ್ರಜೆಗಳಾಗಿ



ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ನಾಗಮ್ಮ ಉದ್ಘಾಟಿಸಿದರು.

ಹುಣಸೂರು: ವಿದ್ಯಾರ್ಥಿಗಳು ಕಾಲೇಜಿಗೆ ಉತ್ತಮ ಫಲಿತಾಂಶ ನೀಡುವುದರ ಜೊತೆಗೆ ಸಮಾಜಕ್ಕೆ ಸತ್ಪ್ರಜೆಗಳಾಗುವುದು ಅತ್ಯಂತ ಮಹತ್ವಾದುದು ಎಂದು ಪದವಿ ಪೂರ್ವ(ಶಾಲಾ) ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀಮತಿ ಎಮ್.ಪಿ. ನಾಗಮ್ಮ ತಿಳಿಸಿದರು.

ತಾಲ್ಲೂಕಿನ ಕರಿಮುದ್ದನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕ್ರೀಡಾ, ಸಾಂಸ್ಕೃತಿಕ, ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ'ವನ್ನು ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕರಾಗಿ ಆಯ್ಕೆಯಾಗಿ ಮೊಟ್ಟ ಮೊದಲು ಕರಿಮುದ್ದನಹಳ್ಳಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ್ದು ಅವಿಸ್ಮರಣೀಯ, ನನ್ನ ಅನೇಕ ವಿದ್ಯಾರ್ಥಿಗಳಿಂದು ಉತ್ತಮ ಸಾಧನೆಯನ್ನು ಮಾಡಿದ್ದಾರೆ. ಇಂದಿನ ವಿದ್ಯಾರ್ಥಿಗಳು ಅದೇ ರೀತಿ ಸಾಧಕರಾಗಬೇಕು ಎಂದು ತಮ್ಮ ಹಾಗೂ ಕಾಲೇಜಿನ ಒಡನಾಟವನ್ನು ಮೆಲುಕು ಹಾಕಿದರು.

ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಕೆಂಡಗಣ್ಣ.ಎಚ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಹಿತವಚನ ನೀಡಿದರು. ಹಿರಿಯ ಉಪನ್ಯಾಸಕ ಮಹದೇವ.ಆರ್. ಸ್ವಾಗತಿಸಿ ತಮ್ಮ ಗುರುಗಳು ಉಪ ನಿರ್ದೇಶಕರಾದ ನಾಗಮ್ಮ ಅವರ ಪ್ರೇರಣೆಯಿಂದ ತಾವು ಉಪನ್ಯಾಸಕರಾದುದನ್ನು ನೆನಪಿಸಿಕೊಂಡರು.

ಉಪನ್ಯಾಸ ಈಶ್ವರಪ್ಪಟಿ ಅಧ್ಯಕ್ಷತೆ ವಹಿಸಿದ್ದರು. 2025ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಪದಾಧಿಕಾರಿಗಳಾದ ಕೆಂಡಗಣ್ಣೇಗೌಡ, ಮಂಜು ಎನ್.ಆನಂದ ಮೂರ್ತಿ. ಶ್ರೀನಿವಾಸ, ಮುಖ್ಯಶಿಕ್ಷಕಿ ಸ್ವಾತಿ ಕುಮಾರಿ, ಉಪನ್ಯಾಸಕರಾದ ರಂಗನಾಥ್. ಮಹದೇವ ಶೆಟ್ಟಿ, ವಿನೋದ. ಮಾಲತಿ. ರಾಜೇಶ್ವರಿ. ಸಪ್ನ ಉನ್ನಿ, ಪ್ರಸಾದ್ ಇದ್ದರು.

ಇಟ್ನ ಗ್ರಾಮದಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ

ಅಂಬೇಡ್ಕರ್ ಆಶಯದಂತೆ ಸಮ ಸಮಾಜ ನಿರ್ಮಾಣ ಮಾಡೋಣ



ಸರಗೂರು ತಾಲೂಕು ಇಟ್ನ ಗ್ರಾಮದಲ್ಲಿ ನಿರ್ಮಿಸಲಾಗಿರುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಯನ್ನು ಅನಾವರಣಗೊಳಿಸಲಾಯಿತು.

ಸರಗೂರು, ಫೆ.8– ಸಂವಿಧಾನವನ್ನು ಜಾರಿಗೊಳಿಸಿ ಸಮಸಮಾಜ ನಿರ್ಮಾಣ ಮಾಡುವುದು ಅಂಬೇಡ್ಕರ್ ಗುರಿಯಾಗಿತ್ತು. ಅದರಂತೆ ಎಲ್ಲರೂ ಸಮಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ತಿಳಿಸಿದರು.

ತಾಲೂಕಿನ ಇಟ್ನ ಗ್ರಾಮದಲ್ಲಿ ಭಾನುವಾರ ನಡೆದ ಭಾರತ ರತ್ನ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಪುತ್ಥಳಿ ಅನಾವರಣ, ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾನತೆ, ಸಾಮಾಜಿಕ ನ್ಯಾಯ, ಸಹಬಾಳ್ವೆ, ಆರ್ಥಿಕ ಸಮಾನತೆಯನ್ನು ಸಂವಿಧಾನದ ಮೂಲಕ ಸಮಾಜದಲ್ಲಿ ನಿರ್ಮಿಸಲು ಶ್ರಮಿಸಿದರು. ಇಂದಿನ ಯುವ ಪೀಳಿಗೆ ಅಂಬೇಡ್ಕರ್ ಅವರ ಜೀವನ ಚರಿತ್ರೆ ಓದಿ ಪಠಿಸುವ ಅಭ್ಯಾಸ ಮಾಡಬೇಕು. ಶಿಕ್ಷಣವನ್ನು ಪಡೆದುಕೊಂಡು ಸಮಾಜದಲ್ಲಿ ಉತ್ತಮ ನಾಗರಿಕನಾಗಿ ಬದುಕಲು ಮುಂದಾಗಬೇಕು. ಬದುಕುವ ಹಕ್ಕನ್ನು ಪಡೆಯಲು ಮುಂದಾಗಬೇಕು. ಹೀಗಾಗಿ ಎಲ್ಲರೂ ಸಂವಿಧಾನವನ್ನು ಅರಿಯಬೇಕು ಎಂದು ಸಲಹೆ ನೀಡಿದರು.

ಶಾಸಕ ಅನಿಲ್ ಚಿಕ್ಕಮಾದು ಅವರ ಪತ್ನಿ ಸೌಮ್ಯ ಅನಿಲ್ ಚಿಕ್ಕಮಾದು ಮಾತನಾಡಿ, ಇಂದಿನ ಯುವಕರು ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆದರ್ಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಆ ಮೂಲಕ ಸಮಾಜದ ಏಳಿಗೆಗೆ ಶ್ರಮಿಸಬೇಕು. ಶಿಕ್ಷಣ, ಸಂಘಟನೆ, ಹೋರಾಟದ ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂತರಸಂತೆ ಸಾರನಾಥ ಬುದ್ಧ ವಿಹಾರ ಗೌತಮಿ ಬಂತೇಜಿ ಆಶೀರ್ವಚನ ನೀಡಿದರು. ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಇಟ್ನ ರಾಜಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರಸಭಾ ಸದಸ್ಯ ಎಚ್.ಸಿ.ನರಸಿಂಹಮೂರ್ತಿ, ಸಮಾಜ ಸೇವಕ ಎಸ್.ವಿ.ವೆಂಕಟೇಶ್, ಸಮಾಜ ಸೇವಕಿ ಮಮತಾ ವೆಂಕಟೇಶ್, ಕೋಟೆ ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಎಚ್.ಡಿ.ಶಿವರಾಜು, ಸರಗೂರು ಮಹಾಸಭಾ ಮಾಜಿ ಅಧ್ಯಕ್ಷ ಸರಗೂರು ಶಿವಣ್ಣ, ಮುದ್ದುಮಲ್ಲಯ್ಯ, ಹೈರಿಗೆ ಶಿವರಾಜು, ಜಿಪಂ ಮಾಜಿ ಸದಸ್ಯ ಪಿ.ರವಿ, ಇಟ್ನಾ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜು ಮಾತನಾಡಿದರು.

ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಾದ ಆರ್.ಕೆ.ಮೇಘನ, ಆರ್.ಕೆ.ಶಾಲಿನಿ, ನಿವೇದಿತಾ, ಸೋನು, ಸಹನ ಅವರನ್ನು ಸನ್ಮಾನಿಸಲಾಯಿತು. ಕ್ರಾಂತಿಗೀತೆ ಹಾಡಲಾಯಿತು.

ಗ್ರಾಮದ ಯಜಮಾನ ಸಿ.ಸುರೇಶ್, ಚಿಕ್ಕಯಜಮಾನ ಅನಿಲ್ ಕುಮಾರ್, ಅಂಬೇಡ್ಕರ್ ಟ್ರಸ್ಟ್‌ನ ನಂಜುಂಡ, ಚಿನ್ನಪ್ಪ, ನಿಂಗರಾಜು, ಚಂದ್ರು, ಭೈರಯ್ಯ, ಕುಮಾರ, ದೊಡ್ಡಪ್ಪಾಜಿ, ಚಿಕ್ಕಣ್ಣ, ಸೋಮಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು, ಮರಿದೇವಯ್ಯ, ವಕೀಲ ಜವರಯ್ಯ, ಎಂ.ಡಿ.ಮಂಚಯ್ಯ, ಭೀಮನಹಳ್ಳಿ ಸೋಮೇಶ್, ಜೀವಿಕ ಜಿಲ್ಲಾ ಸಂಘಟನಾ ಸಂಚಾಲಕ ಹೆಗ್ಗನೂರು ನಿಂಗರಾಜು, ಕಸಾಪ ಕಾರ್ಯದರ್ಶಿ ಗ್ರಾಮೀಣ ಮಹೇಶ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಕಂದೇಗಾಲ ಶಿವರಾಜು, ಹಳೆಯೂರು ಚಿನ್ನಣ್ಣ, ತುಂಬಸೋಗೆ ನಾಗಣ್ಣ, ಲಿಂಗೇನಹಳ್ಳಿ ವಿಷಕಂಠ, ಶಿವಲಿಂಗು, ನಿಲವಾಗಿಲು ರಾಮಚಂದ್ರ ಚನ್ನಿಪುರ ಶಿವಣ್ಣ, ಲಂಕೆ ಲಕ್ಷ್ಮಣ, ಯಶವಂತಪುರ ಶ್ರೀನಿವಾಸ್, ಹುಣಸಹಳ್ಳಿ ನಾಗರಾಜು, ಪತ್ರಕರ್ತರ ಸಂಘದ ಅಧ್ಯಕ್ಷ ಎಸ್. ಆರ್.ನಾಗರಾಮ್, ಚಿಕ್ಕಣ್ಣ, ಕೂಡಗಿ ಗೋವಿಂದರಾಜು, ಅಂಬೇಡ್ಕರ್ ಭವನ ಟ್ರಸ್ಟ್ ಅಧ್ಯಕ್ಷ ಎಸ್.ಡಿ.ಸಣ್ಣಸ್ವಾಮಿ, ಭೋಗಪ್ಪ, ಕೋಟೆ–ಸರಗೂರು ತಾಲೂಕಿನ ಮುಖಂಡರು ಹಾಗೂ ಗ್ರಾಮಸ್ಥರು ಭಾಗಿಯಾಗಿದ್ದರು.

ಮೂಗೂರು ದಾಕ್ಷಾಯಣಮ್ಮ ನಿಧನ



ಮೂಗೂರು, ಫೆ8–ಗ್ರಾಮದ ಗೌಡರ ಬೀದಿಯ ನಿವಾಸಿ ತಾಲೂಕು ಬೋರ್ಡ್ ಮಾಜಿ ಸದಸ್ಯರಾದ ದಿವಂಗತ ಗೌಡರ ಮಹದೇವಪ್ಪನವರ ಧರ್ಮಪತ್ನಿ ಶ್ರೀಮತಿ ದಾಕ್ಷಾಯಣಮ್ಮ(85) ಭಾನುವಾರ ನಿಧನ ಹೊಂದಿದರು.

ಮೃತರು ಪುತ್ರರಾದ ಮೂಗೂರಿನ ಪಿಎಸಿಸಿ ಅಧ್ಯಕ್ಷರೂ, ಗ್ರಾಪಂ ಮಾಜಿ ಅಧ್ಯಕ್ಷರೂ ಜೆಡಿಎಸ್ ಮುಖಂಡರೂ ಆದ ಗೌಡರ ಜಗದೀಶಮೂರ್ತಿ, ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ತಾಪಂ. ಮಾಜಿ ಸದಸ್ಯ ಎಂ.ಚಂದ್ರಶೇಖರ್, ಧರ್ಮೇಂದ್ರ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ

ಮೃತರ ಅಂತ್ಯಕ್ರಿಯೆಯು ಮೂಗೂರಿನಲ್ಲಿ ಸೋಮವಾರ ಮಧ್ಯಾಹ್ನ 1 ಗಂಟೆಗೆ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂಢನಂಬಿಕೆ ಬಿಡಿ, ವೈಚಾರಿಕತೆ ಬೆಳೆಸಿಕೊಳ್ಳಿ

ವಚನ ಗಾಯನ ಸ್ಪರ್ಧೆಯಲ್ಲಿ ಸುಗಮ ಸಂಗೀತ ಕಲಾವಿದ ಪ್ರೊ. ಎಸ್. ಸುಬ್ಬಣ್ಣ ಕರೆ

ಮೈಸೂರು, ಫೆ.8(ಎಂಟಿವೈ)– ಬಸವಾದಿ ಶರಣರು ಮೌಢ್ಯತೆ ವಿರೋಧಿಸಿ ವೈಚಾರಿಕ ಚಿಂತನೆ ಬೆಳೆಸಿಕೊಳ್ಳುವಂತೆ ಸಂದೇಶ ನೀಡಿದ್ದರೂ ಇಂದಿಗೂ ಜನ ಮೌಢ್ಯತೆಯನ್ನು ಅನುಸರಿಸುತ್ತಲೇ ಇದ್ದಾರೆ ಎಂದು ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಸುಗಮ ಸಂಗೀತ ಕಲಾವಿದ ಪ್ರೊ.ಎಸ್.ಸುಬ್ಬಣ್ಣ ವಿಷಾದಿಸಿದ್ದಾರೆ.



ಮೈಸೂರಿನ ಅಗ್ರಹಾರದಲ್ಲಿರುವ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ಆಯೋಜಿಸಿದ್ದ 'ವಚನ ಗಾಯನ ಸ್ಪರ್ಧೆ'ಯಲ್ಲಿ ವಿಜೇತರಾದ ಭಜನಾ ತಂಡದ ಸದಸ್ಯರು.

ಮೈಸೂರಿನ ಅಗ್ರಹಾರದಲ್ಲಿರುವ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ಆಯೋಜಿಸಿದ್ದ 'ವಚನ ಗಾಯನ ಸ್ಪರ್ಧೆ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಚನ ಸಾಹಿತ್ಯ ದೊಡ್ಡದಾಗಿದ್ದು, ಅದನ್ನು ಭಕ್ತಿ ಎಂಬ ತಳಹದಿ ಮೇಲೆ ವೈಚಾರಿಕವಾಗಿ ಕಟ್ಟಲಾಗಿದೆ ಎಂದರು.

ಬಸವಾದಿ ಶರಣರು 12ನೇ ಶತಮಾನದಲ್ಲಿಯೇ ಮೌಢ್ಯದಿಂದ ಜನರು ಹೊರಬರುವಂತೆ ಸಂದೇಶ ಸಾರುತ್ತಾ, ಸಮಾಜದಲ್ಲಿ ಸುಧಾರಣೆ ತರಲು ಪ್ರಯತ್ನಿಸಿದರು. ಅದರಲ್ಲೂ ಕ್ರಾಂತಿಕಾರಿ ಬಿರುದಾಂಕಿತ ಬಸವಣ್ಣನವರು ಮೌಢ್ಯದ ವಿರುದ್ಧವಾಗಿ ಪ್ರಬಲವಾದ ಹೋರಾಟ ನಡೆಸಿದರು. ಆದರೆ, ಇಂದು ಬಸವಣ್ಣನವರ ಅನುಯಾಯಿಗಳೂ ಸೇರಿದಂತೆ ಜನರು ಮಾತ್ರ ಮೌಢ್ಯತೆಯನ್ನು ಧಿಕ್ಕರಿಸಿಲ್ಲ. ಒಂದೆಡೆ ಕಲ್ಲು ನಾಗರ ಕಂಡರೆ ಹಾಲೆರೆವರೆಯ್ಯಾ ಎನ್ನುತ್ತೇವೆ. ನಾಗರ ಪಂಚಮಿ ಬಂದರೆ ಸಾಕು ಕಲ್ಲು ನಾಗರಕ್ಕೆ ಹಾಲೆರೆದು ಬರುತ್ತೇವೆ. ಇದು ಮೌಢ್ಯದ ಆಚರಣೆಯಲ್ಲವೇ ಎಂದು ಪ್ರಶ್ನಿಸಿದರು.

ಹಿಂದಿನಿಂದಲೂ ಜನರಲ್ಲಿ ಮೌಢ್ಯತೆ ಎಂಬ ಭಯವನ್ನು ಇಂಜೆಕ್ಟ್ ಮಾಡಿದಂತೆ ಕಾಣುತ್ತಿದೆ. ಕಲ್ಲು ನಾಗರಕ್ಕೆ ಹಾಲೆರೆಯದಿದ್ದರೆ ಏನಾಗುತ್ತದೋ ಎಂಬ ಭಯ ಜನರಲ್ಲಿ ಕಾಡುವುದರಿಂದ ನಾಗರ ಪಂಚಮಿ ದಿನ ಹಾಲೆರೆದು ಬರುತ್ತಿದ್ದಾರೆ. ಹಾಗಾಗಿ ಇನ್ನಾದರೂ ಮೌಢ್ಯಕ್ಕೆ ತಿಲಾಂಜಲಿ ನೀಡಿ, ವೈಚಾರಿಕ ಚಿಂತನೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಚನಕಾರರ ಚಿಂತನೆಯನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಸಂಗೀತ ಉತ್ತಮ ಮಾಧ್ಯಮವಾಗಿದೆ. ವಚನಗಳನ್ನು ಸಂಗೀತ ಅಥವಾ ಗಾಯನದ ಮೂಲಕ ಹೇಳಿದಾಗ ಜನರ ಮನಮುಟ್ಟಲಿದೆ. ಮೌಲ್ಯಯುತವಾದ ವಚನವು ಜಗತ್ತಿಗೆ ಪರಿಚಯಿಸುವ ಕಾರ್ಯ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಬೇಕಾಗಿದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ಮಾತನಾಡಿ, ವಿಶ್ವಮಾನವರಾಗಿ ಹಾಡಿದ ಬಸವಾದಿ ಪ್ರಮಥರ ವಚನ ಸಾಹಿತ್ಯದಲ್ಲಿ ಅದ್ಭುತವಾದ ಜೀವನ ದರ್ಶನವಿದೆ. ವಚನಗಳು ಸರಳಗನ್ನಡದಲ್ಲಿ, ಆಡುಭಾಷೆಯಲ್ಲಿ, ಮುಕ್ತ ಛಂದಸ್ಸಿನಲ್ಲಿ, ನೇರ ಹಾಗೂ ಮಾರ್ಮಿಕ ಶೈಲಿಯಲ್ಲಿ ರಚಿತವಾದ, ಜೀವನ್ಮುಖಿಯಾದ, ಬದುಕಿಗೆ ಸೂಕ್ತವಾದ ಮಾರ್ಗದರ್ಶನ ಮಾಡಬಹುದಾದ, ಅನನ್ಯವೂ ಅಪೂರ್ವವೂ ಆದ ಸಾಹಿತ್ಯವಾಗಿವೆ. ಕಾಯಕದ ಮಹತ್ವ, ಆತ್ಮಶುದ್ಧಿ, ಸಮಾನತೆ, ಭಕ್ತಿ ಪ್ರಾಧಾನ್ಯತೆ, ಅತ್ಯುತ್ತಮ ದೃಷ್ಟಾಂತಗಳು, ಉಪಮೆ ರೂಪಕ ಸಂಕೇತಗಳು, ತಾರ್ಕಿಕ ವಿಚಾರಗಳು, ಬಹುಮುಖ್ಯವಾಗಿ ವೈಜ್ಞಾನಿಕವಾದ ಮತ್ತು ಅನುಭಾವಿಕ ಚಿಂತನ ಮಂಥನಗಳು ಬಸವಾದಿ ಪ್ರಮಥರ ವಚನಗಳಲ್ಲಿವೆ ಎಂದರು.

ಇದೇ ವೇಳೆ ಕದಳಿ ಮಹಿಳಾ ವೇದಿಕೆ ಹಾಗೂ ಬಸವ ಬಳಗಗಳ ಸದಸ್ಯರ ತಂಡ ವಚನಗಳನ್ನು ಪ್ರಸ್ತುತ ಪಡಿಸಿ ಗಮನ ಸೆಳೆದರು. ಪ್ರಥಮ ಸ್ಥಾನ ಐದು ಸಾವಿರ ರೂ. ಬಹುಮಾನವನ್ನು ಮಹಾಲಕ್ಷ್ಮಿ ಬಳಗವೂ, ದ್ವಿತೀಯ ಸ್ಥಾನ ನಾಲ್ಕು ಸಾವಿರ ರೂ. ಬಹುಮಾನವನ್ನು ಅರಿವಿನ ಮನೆ ಬಳಗ, ತೃತೀಯ ಸ್ಥಾನ ಮೂರು ಸಾವಿರ ರೂ.ಬಹುಮಾನವನ್ನು ನೀಲಗಂಗಾ ಮಹಿಳಾ ಬಳಗ, ನಾಲ್ಕನೇ ಸ್ಥಾನ ಎರಡು ಸಾವಿರ ರೂ. ಬಹುಮಾನವನ್ನು ಗೌರೀಶಂಕರ ಬಳಗ, ಐದನೇ ಸ್ಥಾನ ಒಂದು ಸಾವಿರ ರೂ. ಬಹುಮಾನವನ್ನು ರಾಜರಾಜೇಶ್ವರಿ ಅಕ್ಕನ ಬಳಗ ತನ್ನದಾಗಿಸಿಕೊಂಡಿತು. ವಚನ ಗಾಯನ ನಿರ್ವಹಣೆಯನ್ನು ಗೀತಾ ರಾಜಶೇಖರ್ ನೆರವೇರಿಸಿದರೆ, ತೀರ್ಪುಗಾರರಾಗಿ ಆಕಾಶವಾಣಿ ಕಲಾವಿದರಾದ ಶಶಿಕಲಾ ಚಂದ್ರಶೇಖರ ಹಾಗೂ ಡಾ.ಎಂ.ಎನ್. ನಾಗನಂದಿನಿ ಕರ್ತವ್ಯ ನಿರ್ವಹಿಸಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶಾರದಾ ಶಿವಲಿಂಗಸ್ವಾಮಿ, ಪರಿಷತ್ತಿನ ಉಪಾಧ್ಯಕ್ಷರುಗಳಾದ ಚಿನ್ನಸ್ವಾಮಿ, ಎಂ ಎ ನೀಲಾಂಬಿಕಾ, ಇತರ ಎಲ್ಲಾ ಪದಾಧಿಕಾರಿಗಳು, ನೂರಾರು ಕದಳಿ ಮಹಿಳಾ ಬಳಗದ ಹಾಗೂ ಬಸವ ಬಳಗದ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು. ಡಾ.ಶೈಲಾ ನಾಗರಾಜ್ ನಿರೂಪಿಸಿದರು, ಸಭಾ ನಿರ್ವಹಣೆಯನ್ನು ಪರಿಷತ್ತಿನ ಕಾರ್ಯದರ್ಶಿ ಬಿ.ಎನ್.ನಂದೀಶ್ವರ ಅವರು ಮಾಡಿದರೆ, ಡಾ.ಹೆಚ್.ಎನ್.ಲೋಕೇಶಪ್ಪ ವಂದನಾರ್ಪಣೆ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಭಾರತೀ ಟೀಚರ್(ಕ) + ಮನಶಂಕರ ವರಪ್ರಸಾದ್ (ತೆ)	1+3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಮರ್ದಾನಿ–3 (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿತ್ ಲವ್ (ತ)	4 ಪ್ರದರ್ಶನಗಳು
ಸಂಗಂ	
ಕರಿಕಾಡ (ಕ) + ಜೆ.ಸಿ.(ಕ)	2+2 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಸಿಎಪಿಎಫ್‌ಗೆ ಆಯ್ಕೆಯಾದ ಸೈನಿಕ್ ಅಕಾಡೆಮಿ ಅಭ್ಯರ್ಥಿಗಳಿಗೆ ಸನ್ಮಾನ



ಮೈಸೂರು, ಫೆ. 8– ಮೈಸೂರಿನ ಬೆಳವಾಡಿಯಲ್ಲಿ ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತಿರುವ ಸೈನಿಕ್ ಅಕಾಡೆಮಿಯಲ್ಲಿ ವಿವಿಧ ಜಿಲ್ಲೆಗಳಿಂದ ಬಂದು ತರಬೇತಿ ಪಡೆದು, ಸೆಂಟ್ರಲ್ ಆರ್ಮ್‌ಡ್ ಪೊಲೀಸ್ ಫೋರ್ಸ್ (ಎಸ್‌ಎಸ್‌ಸಿ)ಗೆ ಆಯ್ಕೆಯಾದ 18 ಅಭ್ಯರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಿಜಯನಗರ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಜಯಕೀರ್ತಿ, ಅಂತಾರಾಷ್ಟ್ರೀಯ ಮಟ್ಟದ ಕಬಡ್ಡಿ ಮಹಿಳಾ ರೆಫ್ರಿ, ಕರ್ನಾಟಕದ ಮಾಜಿ ಕಬಡ್ಡಿ ಕ್ಯಾಪ್ಟನ್ ಶ್ರೀಮತಿ ಪೂಜಾ ಹೆಚ್.ಎಸ್, ಲಯನ್ಸ್ ಜೀವಧಾರ ಬ್ಲಡ್ ಸೆಂಟರ್‌ನ ಗಿರೀಶ್ ಈ ವೇಳೆ ಉಪಸ್ಥಿತರಿದ್ದರು.

ಮಾಜಿ ಕಮಾಂಡೋ ಮತ್ತು ಸೈನಿಕ್ ಅಕಾಡೆಮಿ ಸಂಸ್ಥಾಪಕರು ಶ್ರೀಧರ ಸಿ ಎಂ, ಸಹ ಸಂಸ್ಥಾಪಕಿ ಅನಿತಾ ಎನ್ ಎಂ, ಅಧ್ಯಾಪಕರು ಸಂತೋಷ, ವಿಜಯ್, ಸ್ವಾಮಿಗೌಡ, ಸಾಕ್ಷಿ ಮತ್ತು ಸಹ ಸಿಬ್ಬಂದಿಗಳು, ಪೋಷಕರು, ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು ಹಾಜರಿದ್ದರು.

ಭಾರತ ಪಂದ್ಯ ಬಹಿಷ್ಕಾರದ ಬಗ್ಗೆ ಐಸಿಸಿ–ಪಿಸಿಬಿ ಮಾತುಕತೆ; ಲಾಹೋರ್‌ಗೆ ತೆರಳಿದ ಬಾಂಗ್ಲಾ ಕ್ರಿಕೆಟ್ ಮಂಡಳಿ ಅಧ್ಯಕ್ಷ!

ನವದೆಹಲಿ: ಫೆಬ್ರವರಿ 15 ರಂದು ಕೊಲಂಬೊದಲ್ಲಿ ನಡೆಯಲಿರುವ ಭಾರತ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವ ಪಾಕಿಸ್ತಾನದ ನಿರ್ಧಾರದ ನಂತರ 2026ರ ಟಿ–20 ವಿಶ್ವಕಪ್ ಇದೀಗ ಮತ್ತೊಂದು ನಾಟಕೀಯ ತಿರುವು ಪಡೆದುಕೊಂಡಿದೆ. ಹೆಚ್ಚುತ್ತಿರುವ ಉದ್ವಿಗ್ನತೆಯನ್ನು ಪರಿಹರಿಸುವ ಪ್ರಯತ್ನದಲ್ಲಿ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ(ಬಿಸಿಬಿ) ಅಧ್ಯಕ್ಷ ಅಮೀನುಲ್ ಇಸ್ಲಾಂ ಬುಲ್ಬುಲ್ ಪಾಕಿಸ್ತಾನ ಕ್ರಿಕೆಟ್ ಮಂಡಳಿ(ಪಿಸಿಬಿ) ಯೊಂದಿಗೆ ನಿರ್ಣಾಯಕ ಸಭೆಗಾಗಿ ಲಾಹೋರ್‌ಗೆ ತೆರಳಿದ್ದಾರೆ. ವಾಸ್ತವದಲ್ಲಿ, ಇಬ್ಬರು ಐಸಿಸಿ ಅಧಿಕಾರಿಗಳು ಕೂಡ ಬಿಸಿಬಿ ಮತ್ತು ಪಿಸಿಬಿ ಎರಡನ್ನೂ ಒಳಗೊಂಡ ಸಭೆಗಾಗಿ ಲಾಹೋರ್‌ಗೆ ತೆರಳುತ್ತಿದ್ದಾರೆ.

ಜೆಎಸ್‌ಎಸ್ ಕಾಲೇಜಿನಲ್ಲಿ ಉದ್ಯೋಗ ಮೇಳ



ಮೈಸೂರು, ಫೆ. 8– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಎಲ್.ಎಸ್.ಇ.ಜಿ. ಫೌಂಡೇಶನ್‌ಗಳ ಸಂಯುಕ್ತಾಶ್ರಯದಲ್ಲಿ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು.

ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಶಿಕ್ಷಣ ಮತ್ತು ಅವಕಾಶಗಳು ವಿದ್ಯಾರ್ಥಿಗಳ ಹಿನ್ನೆಲೆಗೆ ಅನುಗುಣವಾಗಿ ಎಲ್ಲರಿಗೂ ಸಮಾನವಾಗಿ ಲಭ್ಯವಾಗಬೇಕು ಎಂಬ ನಂಬಿಕೆ ನಮ್ಮದು. ಇಂದಿನ ಉದ್ಯೋಗ ಮೇಳವು ಆ ನಂಬಿಕೆಯನ್ನು ಸಾಕಾರಗೊಳಿಸುವ ವೇದಿಕೆಯಾಗಿದ್ದು, ವೈವಿಧ್ಯಮಯ ಜೀವನ ಹಂತಗಳ ವಿದ್ಯಾರ್ಥಿಗಳು ಹಾಗೂ ವೈವಿಧ್ಯತೆಯನ್ನು ಗೌರವಿಸುವ ಕಂಪನಿಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿದೆ. ಉದ್ಯೋಗ ಮೇಳವೆಂದರೆ ಕೇವಲ ಕಾರ್ಯಕ್ರಮವಲ್ಲ, ಅದು ಪ್ರೇರಣೆಯೂ ಹೌದು ಹಾಗೂ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ದೊರೆಯುವ ಸುವರ್ಣಾವಕಾಶವೂ ಹೌದು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಪ್ರಭು ಮಾತನಾಡಿ, ದೇಶದ ಆರ್ಥಿಕ ಪ್ರಗತಿಯಲ್ಲಿ ಉದ್ಯೋಗ ಮಹತ್ವದ ಪಾತ್ರ ವಹಿಸುತ್ತದೆ. ಯುವಜನರು ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸಲು ನೆರವಾಗುವ ಉದ್ದೇಶದಿಂದಲೇ ಈ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ನಿರುದ್ಯೋಗದಿಂದಾಗಿ ಅನೇಕ ದೇಶಗಳ ಅಭಿವೃದ್ಧಿ ಕುಂಠಿತವಾಗುತ್ತಿದೆ. ಹಿಂದೆ ಉದ್ಯೋಗವನ್ನು 'ಉದ್ಯೋಗಂ ಪುರುಷ ಲಕ್ಷಣಂ' ಎಂದು ಕರೆಯಲಾಗುತ್ತಿತ್ತು. ಆದರೆ ಇಂದು ಅದು ಉದ್ಯೋಗಂ ಸರ್ವ ಲಕ್ಷಣವಾಗಿದ್ದು ಎಲ್ಲರಿಗೂ ಅಗತ್ಯವಾಗಿದೆ ಎಂದರು.

ಸಮರ್ಥನಂ ಅಂಗವಿಕಲರ ಸಂಸ್ಥೆಯ ಬೆಂಗಳೂರು ಕೇಂದ್ರದ ಮುಖ್ಯಸ್ಥ ಸುಭಾಷ್ ಚಂದ್ರ ಮಾತನಾಡಿದರು.

ಕಾಲೇಜಿನ ಉದ್ಯೋಗಾಧಿಕಾರಿ ಜಿ. ಕಾರ್ತಿಕ್, ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು, ಪ್ರಾಧ್ಯಾಪಕರಾದ ಡಾ. ಬಿ.ಎಲ್. ಕಿರಣ್, ಡಾ. ಸೌಮ್ಯ, ಸಮರ್ಥನಂ ಸಂಸ್ಥೆಯ ವೀರಭದ್ರ ಪಟೇಲ್, ಮಹಾಂತೇಶ್, ಆರ್. ಸುಬ್ರಮಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. 35ಕ್ಕೂ ಹೆಚ್ಚು ಕಂಪನಿಗಳು ಹಾಗೂ ಸಾವಿರಕ್ಕೂ ಹೆಚ್ಚಿನ ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿದ್ದರು.

ನಾಮಪತ್ರ ಸಲ್ಲಿಕೆ...



ಮಾರ್ಚ್ 11ರಂದು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ನಡೆಯಲಿರುವ ಚುನಾವಣೆಗೆ ಮೈಸೂರಿನ ವಕೀಲರ ಸಂಘದ ಮಾಜಿ ಅಧ್ಯಕ್ಷ, ಹಿರಿಯ ವಕೀಲ ಸಿ.ಅಪ್ಪಾಜಿಗೌಡರು ಸದಸ್ಯ ಸ್ಥಾನಕ್ಕೆ ಸಾವಿರಾರು ಬೆಂಬಲಿಗರೊಂದಿಗೆ ಕರ್ನಾಟಕ ವಕೀಲರ ಪರಿಷತ್ತಿನ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಅವರಿಗೆ ರಾಜ್ಯದ ಹಲವು ವಕೀಲರ ಸಂಘಗಳ ಸದಸ್ಯರು ಬೆಂಬಲ ಸೂಚಿಸಿದರು.

ವಿದ್ಯಾವರ್ಧಕ ಪಾಲಿಟೆಕ್ನಿಕ್‌ನಲ್ಲಿ ರಕ್ತದಾನ ಶಿಬಿರ



ಮೈಸೂರು, ಫೆ. 8– ವಿದ್ಯಾವರ್ಧಕ ಪಾಲಿಟೆಕ್ನಿಕ್‌ನ ಎನ್‌ಎಸ್‌ಎಸ್ ಘಟಕದ ವತಿಯಿಂದ ಜಯದೇವ ಹೃದ್ರೋಗ ಆಸ್ಪತ್ರೆ, ಮೈಸೂರು ಹಾಗೂ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ಕೆ. ರಾಮಕೃಷ್ಣಪ್ಪ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಶಿಬಿರವನ್ನು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಉದ್ಘಾಟಿಸಿದರು. ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಜಯದೇವ ಹೃದ್ರೋಗ ಆಸ್ಪತ್ರೆ ರಕ್ತನಿಧಿ ಅಧಿಕಾರಿ ಡಾ॥ ರಶ್ಮಿ, ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಗೌರವ ಅಧ್ಯಕ್ಷೆ ಶ್ರೀಮತಿ ಸಾಯಿಲತ ಪ್ರಿಯಂತ್, ಸಂಘದ ಖಜಾಂಚಿ ಶ್ರೀಶೈಲ್ ರಾಮಣ್ಣವರ್, ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಶ್ರೀಮತಿ ಲಲಿತ ರಾಮಣ್ಣವರ್, ಪ್ರಾಂಶುಪಾಲ ಡಾ॥ ಕೃಷ್ಣ ಮತ್ತು ಎನ್.ಎಸ್.ಎಸ್. ಮತ್ತು ಯೂತ್, ರೆಡ್‌ಕ್ರಾಸ್ ಅಧಿಕಾರಿ ರಾಕೇಶ್ ಬಾಬು ಡಿ.ಸಿ. ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಸಭೆ



ಮೈಸೂರು ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮಾವಿನಹಳ್ಳಿ ಸಿ.ರವಿ ಅಧ್ಯಕ್ಷತೆಯಲ್ಲಿ ಎಂಟು ವಿಧಾನಸಭಾ ಕ್ಷೇತ್ರಗಳ ಪ್ರಚಾರ ಸಮಿತಿ ಅಧ್ಯಕ್ಷರ ಜೊತೆ ಸಭೆ ನಡೆಯಿತು. ಪುಟ್ಟರಾಜು, ಸಂತೋಷ್‌ಕುಮಾರ್, ರವಿಕುಮಾರ್, ಅನಿಲ್, ಗಣಪತಿ, ರಾಮೇಗೌಡ, ಕುಮಾರ್, ಗಂಗಾಧರ್, ಸಿದ್ಧಶೆಟ್ಟಿ, ಲೋಕೇಶ್, ಬೈರೇಗೌಡ, ಮಲ್ಲೇಶ್, ಸ್ವಾಮಿಗೌಡ, ನಾಗರಾಜು, ನದೀಮ್, ಬಸವರಾಜ್, ಶಿವಕುಮಾರ್, ಚೆನ್ನಪ್ಪ, ಶರತ್, ಸದಾಶಿವ, ದಿನೇಶ್ ಸಭೆಯಲ್ಲಿ ಭಾಗವಹಿಸಿದ್ದರು.

ಶ್ರೀ ಮಹಾಂತ ಸ್ವಾಮೀಜಿ 37ನೇ ಪುಣ್ಯಾರಾಧನೆ

ಮೈಸೂರು: ತಾಲೂಕಿನ ಜಯಪುರ ಹೋಬಳಿಯ ಬರಡನಪುರ ಗ್ರಾಮದ ಗುರು ಮಹಂತೇಶ್ವರ ಮಠದಲ್ಲಿ ಶ್ರೀ ಮಹಾಂತ ಸ್ವಾಮೀಜಿಯ 37ನೇ ಪುಣ್ಯಾರಾಧನೆ ನಡೆಯಿತು.

ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ ನೆರವೇರಿಸಲಾಯಿತು. ಗುರು ಮಹಂತೇಶ್ವರ ಮಠದ ಪೀಠಾಧ್ಯಕ್ಷರಾದ ಶ್ರೀ ಪರಶಿವ ಮೂರ್ತಿ ಸ್ವಾಮೀಜಿ ಅವರಿಗೆ ಕಿರಿಯ ಶ್ರೀಗಳಾದ ಚನ್ನ ಬಸವ ಸ್ವಾಮೀಜಿ ಪಾದಪೂಜೆ ಮಾಡಿದರು.



ಬರಡನಪುರ ಗ್ರಾಮಸ್ಥರು ಮತ್ತು ಭಕ್ತರು ಪರಶಿವಮೂರ್ತಿ ಸ್ವಾಮೀಜಿಯವರಿಗೆ ಪುಷ್ಪಾಭಿಷೇಕ ಮಾಡಿದರು. ಮಲೆ ಮಹದೇಶ್ವರಬೆಟ್ಟ ಸಾಲೂರು ಬೃಹನ್ಮಠದ ಪೀಠಾಧಿಪತಿ ಡಾ.ಶಾಂತಮಲ್ಲಿಕಾರ್ಜುನ ಸ್ವಾಮೀಜಿಯವರಿಗೆ ದಿವ್ಯ ಪಾದ ಪೂಜೆ ಮಾಡಿದರು. ಶಿವಭಜನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಹರಗುರು ಚರಮೂರ್ತಿಗಳು, ವಿವಿಧ ಮಠಗಳ ಸ್ವಾಮೀಜಿಗಳು, ರಾಜಕೀಯ ಮುಖಂಡರು, ಅಖಿಲ ಭಾರತ ವೀರಶೈವ ಮಹಾಸಭೆ ಮೈಸೂರು ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳು, ವಿವಿಧ ಸಂಘಟನೆಗಳ ಸದಸ್ಯರು, ಮಠದ ಭಕ್ತರು ಪುಣ್ಯಾರಾಧನೆಯಲ್ಲಿ ಭಾಗವಹಿಸಿದ್ದರು. ಭಕ್ತರಿಗೆ ಮಹಾಪ್ರಸಾದ ವಿನಿಯೋಗ ಮಾಡಿದರು.

ಸುನಾಮಿ ಸ್ವಿಂಗ್ ಕುಸಿದು ಇನ್ಸ್‌ಪೆಕ್ಟರ್ ದುರ್ಮರಣ; 13 ಜನರಿಗೆ ಗಾಯ

ಫರಿದಾಬಾದ್(ಹರಿಯಾಣ): ಪ್ರಸಿದ್ಧ ಸೂರಜ್‌ಕುಂಡ್ ಕರಕುಶಲ ಮೇಳದಲ್ಲಿ 'ಸುನಾಮಿ ಸ್ವಿಂಗ್'(ದೈತ್ಯ ಜಾಯಿಂಟ್ ವ್ಹೀಲ್) ಕುಸಿದು ಬಿದ್ದು, ಜನರ ರಕ್ಷಣೆಗೆ ದಾವಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ದುರ್ಮರಣಕ್ಕೀಡಾಗಿರುವ ಆಘಾತಕಾರಿ ಘಟನೆ ಶನಿವಾರ ಸಂಜೆ ನಡೆದಿದೆ. ಮೇಳದಲ್ಲಿ ಅಳವಡಿಸಲಾಗಿದ್ದ ಜಾಯಿಂಟ್ ವ್ಹೀಲ್‌ನಲ್ಲಿ ಜನರು ಕುಳಿತು ಖುಷಿಪಡುತ್ತಿದ್ದರು. ಈ ವೇಳೆ ಅದರ ಒಂದು ಭಾಗ ಇದ್ದಕ್ಕಿದ್ದಂತೆ ಮುರಿಯಲಾರಂಭಿಸಿತು. ಇದನ್ನು ಗಮನಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ಜಗದೀಶ್ ಪ್ರಸಾದ್, ಜನರ ರಕ್ಷಣೆಗೆ ದಾವಿಸಿದರು. ಆಗ ವ್ಹೀಲ್‌ನ ದೊಡ್ಡ ಭಾಗ ನೇರವಾಗಿ ಇನ್ಸ್‌ಪೆಕ್ಟರ್ ತಲೆ ಮತ್ತು ಮುಖಕ್ಕೆ ಬಲವಾಗಿ ಅಪ್ಪಳಿಸಿದೆ. ಪರಿಣಾಮ ತೀವ್ರ ರಕ್ತಸ್ರಾವದಿಂದ ಕುಸಿದು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಒಟ್ಟು 13 ಜನರು ಗಾಯಗೊಂಡಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಅವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ.

ಗಾಂಧೀಜಿ, ಅಂಬೇಡ್ಕರ್ ಬದುಕು ನಿದರ್ಶನವಾದರೆ, ಅವರ ಅನುಯಾಯಿಗಳದ್ದು ಬರೀ ಪ್ರದರ್ಶನ

ವಿಚಾರ ಸಂಕಿರಣದಲ್ಲಿ ಸಂಸ್ಕೃತಿ ಚಿಂತಕ ಶಂಕರ್ ದೇವನೂರು ವಿಷಾದ

ಮೈಸೂರು,ಫೆ.8(ಎಂಕೆ)–ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು ನಿದರ್ಶನವಾದರೆ, ಅವರ ಅನುಯಾಯಿಗಳದ್ದು ಬರೀ ಪ್ರದರ್ಶನವಾಗಿದೆ ಎಂದು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ತೀವ್ರ ವಿಷಾದ ವ್ಯಕ್ತಪಡಿಸಿದರು.



ಯುವ ಜನತೆಗಾಗಿ ಗಾಂಧಿ ಮತ್ತು ಅಂಬೇಡ್ಕರ್ ಸಿದ್ಧಾಂತಗಳು ಕುರಿತ ವಿಚಾರ ಸಂಕಿರಣವನ್ನು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ಉದ್ಘಾಟಿಸಿದರು.

ಮೈಸೂರು ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಭಾನುವಾರ ಆಯೋಜಿಸಿದ್ದ ಯುವ ಜನತೆಗಾಗಿ ಗಾಂಧಿ ಮತ್ತು ಅಂಬೇಡ್ಕರ್ ಸಿದ್ಧಾಂತಗಳು ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ ರಾಷ್ಟ್ರಪಿತರಾದರೆ, ಡಾ.ಬಿ.ಆರ್.ಅಂಬೇಡ್ಕರ್ ರಾಷ್ಟ್ರಮಾತೆ. ದೇಶದ ಪ್ರತಿಯೊಬ್ಬರಿಗೆ ನಿದರ್ಶನವಾಗಿರುವ ಅವರನ್ನು ಪ್ರತಿಮೆಯಲ್ಲಿ ಕೂಡಿಡುತ್ತಿದ್ದೇವೆ. ನಮ್ಮದು ಅನುಸರಣೆಯಾಗದೆ, ಬರೀ ಪ್ರದರ್ಶನವಾಗಿರುವುದು ಜಗತ್ತಿನ ದೊಡ್ಡ ದುರಂತ ಎಂದರು.

ಅಂಬೇಡ್ಕರ್ ದಿನದ 14 ಗಂಟೆಗಳ ಕಾಲ ಓದುತ್ತಿದ್ದರು. ಅವರ ಬಳಿ ಸುಮಾರು 50 ಸಾವಿರ ಪುಸ್ತಕಗಳಿತ್ತು. ಆದರೆ, ನಾವುಗಳು ಓದಿನ ವಿರೋಧಿಗಳಾಗಿದ್ದೇವೆ. ಶಿಕ್ಷಣದ ವಿಷಯದಲ್ಲಿ ನಿಮ್ಮ ಹೃದಯದ ಕಿವಿ ತೆರೆದರೆ ಸಾಲದು ಅದು ಕೇಳಬೇಕು, ಕಣ್ಣು ತೆರೆದರೆ ಸಾಲದು ನೋಡುವುದನ್ನೂ ಕಲಿಯಬೇಕು ಎಂದರು.

ಮಹಾತ್ಮ ಗಾಂಧಿ ಸತ್ಯದ ಪರವಾಗಿದ್ದರು. ಅಂಬೇಡ್ಕರ್ ಮತ್ತು ಗಾಂಧಿ ನಡುವೆ ಕೆಲ ವಿಚಾರ ವೈರುಧ್ಯ ಇರಬಹುದು. ಆದರೆ, ಪ್ರಸ್ತುತ ಸಮಾಜಕ್ಕೆ ಬೇಕಾಗಿರುವುದು ಸೌಹಾರ್ದತೆ. ಅದು ಯಾರ ಪರವೂ ಅಲ್ಲ, ವಿರೋಧವೂ ಅಲ್ಲ. ನಾಸ್ತಿಕವಾದವೂ ಅಲ್ಲ. ಆಸ್ತಿಕವಾದವೂ ಅಲ್ಲ. ಆದರೆ ನಾವು ಇಂದು ಸತ್ಯಕ್ಕೆ ಸಾಕ್ಷಿ ಕೇಳುವ ಕಾಲಘಟ್ಟದಲ್ಲಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಯುವ ಜನತೆಗಾಗಿ ಅಂಬೇಡ್ಕರ್ ತತ್ತ್ವಗಳು ಕುರಿತು ಸಹಾಯಕ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿ ಚಮರಂ ಮಾತನಾಡಿ, ಅಂಬೇಡ್ಕರ್ ಅವರನ್ನು ದಲಿತ ನಾಯಕ, ದಲಿತರಿಗೆ ಮೀಸಲಾತಿ ನೀಡಿದ್ದಾಗಿ ಹೇಳಿ ದಾರಿ ತಪ್ಪಿಸಲಾಗುತ್ತಿದೆ. ಆದರೆ ಅವರು ಎಲ್ಲರಿಗೂ ಮೀಸಲಾತಿ ಕಲ್ಪಿಸಿದ್ದಾರೆ ಎಂಬುದನ್ನು ಮರೆಯಬಾರದು ಎಂದರು.

ಬಳಿಕ ಯುವ ಜನತೆಗಾಗಿ ಗಾಂಧಿ ತತ್ತ್ವಗಳು ಕುರಿತು ಉಪನ್ಯಾಸಕಿ ಡಾ.ಬಿ.ಎಸ್. ದಿನಮಣಿ ಮಾತನಾಡಿದರೆ, ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳ ಸಮನ್ವಯ ಕುರಿತು ಈ.ಧನಂಜಯ ಎಲಿಯೂರು ವಿಚಾರ ಮಂಡಿಸಿದರು. ಶಾಂತಲಾ ಕಲಾ ತಂಡದ ಅಧ್ಯಕ್ಷ ವೆಂಕಟರಾಜು ಅಧ್ಯಕ್ಷತೆ ವಹಿಸಿದ್ದರು. ಕೃಷ್ಣ ಜನಮನ ಮತ್ತಿತರರಿದ್ದರು.

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ, ಹತ್ಯೆ ಪ್ರಕರಣ

ಮೂವರು ಆರೋಪಿಗಳಿಗೆ ಮರಣದಂಡನೆ ಶಿಕ್ಷೆ ದೃಢಪಡಿಸಿ ಹೈಕೋರ್ಟ್ ಮಹತ್ವದ ತೀರ್ಪು

ಬೆಂಗಳೂರು: ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಮಧ್ಯಪ್ರದೇಶ ಮತ್ತು ಜಾರ್ಖಂಡ್‌ನ ಮೂವರು ಆರೋಪಿಗಳಿಗೆ ಮಂಗಳೂರಿನ ವಿಚಾರಣಾ ನ್ಯಾಯಾಲಯವು ವಿಧಿಸಿದ್ದ ಮರಣದಂಡನೆಯನ್ನು ದೃಢಪಡಿಸಿದ ಹೈಕೋರ್ಟ್, ಗಲ್ಲು ಶಿಕ್ಷೆ ವಿಧಿಸಿ ಆದೇಶ ನೀಡಿದೆ.

ದುಷ್ಕೃತ್ಯವೆಸಗಿದ್ದವರಿಗೆ ಗಲ್ಲು ಶಿಕ್ಷೆಯೇ ಗತಿ



ಮಂಗಳೂರಿನಲ್ಲಿ ನಡೆದ ಈ ಪ್ರಕರಣ ಸಂಬಂಧ 2024ರ ಅಕ್ಟೋಬರ್ 29 ಮತ್ತು ನವೆಂಬರ್ 7ರಂದು ವಿಚಾರಣಾ ನ್ಯಾಯಾಲಯವು ನೀಡಿದ ಶಿಕ್ಷೆ ಮತ್ತು ಮರಣ ದಂಡನೆ ಆದೇಶಗಳನ್ನು ಪ್ರಶ್ನಿಸಿ ಆರೋಪಿಗಳು ಸಲ್ಲಿಸಿದ್ದ ಮೇಲ್ಮನವಿಗಳನ್ನು ವಜಾಗೊಳಿಸಿದ ನ್ಯಾಯಮೂರ್ತಿಗಳಾದ ಹೆಚ್.ಪಿ.ಸಂದೇಶ್ ಮತ್ತು ವೆಂಕಟೇಶ್ ನಾಯಕ್ ಟಿ.ಅವರ ವಿಭಾಗೀಯ ಪೀಠವು ಮಹತ್ವದ ತೀರ್ಪು ನೀಡಿದೆ.

ಆರೋಪಿಗಳಾದ ಮಧ್ಯಪ್ರದೇಶದ ಜೈಬನ್ ಆದಿವಾಸಿ (27), ಮುಖೇಶ್ ಸಿಂಗ್ (25) ಮತ್ತು ಜಾರ್ಖಂಡ್‌ನ ಮನೀಶ್ ತಿರ್ಕಿ (44)ಗೆ ಐಪಿಸಿ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗೆ ಒಟ್ಟು 1.20 ಲಕ್ಷ ರೂ. ದಂಡ ವಿಧಿಸಲಾಗಿದೆ. ಏಳು ವರ್ಷ 7 ತಿಂಗಳ ಬಾಲಕಿ ಮೇಲೆ ಅತ್ಯಾಚಾರ ವೆಸಗಿ, ಕೊಲೆ ಮಾಡಲಾಗಿದೆ. ಇದು ಒಟ್ಟಾರೆ ಸಮಾಜದ ವಿರುದ್ಧದ ಅಪರಾಧವಲ್ಲದೆ ಬೇರೇನೂ ಅಲ್ಲ. ಕಡಿಮೆ ಶಿಕ್ಷೆ ವಿಧಿಸಿದರೆ, ಅದು ಸಮಾಜಕ್ಕೆ ಮತ್ತು ಸಾರ್ವಜನಿಕರಿಗೆ ತಪ್ಪು ಸಂದೇಶವನ್ನು ನೀಡುತ್ತದೆ. ಇಂತಹ ಕೃತ್ಯವನ್ನು ಸಮಾಜದಲ್ಲಿ ನಿಗ್ರಹಿಸಬೇಕು. ಆದ್ದರಿಂದ, ವಿಚಾರಣಾ ನ್ಯಾಯಾಲಯವು ಮರಣ ದಂಡನೆ ವಿಧಿಸುವಲ್ಲಿ ಯಾವುದೇ ತಪ್ಪನ್ನು ಮಾಡಿಲ್ಲ ಎಂದು ನಾವು ಭಾವಿಸುತ್ತೇವೆ ಮತ್ತು ವಿಚಾರಣಾ ನ್ಯಾಯಾಧೀಶರು ಕೋರಿದಂತೆ ಇದಕ್ಕೆ ದೃಢೀಕರಣದ ಅಗತ್ಯವಿದೆ ಎಂದು ಹೈಕೋರ್ಟ್ ತೀರ್ಪು ನೀಡಿದೆ. ಮಂಗಳೂರಿನ ವಾಮಂಜೂರು ಬಳಿಯ ಟೈಲ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳು, ಇನ್ನೋರ್ವನ ಜೊತೆ ಸೇರಿ ಅದೇ ಕಾರ್ಖಾನೆಯ ಕಾರ್ಮಿಕನ ಮಗಳ ಮೇಲೆ ಅತ್ಯಾಚಾರವೆಸಗಲು ಸಂಚು ರೂಪಿಸುತ್ತಿದ್ದರು. 2021ರ ನ.21ರಂದು ಕಾರ್ಖಾನೆಯಲ್ಲಿ ಕೆಲಸಕ್ಕೆ ರಜೆ ಇದ್ದಾಗ ಆರೋಪಿಗಳು, ಬಾಲಕಿ ಮೇಲೆ ಅತ್ಯಾಚಾರವೆಸಗಿ, ನಂತರ ಆಕೆಯನ್ನು ಹತ್ಯೆ ಮಾಡಿ, ಶವವನ್ನು ಚರಂಡಿಗೆ ಎಸೆದು ಹೋಗಿದ್ದರು.

ಜಿಲ್ಲಾಧಿಕಾರಿಗಳ ಖಾತೆಯಲ್ಲಿರುವ ಗ್ರಾಹಕ ಜಾಗೃತಿ ಹಣ ವಾಲ್ಮೀಕಿ ನಿಗಮದಂತೆ ದುರ್ಬಳಕೆ ಆಗಬಹುದೇ..?



ಮೈಗ್ರಾಪ ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಗ್ರಾಹಕ ಪರಿಹಾರ ಆಯೋಗದ ಅಧ್ಯಕ್ಷೆ ನವೀನ್‌ಕುಮಾರಿ ಮಾತನಾಡುತ್ತಿರುವುದು.

ಮೈಸೂರು, ಫೆ.8(ಎಸ್‌ಪಿಎನ್)– ಗ್ರಾಹಕ ಹಕ್ಕು ಮತ್ತು ಕಾನೂನು ಕುರಿತು ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಮೀಸಲಿಟ್ಟಿರುವ ಹಣವನ್ನು ಬಳಸಿ ಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಇಲ್ಲಿಯೂ ವಾಲ್ಮೀಕಿ ನಿಗಮದಲ್ಲಾದಂತೆ ಹಣ ದುರುಪಯೋಗವಾಗಬಹುದೇ ಎಂದು ಮೈಸೂರು ಜಿಲ್ಲಾ ಗ್ರಾಹಕ ಪರಿಹಾರ ಆಯೋಗದ ಅಧ್ಯಕ್ಷೆ ನವೀನ್ ಕುಮಾರಿ ಸಂಶಯ ವ್ಯಕ್ತಪಡಿಸಿದ್ದಾರೆ.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿ ಆವರಣದಲ್ಲಿ ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಮೈಗ್ರಾಪ ಸಾಮಾನ್ಯ ಸಭೆಯಲ್ಲಿ ಗ್ರಾಹಕ ಕಾಯ್ದೆ ಹಾಗೂ ಇದರ ಉಪಯೋಗದ ಕುರಿತು ಮಾಹಿತಿ ನೀಡುವ ವೇಳೆ ಅವರು ಅನುಮಾನ ವ್ಯಕ್ತಪಡಿಸಿದ್ದಾರೆ.

ಶಾಲಾ–ಕಾಲೇಜು ಹಾಗೂ ಪ್ರತಿ ಹಳ್ಳಿಗಳಿಗೆ ಭೇಟಿ ನೀಡಿ, ಗ್ರಾಹಕ ಕಾನೂನು ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸಬೇಕಿದೆ. ಇದಕ್ಕಾಗಿ ಗ್ರಾಹಕ ಪರಿಹಾರ ಆಯೋಗದಲ್ಲಿ ಹಣವಿಲ್ಲ, ಇಂತಹ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಜಿಲ್ಲಾಧಿಕಾರಿಗಳ ಖಾತೆಯಲ್ಲಿ 80 ಲಕ್ಷ ರೂ.ಗಳಿಗೂ ಹೆಚ್ಚುವರಿ ಹಣ ಮೀಸಲಿರಿಸಲಾಗಿದೆ. ಆದರೆ ಜಿಲ್ಲಾಧಿಕಾರಿಗಳು ಹಣವನ್ನು ಸಮರ್ಪಕವಾಗಿ ಬಳಕೆ ಮಾಡುತ್ತಿಲ್ಲ. ಇದರಿಂದ ಭವಿಷ್ಯದಲ್ಲಿ ವಾಲ್ಮೀಕಿ ನಿಗಮದಲ್ಲಿ ಆದಂತೆ ದೊಡ್ಡ ಹಗರಣ ಆಗುವ ಸಾಧ್ಯತೆಗಳು ಇಲ್ಲೂ ಇರಬಹುದು ಎಂದು ಎಚ್ಚರಿಸಿದರು.

ವಕೀಲರಿಲ್ಲದೆ ಇತ್ಯರ್ಥ: ರಾಜ್ಯಾದ್ಯಂತ ರಾಜ್ಯ ಗ್ರಾಹಕ ಪರಿಹಾರ ಆಯೋಗ, ಇಂದು ಸಿವಿಲ್ ನ್ಯಾಯಾಲಯಗಳಾಗಿ ಪರಿವರ್ತಿತವಾಗಿವೆ. ಸಿವಿಲ್ ನ್ಯಾಯಾಲಯಗಳು ಪ್ರಕರಣಗಳನ್ನು ಮುಂದೂಡುತ್ತಿರುತ್ತವೆ. ಮುಂದೂಡದೇ ಇತ್ಯರ್ಥವಾಗಿರುವ ಪ್ರಕರಣಗಳು ಬೆರಳಣಿಕೆ. ಅಲ್ಲದೇ 90 ದಿನಗಳೊಳಗಾಗಿ ಪ್ರಕರಣಕ್ಕೆ ತೀರ್ಪು ದೊರೆಯುತ್ತಿಲ್ಲ ಎಂಬ ಬಾಮೀ ಶೆಣೈ ಅವರ ಪ್ರಶ್ನೆಗೆ ಉತ್ತರಿಸಿ, ಗ್ರಾಹಕ ನ್ಯಾಯಾಲಗಳು ಸಿವಿಲ್ ನ್ಯಾಯಾಲಯಗಳಾಗಿಲ್ಲ. ಕೆಲವು ಪ್ರಕರಣಗಳು 30 ದಿನಗಳಲ್ಲಿ ಇತ್ಯರ್ಥವಾಗಿರುವ ಉದಾಹರಣೆಯಿದೆ. ಇನ್ನೂ ಕೆಲವು ಹೆಚ್ಚು ಸಮಯ ಹಿಡಿದಿದೆ. ಹಾಗಂತ ಇಷ್ಟೇ ಸಮಯದಲ್ಲಿ ಪ್ರಕರಣ ಬಗೆಹರಿಬೇಕೆಂಬುದು ಒತ್ತಾಯಿಸಿದರೆ ಅದು ಸಾಧ್ಯವಿಲ್ಲ ಎಂದರು.

ಗ್ರಾಹಕರ ದಿನ ಆಚರಿಸಲು ಹಣವಿಲ್ಲ: ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ರಾಜ್ಯ ಗ್ರಾಹಕ ಪರಿಹಾರ ಆಯೋಗ ಮತ್ತು ಇತರೆ ಇಲಾಖೆಗಳೊಂದಿಗೆ ಮಾ.15ರಂದು 'ಅಂತರರಾಷ್ಟ್ರೀಯ ಗ್ರಾಹಕ ದಿನ' ಆಚರಿಸಲು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತದೆ. ಆದರೆ, ಈ ಹಣ ವೆಚ್ಚ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಆದರೆ, ಜಿಲ್ಲಾಧಿಕಾರಿಗಳು ಅನುದಾನ ಬಿಡುಗಡೆ ಮಾಡುತ್ತಿಲ್ಲ. ಈ ಅನುದಾನದಲ್ಲಿ ಜಿಲ್ಲಾ ಗ್ರಾಹಕ ಪರಿಹಾರ ಆಯೋಗದ ಮೂಲಸೌಕರ್ಯಕ್ಕಾಗಿ ಅನುದಾನ ಬಳಸಿಕೊಳ್ಳಲು ಪ್ರತ್ಯೇಕ ಅನುದಾನ ನೀಡುವಂತೆ ರಾಜ್ಯ ಗ್ರಾಹಕ ಪರಿಹಾರ ಆಯೋಗಕ್ಕೆ ಮನವಿ ಮಾಡಿದ್ದೇವೆ ಎಂದರು.

ಕಾಲೇಜು ಹಂತದಲ್ಲಿ ಜಾಗೃತಿ ಮುಖ್ಯ: ಮೈಸೂರು ಜಿಲ್ಲೆ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಉದಯ್‌ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ 3,500ಕ್ಕೂ ಹೆಚ್ಚು ಶಾಲೆಗಳಿವೆ, ಗ್ರಾಹಕ ಹಕ್ಕುಗಳ ಕುರಿತಾಗಿ 6ನೇ ತರಗತಿ ಮೇಲ್ಪಟ್ಟ ಮಕ್ಕಳಿಗೆ ಜಾಗೃತಿ ಮೂಡಿಸಬಹುದಾಗಿದೆ. ಅದಕ್ಕೆ ಬೇಕಾದ ತರಬೇತಿ, ವಿವಿಧ ರೀತಿಯಲ್ಲಿ ತಯಾರಿ ನಡೆಸಲು ಸಾಧ್ಯವಿದೆ. ಜಾಗೃತಿ ಕಾರ್ಯಕ್ರಮಗಳನ್ನು ಶಾಲೆಗಳಿಂತ ಹೆಚ್ಚಾಗಿ ಕಾಲೇಜು ಹಂತಗಳಲ್ಲಿ ಜಾಗೃತಿಗಳು ಮೂಡಿಸಬೇಕಿದೆ. ಪೋಷಕರೂ ಕೂಡ ಕಾಲೇಜು ವಿದ್ಯಾರ್ಥಿಗಳಿಗೆ ಹಣ ವೆಚ್ಚ ಮಾಡುವ ಅಧಿಕಾರ ನೀಡಿರುತ್ತಾರೆ. ಗ್ರಾಹಕರ ಕಾಯ್ದೆ ಕುರಿತು ಈ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು ಎಂದರು.

ಸಭೆಯಲ್ಲಿ ಎಕ್ಸೆಲ್ ಸ್ಕೂಲ್‌ನ ಮ್ಯಾಥ್ಯೂ, ಲಯನ್ಸ್ ಸೇವಾನಿಕೇತನದ ಡಾ.ಕರುಂಬಯ್ಯಾ, ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಣಬ್ ನಾಯರ್, ವಸಂತ ಕುಮಾರ್ ಮೈಸೂರು ಮಠ್, ಪಿ.ರಾಕೇಶ್, ಡಿ.ವಿ.ದಯಾನಂದ ಸಾಗರ್, ಮಾಳವಿಕ ಗುಬ್ಬಿವಾಣಿ, ಎಸ್.ಉಷಾ, ವೈ.ಎಸ್. ಅಶೋಕ್, ಸ್ಪಂದನ, ಜಿ.ಗೀತಾ, ಕೆ.ಬಿ. ರಘು, ವಿಜಯ್ ಶ್ರೀನಿವಾಸ, ವಿದ್ಯಾವರ್ಧಕ ಲಾ ಕಾಲೇಜಿನ ಪ್ರಾಧ್ಯಪಕಿ ಡಾ.ಪ್ರಕೃತಿ, ರವೀಂದ್ರ ಎಚ್.ಎನ್.ರಮೇಶ್, ವಿ.ಸ್. ಸೀತಾರಾಮ್, ಎನ್.ಎಂ.ಅನನ್ಯ, ಎಸ್.ಉಷಾ ಸೇರಿದಂತೆ ಇತರರಿದ್ದರು.

ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಕೆ...



ಮೈಸೂರು ಮಹಾನಗರ ಪಾಲಿಕೆಯ ಈ ಬಾರಿ ಬಜೆಟ್‌ನಲ್ಲಿ ನಗರದ ಪಾರ್ಕ್‌ಗಳಲ್ಲಿ ಶ್ರೀಗಂಧ ಮರಗಳ ರಕ್ಷಣೆಗೆ, ವಿಶೇಷ ಮಕ್ಕಳನ್ನು ಹೊಂದಿರುವ ಕುಟುಂಬಗಳಿಗೆ ಧನ ಸಹಾಯ ನೀಡಲು, ಬಡವರಿಗೆ ನೀಡುವ ವೈದ್ಯಕೀಯ ಸಹಾಯಧನವನ್ನು 15ರಿಂದ 25 ಸಾವಿರ ರೂ.ಗೆ ಹೆಚ್ಚಿಸಲು ಹಾಗೂ ಕಂದಾಯ ಹೆಚ್ಚಿಸದೇ ಸಾಮಾನ್ಯ ಜನತೆಗೆ ಹೊರೆಯಾಗದಂತೆ ಬಜೆಟ್ ರೂಪಿಸಬೇಕೆಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರಿಗೆ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಪಡುವಾರಹಳ್ಳಿ ಕುಮಾರ್, ಒಂಟಿಕೊಪ್ಪಲು ಸತೀಶ್, ಗೋಕುಲಂ ರಾಮಕೃಷ್ಣ, ಗಾಯತ್ರಿಪುರಂ ಅವಿನಾಶ್ ಉಪಸ್ಥಿತರಿದ್ದರು.

ಚಿನ್ನದ ಓಲೆ ಸಿಕ್ಕಿದ್ದ ಜಾಗದಲ್ಲಿ ಐದು ಸಾವಿರ ವರ್ಷ ಹಳೆಯ ಮಾನವ ಅಸ್ಥಿ ಪಂಜರ ಪತ್ತೆ

ಬಳ್ಳಾರಿ: ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಬಳಿ ನಡೆದ ಇತ್ತೀಚಿನ ಉತ್ಖನನವು ಕರ್ನಾಟಕದ ಇತಿಹಾಸಪೂರ್ವ ಕಾಲದ ಮೇಲೆ ಹೊಸ ಬೆಳಕು ಚೆಲ್ಲಿದೆ.

ಅಮೆರಿಕದ ಹಾರ್ಟ್‌ವಿಕ್ ಕಾಲೇಜಿನ ಮಾನವಶಾಸ್ತ್ರ ವಿಭಾಗದ ಸಹ–ಪ್ರಾಧ್ಯಾಪಕಿ ಡಾ.ನಮಿತಾ ಸುಗಂಧಿ ನೇತೃತ್ವದಲ್ಲಿ ನಡೆದ ಉತ್ಖನನದ ವೇಳೆ ಸುಮಾರು 5.5 ಅಡಿ ಉದ್ದದ ಪೂರ್ಣ ಪ್ರಮಾಣದ ಮಾನವ ಅಸ್ಥಿಪಂಜರ ಪತ್ತೆಯಾಗಿದೆ. ಈ ಪಳೆಯುಳಿಕೆಗಳು ಸುಮಾರು 5,000 ವರ್ಷಗಳಷ್ಟು ಹಳೆಯದು ಎಂದು ಅಂದಾಜಿಸಲಾಗಿದೆ. ಇದು ನವಶಿಲಾಯುಗಕ್ಕೆ ಸೇರಿದ ಕುರುಹಾಗಿದೆ. ಅಸ್ಥಿಪಂಜರದ ಮೇಲೆ ಕಲ್ಲುಗಳನ್ನು ಇಟ್ಟು ಸಂಸ್ಕಾರ ಮಾಡಿರುವುದು ಕಂಡುಬಂದಿದ್ದು, ಇದು ಆ ಕಾಲದ ಸಂಸ್ಕೃತಿ ಮತ್ತು ಆಚರಣೆಗಳನ್ನು ಪ್ರತಿಬಿಂಬಿಸುತ್ತದೆ.



ಅಸ್ಥಿಪಂಜರದ ಸುತ್ತಲೂ ಪ್ರಾಚೀನ ಕಾಲದ ಮಡಿಕೆ ಚೂರುಗಳು ಮತ್ತು ಕಲ್ಲಿನ ಆಯುಧಗಳು ದೊರೆತಿವೆ. ತೆಕ್ಕಲಕೋಟೆಯು ಭಾರತದ ಅತ್ಯಂತ ಹಳೆಯ ನವಶಿಲಾಯುಗದ ನೆಲೆಗಳಲ್ಲಿ ಒಂದಾಗಿದ್ದು, ಈ ಹಿಂದೆ ಇಲ್ಲಿ ಚಿನ್ನದ ಕಿವಿಯೋಲೆಗಳು ಪತ್ತೆಯಾಗಿದ್ದವು. ಈ ಪ್ರದೇಶದಲ್ಲಿ ನವಶಿಲಾಯುಗದಿಂದ ಹಿಡಿದು ವಿಜಯನಗರ ಕಾಲದವರೆಗೂ ಮಾನವ ವಸತಿ ಇದ್ದಿದ್ದಕ್ಕೆ ಪುರಾವೆಗಳಿವೆ.

ಹೈಕಮಾಂಡ್ ಸುಮ್ಮನಿದ್ದರೆ ಏನೆಂದು ಅರ್ಥ ಮಾಡಿಕೊಳ್ಳೋದು

ಮುಖ್ಯಮಂತ್ರಿ ಪಟ್ಟ ಜಟಾಪಟಿ ಬಗ್ಗೆ ಗೃಹಸಚಿವ ಪರಮೇಶ್ವರ್ ಉವಾಚ



ಜಿ.ಪರಮೇಶ್ವರ್

ಬೆಂಗಳೂರು: ಏನು ಮಾತುಕತೆ ನಡೆದಿದೆ ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಮಾತ್ರ ಗೊತ್ತಿದೆ. ಹೈಕಮಾಂಡ್ ಸುಮ್ಮನೆ ಇದ್ದರೆ ನಾವು ಏನೆಂದು ಅರ್ಥ ಮಾಡಿಕೊಳ್ಳುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಮಾರ್ಮಿಕವಾಗಿ ನುಡಿದಿದ್ದಾರೆ.

ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಎಂಬುದು ತೀರ್ಮಾನ ಆಗಿರುವ ವಿಚಾರ ಎಂದು ಡಾ.ಯತೀಂದ್ರ ಹೇಳಿಕೆ ವಿಚಾರವಾಗಿ ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ಅದು ಅವರ ವೈಯಕ್ತಿಕ ಹೇಳಿಕೆ. ನಾವು ಹೈಕಮಾಂಡ್‌ನ್ನು ಅವಲಂಬಿಸಿದ್ದೇವೆ. ಅಧಿಕಾರ ಒಪ್ಪಂದ ಆಗಿದೆ ಎಂದು ಯಾರು ಹೇಳಿದ್ದು, ಹೈಕಮಾಂಡ್‌ನವರು ಹೇಳಿದ್ದಾರಾ, ಅದನ್ನು ಹೈಕಮಾಂಡ್ ಹೇಳಬೇಕು. ಅದರ ಬಗ್ಗೆ ಡಿ.ಕೆ.ಶಿವಕುಮಾರ್ ಹೇಳಿರಬಹುದು. ಅದು ಅವರ ಅಭಿಪ್ರಾಯ. ಅವರಿಗೆ ಗೊತ್ತಿರುವ ವಿಚಾರ ನಮಗೆ ಗೊತ್ತಿಲ್ಲ ಎಂದರು.

ಒಪ್ಪಂದ ಆಗಿದ್ದರೆ ಹೈಕಮಾಂಡ್ ಹೇಳಬಹುದು ಅಥವಾ ಕ್ರಮ ತೆಗೆದುಕೊಳ್ಳಬಹುದು. ಹೈಕಮಾಂಡ್ ಏನೂ ಹೇಳದೆ, ಏನೂ ತೀರ್ಮಾನ ಮಾಡದೆ ನಮಗೆ ಕೇಳಿದರೆ ಪ್ರಯೋಜನ ಇಲ್ಲ. ಹೈಕಮಾಂಡ್‌ಗೆ ಏನು ಮಾಡಬೇಕು, ಯಾವ ರೀತಿ ನಿಭಾಯಿಸಬೇಕೆಂದು ಗೊತ್ತಿದೆ. ಅಂತಿಮ ನಿರ್ಧಾರ ಹೈಕಮಾಂಡ್ ಮಾಡಬೇಕು. ಅನೇಕರು ಹೇಳಿಕೆಗಳನ್ನು ಕೊಡಬಹುದು. ಅವು ಹೇಳಿಕೆಗಷ್ಟೇ ಸೀಮಿತ. ಹೈಕಮಾಂಡ್ ಕರೆ ಬಂದರೆ ಮಾತ್ರ ಎಲ್ಲವೂ ಇತ್ಯರ್ಥ ಆಗಲಿದೆ ಎಂದರು.

ಎಐ ತಂತ್ರಾಂಶ ಖರೀದಿ: ತಪ್ಪು, ದ್ವೇಷ ಸಂದೇಶಗಳ ನಿಯಂತ್ರಣ, ನಿಗಾಕ್ಕೆ 67 ಕೋಟಿ ವೆಚ್ಚದಲ್ಲಿ ಎಐ(ಕೃತಕ ಬುದ್ಧಿಮತ್ತೆ) ತಂತ್ರಾಂಶ ಖರೀದಿ ವಿಚಾರವಾಗಿ ಮಾತನಾಡಿ, ಸೈಬರ್ ಅಪರಾಧ ಜಾಸ್ತಿ ಆಗುತ್ತಿದೆ. ಸಾಮಾಜಿಕ ಮಾಧ್ಯಮಗಳ ಅವಲಂಬನೆ ಹೆಚ್ಚುತ್ತಿದೆ. ತಪ್ಪು, ದ್ವೇಷದ ಸಂದೇಶಗಳಿಂದ ಸಾವುಗಳಾಗುತ್ತಿವೆ. ಭಯೋತ್ಪಾದಕ ಚಟುವಟಿಕೆಗಳಿಗೂ ಪ್ರಚೋದನೆ ಆಗುತ್ತಿದೆ. ಇದನ್ನೆಲ್ಲ ನಿಯಂತ್ರಣ ಮಾಡುವ ಅಗತ್ಯವಿದೆ. ನಾವು ಏನೂ ಮಾಡುತ್ತಿಲ್ಲವೆಂದು ಜನ ಹೇಳುತ್ತಾರಲ್ಲವೇ ಅದಕ್ಕಾಗಿ ಅಗತ್ಯ ತಯಾರಿ. ಸಾಫ್ಟ್‌ವೇರ್‌ಗಳು ಬೇಕು, ಹಣ ಖರ್ಚು ಮಾಡಬೇಕು. ಬೇರೆ ಬೇರೆ ರಾಜ್ಯಗಳಲ್ಲಿ 200–300 ಕೋಟಿ ಖರ್ಚು ಮಾಡುತ್ತಿದ್ದಾರೆ. ಮೊಹಾಂತಿಯವರು ಇದಕ್ಕಾಗಿಯೇ 1 ಸಾವಿರ ಕೋಟಿಯ ಪ್ರಸ್ತಾವ ಸಲ್ಲಿಸಿದ್ದಾರೆ ಎಂದರು.

ಕೇಂದ್ರ ಸರ್ಕಾರದ ಬಜೆಟ್‌ನ ಒಳನೋಟಗಳು ಕುರಿತು ವಿಶೇಷ ಉಪನ್ಯಾಸ ಮಾಲೆ



ಮೈಸೂರು, ಫೆ. 8– ಭಾರತ ಪ್ರಪಂಚದ ಅತಿ ದೊಡ್ಡ ಜನಸಂಖ್ಯಾ ಭರಿತ ರಾಷ್ಟ್ರವಾಗಿದ್ದು ಜಿಡಿಪಿಯ ಗಾತ್ರದಲ್ಲಿ ನಾಲ್ಕನೇ ಅತಿದೊಡ್ಡ ದೇಶವಾಗಿದೆ. ಇದರ ನಿರ್ವಹಣೆಗಾಗಿ ಪ್ರತಿ ವರ್ಷ ಕೇಂದ್ರ ಸರ್ಕಾರವು ಆಯವ್ಯಯವನ್ನು ಮಂಡಿಸುತ್ತದೆ ಎಂದು ಹೆಚ್.ಡಿ ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ತುಳಸಿರಾಮ್.ಎಸ್ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಐಕ್ಯುಎಸಿ ಹಾಗೂ ಅರ್ಥಶಾಸ್ತ್ರ ವಿಭಾಗ ಜಂಟಿಯಾಗಿ 2026–27ರ ಕೇಂದ್ರ ಸರ್ಕಾರದ ಬಜೆಟ್‌ನ ಒಳನೋಟಗಳು ಎಂಬ ವಿಷಯದ ಕುರಿತು ಇಂದು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಈ ಸಾಲಿನ ಕೇಂದ್ರ ಬಜೆಟ್ ಅನ್ನು ಮೊಟ್ಟ ಮೊದಲ ಬಾರಿಗೆ ಕರ್ತವ್ಯ ಭವನದಲ್ಲಿ ಮಂಡಿಸಲಾಯಿತು. ಸದರಿ ಬಜೆಟ್ ಒಟ್ಟು ಗಾತ್ರ 53.47 ಲಕ್ಷ ಕೋಟಿಗಳಾಗಿದ್ದು. ಇದು ಮೂಲ ಸೌಕರ್ಯ ವಲಯಕ್ಕೆ ಮತ್ತು ರಕ್ಷಣಾ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡಿ ದೇಶದ ಅಭಿವೃದ್ದಿಗೆ ಒತ್ತು ನೀಡಲಾಗಿದೆ.

ಭಾರತದಲ್ಲಿ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಬರುವ ಆದಾಯ ಕೊರತೆಯಲ್ಲಿರುವುದರಿಂದ ಸರ್ಕಾರ ಅನಿವಾರ್ಯವಾಗಿ ಕೊರತೆ ಆಯವ್ಯಯವನ್ನು ಸಿದ್ದಪಡಿಸಬೇಕಾಗುತ್ತದೆ. ಸಂವಿಧಾನದ 112ನೇ ವಿಧಿಯ ಅನ್ವಯ ಭಾರತದ ಹಣಕಾಸು ಸಚಿವಾಲಯವು ಮುಂಬರುವ ಅರ್ಥಿಕ ಸಾಲಿಗೆ ಸಂಬಂಧಿಸಿದಂತೆ ವಾರ್ಷಿಕ ಹಣಕಾಸು ತಖ್ತೆಯನ್ನು ಸಿದ್ದಪಡಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ.ಶ್ರೀಹರ್ಷ ಬಿಎಸ್ ಮಾತನಾಡಿ, ಆದಿಮಾನವ ಆಧುನಿಕ ಮಾನವನಾದಾಗಿನಿಂದಲೂ ಆಯವ್ಯಯವನ್ನು ಸಿದ್ದಪಡಿಸುತ್ತ ಬಂದಿದ್ದಾನೆ ಈ ಬಾರಿಯ ಬಜೆಟ್‌ನಲ್ಲಿ ರಕ್ಷಣಾ ವಲಯಕ್ಕೆ ಅತಿ ಹೆಚ್ಚು ಅನುದಾನವನ್ನು ನೀಡಿದ್ದು ಕೊರತೆಯ ಬೃಹತ್ ಬಜೆಟ್ ಮಂಡನೆಯಾಗಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಸಿದ್ದರಾಜು, ಅಧ್ಯಾಪಕ ಸಲಹೆಗಾರರಾದ ಪ್ರೊ.ಲಾವಣ್ಯ, ಪ್ರೊ.ಪವಿತ್ರ, ವಿದ್ಯಾರ್ಥಿಗಳು, ಬೋಧಕರು ಹಾಜರಿದ್ದರು.

ರಸ್ತೆಬದಿಯಲ್ಲಿ ಚಲ್ಲಾಪಿಲ್ಲಿಯಾಗಿ ಬಿದ್ದಿರುವ ತ್ಯಾಜ್ಯ...



ಮೈಸೂರಿನ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ರಸ್ತೆಯ ಫುಟ್‌ಪಾತ್‌ನಲ್ಲಿ ಹಸಿ–ಒಣ ಕಸ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಸ್ವಚ್ಛ ಸರ್ವೇಕ್ಷಣಾ 2025–26ರಲ್ಲಿ ಮೈಸೂರು ನಗರವನ್ನು ಅಗ್ರ ಸ್ಥಾನಕ್ಕೇರಿಸಲು ಅರಿವು ಕಾರ್ಯಕ್ರಮಗಳ ಆಯೋಜನೆಯಲ್ಲಿ ನಿರತವಾಗಿರುವ ಮೈಸೂರು ಮಹಾನಗರ ಪಾಲಿಕೆಯು, ಅದರ ಜೊತೆಗೆ ನಗರದ ಅಲ್ಲಲ್ಲಿ ಹೀಗೆ ಬಿದ್ದಿರುವ ತ್ಯಾಜ್ಯ ತೆರವುಗೊಳಿಸಿ ಮತ್ತೆ ಅಲ್ಲಿ ಕಸ ಹಾಕದಂತೆ ನಾಗರಿಕರಲ್ಲಿ ಅರಿವು ಮೂಡಿಸಬೇಕಿದೆ.

ಮೂರು ಕಾರುಗಳ ಸರಣಿ ಅಪಘಾತ: ಇಬ್ಬರು ಸಾವು

ತುಮಕೂರು: ಬಾಣಾವರ ಗೇಟ್ ಬಳಿ ಭಾನುವಾರ(ಫೆ.8) ಸಂಜೆ ಮೂರು ಕಾರುಗಳ ನಡುವೆ ಅಪಘಾತ ಸಂಭವಿಸಿ, ಇಬ್ಬರು ಮೃತಪಟ್ಟು, ಐವರು ಗಾಯಗೊಂಡಿದ್ದಾರೆ. ತುಮಕೂರು ಯಾದವ ನಗರದ ನಿವಾಸಿ, ಗುಬ್ಬಿ ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಸುರೇಶ್ (55), ಮುರಳಿ(60) ಅಪಘಾತದಲ್ಲಿ ಮೃತಪಟ್ಟಿದ್ದು, ಸೈಬರ್ ಠಾಣೆಯ ಇನ್‌ಸ್ಪೆಕ್ಟರ್ ರಾಮಕೃಷ್ಣಪ್ಪ, ಜೆಡಿಎಸ್ ವಕ್ತಾರ ಜಯಣ್ಣ, ಮಂಜುನಾಥ್ ಸೇರಿದಂತೆ ಗಾಯಗೊಂಡಿರುವ ಐವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಮಕೃಷ್ಣಪ್ಪ ಸ್ನೇಹಿತರ ಜತೆಗೆ ಆದಿಚುಂಚನಗಿರಿಗೆ ಹೋಗಿ ಕುಣಿಗಲ್ ಮಾರ್ಗವಾಗಿ ವಾಪಸ್ಸಾಗುವಾಗ ಈ ಘಟನೆ ಸಂಭವಿಸಿದೆ. ತುಮಕೂರು ಕಡೆಯಿಂದ ತೆರಳುತ್ತಿದ್ದ ಕಾರು ಮುಂದೆ ಚಲಿಸುತ್ತಿದ್ದ ಮತ್ತೊಂದು ಕಾರಿಗೆ ಡಿಕ್ಕಿಯಾಗಿ ಎದುರುಗಡೆ ಬರುತ್ತಿದ್ದ ರಾಮಕೃಷ್ಣಪ್ಪ ಅವರಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ ಈ ಸಂಬಂಧ ಹೆಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇರಾನ್‌ನಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆಗೆ 6 ವರ್ಷ ಜೈಲು

ಟೆಹ್ರಾನ್: ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ನರ್ಗೆಸ್ ಮೊಹಮ್ಮದಿಗೆ ಇರಾನಿನ ನ್ಯಾಯಾಲಯವು ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಅಪರಾಧಗಳನ್ನು ನಡೆಸಲು ಗುಂಪುಗೂಡುವಿಕೆ ಮತ್ತು ಒಳಸಂಚು ನಡೆಸಿದ್ದಕ್ಕಾಗಿ ಅವರಿಗೆ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ದೇಶವನ್ನು ತೊರೆಯದಂತೆ ಎರಡು ವರ್ಷಗಳ ನಿಷೇಧವನ್ನೂ ಹೇರಲಾಗಿದೆ ಎಂದು ವಕೀಲೆ ಮೊಸ್ತಫಾ ನಿಲಿ ಹೇಳಿದ್ದಾರೆ.

ಇರಾನ್‌ನಲ್ಲಿ ಮರಣದಂಡನೆ ಮತ್ತು ಮಹಿಳೆಯರಿಗೆ ಕಡ್ಡಾಯ ವಸ್ತ್ರ ಸಂಹಿತೆಯ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ 53 ವರ್ಷದ ಮೊಹಮ್ಮದಿ ಪದೇ ಪದೆ ವಿಚಾರಣೆಗೆ ಒಳಗಾಗಿ, ಜೈಲುಪಾಲಾಗುತ್ತಿದ್ದಾರೆ. ಮೊಹಮ್ಮದಿ ಕಳೆದ ದಶಕದಲ್ಲಿ ಹೆಚ್ಚಿನ ಸಮಯವನ್ನು ಜೈಲಿನಲ್ಲಿ ಕಳೆದಿದ್ದಾರೆ. ಇರಾನ್‌ನಲ್ಲಿ ಮರಣದಂಡನೆ ವಿರುದ್ಧದ ಅಭಿಯಾನಕ್ಕಾಗಿ ಮೊಹಮ್ಮದಿ ಅವರಿಗೆ 2023ರಲ್ಲಿ ಶಾಂತಿ ಪ್ರಶಸ್ತಿ ಲಭಿಸಿತ್ತು.

ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿ ಕಸಮುಕ್ತ ಪರಿಸರಕ್ಕೆ ಹೊಸ ಮಾರ್ಗೋಪಾಯ!

ಅಧಿಕಾರಿ ವರ್ಗಕ್ಕೆ ವಿದ್ಯಾರ್ಥಿಗಳು, ಪರಿಸರವಾದಿಗಳು ಸಾಥ್



ಕೊಪ್ಪಲೂರು ಮುಖ್ಯರಸ್ತೆಯ ಕಸ ಸಂಗ್ರಹಣೆ ಸ್ಥಳದಲ್ಲಿ ಸ್ವಚ್ಛಗೊಳಿಸಿರುವ ಪೌರಕಾರ್ಮಿಕರು

ಮೈಸೂರು, ಫೆ.8(ಎಸ್‌ಪಿಎನ್)–ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ರಾತ್ರೋರಾತ್ರಿ ಎಲ್ಲೆಂದರಲ್ಲಿ ಉದ್ಭವವಾಗುತ್ತಿದ್ದ ಕಸರಾಶಿಗಳ ಹಾಟ್ ಸ್ಪಾಟ್‌ಗಳನ್ನು ಗುರುತಿಸಿ, ಮುಕ್ತಿ ದೊರಕಿಸುವ ಕಾರ್ಯಕ್ಕೆ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ, ಸಿಬ್ಬಂದಿ ಟೊಂಕಕಟ್ಟಿ ನಿಂತಿದ್ದು, ಇದಕ್ಕೆ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಪರಿಸರವಾದಿಗಳೂ ಕೈಜೋಡಿಸಿದ್ದಾರೆ.

ಜೆ.ಪಿ.ನಗರ ಲಾಸ್ಟ್ ಬಸ್‌ಸ್ಟಾಪ್ ಬಳಿ ಒಂದು ದಿನಕ್ಕೆ ಎರಡು ಲಾರಿ ಕಸ ಸಂಗ್ರಹವಾಗುತ್ತಿತ್ತು. ಆದರೆ, ಪ್ರತಿದಿನ ಕಸ ವಿಲೇವಾರಿ ಮಾಡಿದರೂ ಮತ್ತೆ ರಾತ್ರಿ ಸಮಯ ಇಲ್ಲವೇ ಯಾರೂ ಇಲ್ಲದ ವೇಳೆ ಸುತ್ತಮುತ್ತಲಿನ ನಿವಾಸಿಗಳು, ಈ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರು ಕಸದ ಪ್ಯಾಕೇಟ್, ಪ್ಲಾಸ್ಟಿಕ್ ಕವರ್‌ಗಳನ್ನು ತಂದು ಬಿಸಾಕಿ ಹೋಗುತ್ತಿದ್ದರು. ಜನರ ಈ ಅಭ್ಯಾಸಕ್ಕೆ ಕಡಿವಾಣ ಹಾಕಲು ಪಪಂ ಸಿಬ್ಬಂದಿ, ಈ ಜಾಗದಲ್ಲಿ ಕಸ ಹಾಕದಂತೆ ಜನರಲ್ಲಿ ಅರಿವು ಮೂಡಿಸುವ ಬ್ಯಾನರ್ ಅಳವಡಿಸುವುದರ ಜೊತೆಗೆ ಸುಣ್ಣ–ಬಣ್ಣ ಬಳಿದು ಹೊಸ ರೂಪ ನೀಡಿದ್ದಾರೆ.

ರಿಂಗ್‌ರೋಡ್‌ನ ಅಯ್ಯಜ್ಜನಹುಂಡಿ ಕೆರೆ ಸಮೀಪ ದಿನಕ್ಕೆ ಒಂದು ಲಾರಿ ಕಸ ಸಂಗ್ರಹವಾಗುತ್ತಿದ್ದು, ಈ ಜಾಗವನ್ನೂ ಕ್ಲೀನ್ ಮಾಡಿ, ಕಸ ಹಾಕದಂತೆ ಜನರಲ್ಲಿ ಜಾಗೃತಿ ಮೂಡಿಸುವ ಬ್ಯಾನರ್ ಅಳವಡಿಸಿದ್ದಾರೆ. ಅಂತೆಯೇ ಮೈಸೂರು–ಮಾನಂದವಾಡಿ ರಸ್ತೆಯ ಇಂಡಿಯನ್ ಪೆಟ್ರೋಲ್ ಬಂಕ್ ಸಮೀಪ, ಪರಸಯ್ಯನ ಹುಂಡಿ ಸ್ಮಶಾನದ ಬಳಿ, ರಮಾಬಾಯಿ ನಗರ ಹಾಗೂ ಸಿದ್ದಲಿಂಗೇಶ್ವರ ಬಡಾವಣೆ ಸಂಪರ್ಕಿಸುವ ಜಂಕ್ಷನ್ ಬಳಿ ಹೀಗೆ ಒಟ್ಟು ಐದು ಸ್ಥಳದಲ್ಲಿ ಕಸದ ರಾಶಿ ಬೀಳುವ ಹಾಟ್ ಸ್ಪಾಟ್ ಎಂದು ಗುರುತಿಸಿ, ಆ ಜಾಗಗಳನ್ನು ಸಂಪೂರ್ಣ ಕ್ಲೀನ್ ಮಾಡಿ, ಕಸ ಹಾಕದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಬ್ಯಾನರ್ ಕಟ್ಟುವುದರ ಜೊತೆಗೆ ಈ ಜಾಗದಲ್ಲಿ ಸಿಕ್ಕ ತ್ಯಾಜ್ಯ ಸಾಮಾಗ್ರಿಗಳಿಗೆ ಬಣ್ಣ ಬಳಿದು ಅಲಂಕರಿಸಲಾಗಿದೆ.

ಐದು ಗ್ರಾಮದಲ್ಲೂ ಕಸ ಸಂಗ್ರಹಕ್ಕೆ ಆದ್ಯತೆ: ಶ್ರೀರಾಂಪುರ ಪಪಂ ವ್ಯಾಪ್ತಿಗೆ ಬರುವ ಪರಸಯ್ಯನ ಹುಂಡಿ, ಶ್ರೀರಾಂಪುರ, ಕೊಪ್ಪಲೂರು ಗ್ರಾಮ, ಲಿಂಗಾಂಬುದಿ ಪಾಳ್ಯ ಮಹದೇವಪುರದಲ್ಲೂ ಮನೆಮನೆ ಕಸ ಸಂಗ್ರಹಕ್ಕೆ ಆಟೋ ಟಿಪ್ಪರ್‌ಗಳನ್ನು ಪ್ರತಿದಿನ ನಿಯೋಜಿಸಲಾಗಿದೆ ಎನ್ನುತ್ತಾರೆ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯ ಅಧಿಕಾರಿ ಎಚ್.ಎಂ.ಸುರೇಶ್.

ಹೊಸ ಬಡಾವಣೆಗಳಲ್ಲೂ ಕಸ ಸಂಗ್ರಹಕ್ಕೆ ಒತ್ತು: ಶ್ರೀರಾಂಪುರ ಪಪಂ ವ್ಯಾಪ್ತಿಗೆ 84 ಹೊಸ ಬಡಾವಣೆಗಳು ಸೇರ್ಪಡೆಗೊಂಡಿದ್ದು, ಈ ಬಡಾವಣೆಗಳಿಂದಲೂ ಕಸ ಸಂಗ್ರಹಕ್ಕೆ ಒತ್ತು ನೀಡಲಾಗಿದೆ. ಜನಸಂಖ್ಯೆ ಆಧಾರದ ಮೇಲೆ ಎ,ಬಿ,ಸಿ ಆಧಾರದಲ್ಲಿ ಕಸ ಸಂಗ್ರಹಣೆಗೆ ಆದ್ಯತೆ ನೀಡಿದ್ದು, 10ಕ್ಕೂ ಕಡಿಮೆ ಮನೆಗಳಿರುವ ಬಡಾವಣೆಗೆ ಎರಡು ಮೂರು ದಿನಕ್ಕೆ, 20ಕ್ಕೂ ಅಧಿಕ ಮನೆಗಳಿರುವ ಕಡೆ ದಿನಬಿಟ್ಟು ದಿನ ಕಸ ಸಂಗ್ರಹಕ್ಕೆ ಆದ್ಯತೆ ನೀಡಲಾಗಿದೆ. ಹೆಚ್ಚು ಮನೆಗಳಿರುವ ರಮಾಬಾಯಿನಗರ, ಸಿದ್ದಲಿಂಗೇಶ್ವರ ಬಡಾವಣೆ, ಗೌತಮ ನಗರ, ಜೆಎಸ್‌ಎಸ್ ಬಡಾವಣೆ, ಬೆಮೆಲ್ ಬಡಾವಣೆ, ಎಸ್‌ಬಿಎಂ ಬಡಾವಣೆ, ಆರ್.ಕೆ.ನಗರ, ಭವಾನಿನಗರ, ಗಾಯಿತ್ರಿ ನಗರ, ಎಲ್‌ವಿಆರ್ ಲೇಔಟ್ ರೈಲ್ವೆ ಬಡಾವಣೆ ಸೇರಿದಂತೆ 84 ಬಡಾವಣೆಗಳಲ್ಲಿ ಕಸ ಸಂಗ್ರಹಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎನ್ನುತ್ತಾರೆ ಮುಖ್ಯ ಅಧಿಕಾರಿ ಸುರೇಶ್.

ರಿಂಗ್ ರೋಡ್‌ನ ರಾಶಿ ರಾಶಿ ಕಸಕ್ಕೆ ಮುಕ್ತಿ: ಶ್ರೀರಾಂಪುರ ಪಪಂ ವ್ಯಾಪ್ತಿಗೆ ಸೇರುವ ರಿಂಗ್ ರೋಡ್‌ನಲ್ಲಿ ಅಯ್ಯಜ್ಜನಹುಂಡಿ ಕೆರೆ ಹಾಗೂ ದಟ್ಟಗಳ್ಳಿ ಬಡಾವಣೆಯಿಂದ ಆರಂಭವಾಗುವ ರಿಂಗ್‌ರೋಡ್, ಜೆಪಿ ನಗರ ಲಾಸ್ಟ್ ಬಸ್‌ಸ್ಟಾಪ್‌ನವರೆಗೂ ರಿಂಗ್ ರೋಡ್ ನಮ್ಮ ಪಪಂ ವ್ಯಾಪ್ತಿಗೆ ಬರುತ್ತದೆ. ಈ ವ್ಯಾಪ್ತಿಯಲ್ಲಿ ಯಾರೇ ಕಸ ಸುರಿದರೂ ಜಸ್ಟ್ ಫೋಟೋ ಕಳುಹಿಸಿದರೂ ಒಂದೇ ದಿನದಲ್ಲಿ ಕಸ ವಿಲೇವಾರಿ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.



